ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 19 ಶುಕ್ರವಾರ 2024

₹4

ಸಂಪುಟ: 45 | ಸಂಚಿಕೆ: 94 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಯುವಜನತೆಯಲ್ಲಿ ಹೆಚ್ಚುತ್ತಿರುವ ಆತ್ಮಹತ್ಯೆ ಮನೋಭಾವನೆ

ಈ ಆತಂಕಕಾರಿ ಬೆಳವಣಿಗೆ ತಡೆಗೆ ಕರೆ



ಮೈಸೂರಿನ ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಅಧಿಕಾರಿಗಳ ಪುನಶ್ಚೇತನ ಕಾರ್ಯಾಗಾರವನ್ನು ಎನ್‌ಎಸ್‌ಎಸ್ ರಾಜ್ಯಾಧಿಕಾರಿ ಡಾ.ಪ್ರತಾಪ್ ಲಿಂಗಯ್ಯ ಉದ್ಘಾಟಿಸಿದರು.

ಮೈಸೂರು, ಜು.18– ಯುವಜನತೆಯಲ್ಲಿ ಹೆಚ್ಚುತ್ತಿರುವ ಆತ್ಮಹತ್ಯೆ ಮನೋಭಾವನೆಯನ್ನು ತಡೆಯಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಎನ್‌ಎಸ್‌ಎಸ್ ರಾಜ್ಯಾಧಿಕಾರಿ ಡಾ.ಪ್ರತಾಪ್ ಲಿಂಗಯ್ಯ ಕರೆ ನೀಡಿದರು.

ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಮೈಸೂರು, ಮಂಗಳೂರು, ಹಾಸನ ವಿಭಾಗಗಳ ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿಗಳ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದರು.

ಅಧ್ಯಕ್ಷತೆಯನ್ನು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ)ಮೈಸೂರು ಜಿಲ್ಲೆಯ ಉಪನಿರ್ದೇಶಕ ಮರಿಸ್ವಾಮಿ ವಹಿಸಿದ್ದರು. ಪದವಿ ಪೂರ್ವ ಶಿಕ್ಷಣ ಇಲಾಖೆ ರಾಜ್ಯ ಸಂಯೋಜನಾಧಿಕಾರಿ ಡಾ.ರಮೇಶ್ ಗುಬ್ಬಿಗೂಡು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಮಾರಂಭದಲ್ಲಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ವಿಶ್ವನಾಥ್, ಪ್ರಾಂಶುಪಾಲ ಸಿದ್ದಯ್ಯ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಭಾರತ ಸರ್ಕಾರದ ಯುವಜನ ಸೇವಾ ಅಧಿಕಾರಿ ವೈ.ಎಸ್.ಉಪ್ಪಿನ ಪ್ರಸ್ತುತ ಸಾಲಿನಲ್ಲಿ ಕಾರ್ಯಕ್ರಮ ಅಧಿಕಾರಿಗಳು ಮಾಡಿಕೊಳ್ಳಬೇಕಾದ ಕಾರ್ಯಕ್ರಮಗಳ ತಯಾರಿ ಕುರಿತು ಉಪನ್ಯಾಸ ನೀಡಿದರು.

ನಂಜನಗೂಡು ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಲಯನ್ ಸಿ.ಆರ್.ದಿನೇಶ್, ಕಾರ್ಯಕ್ರಮ ಅಧಿಕಾರಿಗಳು ಕಾರ್ಯಕ್ರಮಗಳನ್ನು ಆಯೋಜಿಸುವ ಮತ್ತು ವಿವಿಧ ಇಲಾಖೆಗಳನ್ನು ಸಂಯೋಜಿಸಿಕೊಳ್ಳುವ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮ ಅಧಿಕಾರಿಗಳಿಗೆ PFMS ಕುರಿತಾಗಿ ಎಸ್.ಪಿ.ಕ್ಯಾತೇಗೌಡ ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ವಿಭಾಗದ ವಿಭಾಗ ಅಧಿಕಾರಿ ಡಾ.ರವಿ ಟಿ.ಕೆ, ಮಂಗಳೂರು ವಿಭಾಗ ಅಧಿಕಾರಿ ಸವಿತಾ ಎರ್ಮಾಳ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಕ್ರೀಡಾ ಚಟುವಟಿಕೆಗಳ ರೂಪಿಸಿ

- ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ
- ಮೈವಿವಿ ಕ್ರೀಡಾ ಸಮಿತಿ ಸಭೆ-ಆಯವ್ಯಯ ಪ್ರಸ್ತಾವನೆ ಮಂಡನೆ



ಮೈಸೂರು ವಿಶ್ವವಿದ್ಯಾನಿಲಯ ಕ್ರೀಡಾ ಸಮಿತಿಯ ಸಭೆಯು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆಯಿತು. ಈ ಸಂದರ್ಭದಲ್ಲಿ ಕುಲಸಚಿವೆ ವಿ.ಆರ್.ಶೈಲಜಾ, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ವೆಂಕಟೇಶ್ ಹಾಗೂ ಸಮಿತಿಯ ಸದಸ್ಯರು ಉಪಸ್ಥಿತರಿದ್ದಾರೆ.

ಮೈಸೂರು, ಜು.18– ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಕ್ರೀಡಾ ಚಟುವಟಿಕೆಗಳನ್ನು ರೂಪಿಸಿ ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ನೀಡಿದರು.

ಸ್ಪೋರ್ಟ್ಸ್ ಪೆವಿಲಿಯನ್‌ನ ದೈಹಿಕ ಶಿಕ್ಷಣ ವಿಭಾಗದಲ್ಲಿ ಗುರುವಾರ ನಡೆದ ಮೈಸೂರು ವಿಶ್ವವಿದ್ಯಾನಿಲಯ ಕ್ರೀಡಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಿಂದೆ ವಿವಿಗೆ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ವ್ಯಾಪ್ತಿ ಇತ್ತು. ಆದರೆ ಈಗ ಜಿಲ್ಲೆಗೊಂದು ವಿವಿ ಆಗಿರುವುದರಿಂದ ನಮ್ಮ ವಿವಿ ಒಂದು ಜಿಲ್ಲೆಗೆ ಮಾತ್ರ ಸೀಮಿತವಾಗಿದೆ. ಆದ್ದರಿಂದ ವಿದ್ಯಾರ್ಥಿಗಳ ಪ್ರವೇಶಾತಿ ಕುಸಿದಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಚಟುವಟಿಕೆಗಳನ್ನು ನಡೆಸಬೇಕು ಎಂದರು.

ಸರ್ಕಾರದಿಂದ ನಮಗೆ ಕ್ರೀಡೆಗೆ ಯಾವುದೇ ಅನುದಾನ ಬಾರದಿದ್ದರೂ ವಿವಿಯು ಒಂದು ಕೋಟಿ ರೂ. ವೆಚ್ಚ ಮಾಡುತ್ತಿದೆ. ಆದರೆ ಈಜುಕೊಳ, ಮೈದಾನಗಳ ಬಾಡಿಗೆಯಿಂದ ನಮಗೆ 25 ಲಕ್ಷ ರೂ. ಮಾತ್ರ ಬರುತ್ತಿದೆ. ವಿದ್ಯಾರ್ಥಿಗಳಿಂದ ಕ್ರೀಡಾ ಶುಲ್ಕ ಕೂಡ ಸರಿಯಾಗಿ ವಸೂಲಾಗುತ್ತಿಲ್ಲ. ಇದನ್ನೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮುಂದುವರೆಯಬೇಕು ಎಂದು ಸೂಚಿಸಿದರು.

ಕುಲಸಚಿವೆ ವಿ.ಆರ್.ಶೈಲಜಾ ಮಾತನಾಡಿ, ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಬೇಕು ಎಂದು ಸೂಚಿಸಿದರು. ಅಲ್ಲದೇ ವಿವಿಯ ಕ್ರೀಡಾಪಟುಗಳ ಸಾಧನೆಯ ಬಗ್ಗೆಗೂ ದಾಖಲಾತಿ ಮಾಡಬೇಕು. ಇದರಿಂದ ನಾವು ಮಾಡುವ ವೆಚ್ಚದಿಂದ ಯಾವ ರೀತಿ ಲಾಭವಾಗುತ್ತದೆ ಎಂಬುದು ಗೊತ್ತಾಗುತ್ತದೆ ಎಂದರು.

ಹಣಕಾಸು ಅಧಿಕಾರಿ ಕೆ.ಎಸ್. ರೇಖಾ ಮಾತನಾಡಿ, ಕ್ರೀಡಾ ತಂಡಗಳನ್ನು ಕಳುಹಿಸುವಾಗ ಮುಂಗಡ ಪಡೆಯುವಾಗಲೂ ನೀತಿ ನಿಯಮ ಅನುಸರಿಸಬೇಕು ಎಂದರು.

ಸಿಂಡಿಕೇಟ್ ಸದಸ್ಯರಾದ ಮಹದೇಶ್, ಪ್ರೊ.ಶಬ್ಬೀರ್ ಮೊಹಮ್ಮದ್ ಮುಸ್ತಾಫಾ, ಡಾ.ಜೆ.ಶಿಲ್ಪಾ, ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಡಾ.ಎಂ.ಚಂದ್ರಕುಮಾರ್, ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಬಿ.ವಿ.ಗಣೇಶ್ ಮಾತನಾಡಿ, ಸಲಹೆಗಳನ್ನು ನೀಡಿದರು.

ಸಮಿತಿ ಸದಸ್ಯೆ ಮಾನಸ ಗಂಗೋತ್ರಿ ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕಿ ಎಚ್.ಎಸ್.ಅಪರ್ಣಾ, ಪಿಎಂಇಬಿ ನಿರ್ದೇಶಕ ಪ್ರೊ.ಎನ್.ನಾಗರಾಜ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ. ವೆಂಕಟೇಶ್, 2023–24ನೇ ಸಾಲಿನ ಆಯವ್ಯಯದ ಪ್ರಸ್ತಾವನೆ ಮಂಡಿಸಿದರು. ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಸಭೆಗೆ ಅಗತ್ಯ ಮಾಹಿತಿ ಒದಗಿಸಿದರು.

ಪ್ರೊಬೆಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ತಾಯಿ ಮನೋರಮಾ ಬಂಧನ

ರಾಯಗಢ: ವಿವಾದಿತ ಪ್ರೊಬೇಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರ ತಾಯಿ ಮನೋರಮಾ ಖೇಡ್ಕರ್ ಅವರನ್ನು ಪುಣೆ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಪುಣೆಯ ಮುಲ್ಶಿ ತಾಲೂಕಿನಲ್ಲಿ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಮನೋರಮಾ ಭದ್ರತಾ ಸಿಬ್ಬಂದಿಯೊಂದಿಗೆ ಬಂದೂಕಿನಿಂದ ರೈತನಿಗೆ ಬೆದರಿಕೆ ಹಾಕಿರುವ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಲಾಗಿದೆ.

ರೈತ ಪಂಡರಿನಾಥ್ ಪಾಸಲ್ಕರ್ (65) ನೀಡಿದ ದೂರಿನ ಆಧಾರದ ಮೇಲೆ ಪುಣೆ ಗ್ರಾಮಾಂತರದ ಪೌಡ್ ಪೊಲೀಸ್ ಠಾಣೆಯಲ್ಲಿ ಪೂಜಾ ಅವರ ತಾಯಿ ಮನೋರಮಾ, ತಂದೆ ದಿಲೀಪ್ ಖೇಡ್ಕರ್, ಹವೇಲಿಯ ಅಂಬಿ ಗ್ರಾಮದ ಅಂಬಾದಾಸ್ ಖೇಡ್ಕರ್ ಮತ್ತು ಇತರ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಎಫ್‌ಐಆರ್ ದಾಖಲಾದಾಗಿನಿಂದ ಪುಣೆ ಗ್ರಾಮಾಂತರ ಪೊಲೀಸರು ಮನೋರಮಾ ಅವರ ಹುಡುಕಾಟ ನಡೆಸುತ್ತಿದ್ದರು. ಮನೋರಮಾ ಖೇಡ್ಕರ್ ಅವರನ್ನು ರಾಯಗಢ ಜಿಲ್ಲೆಯ ಮಹಾಡ್‌ನಿಂದ ಬಂಧಿಸಿ, ಕರೆತರಲಾಗಿದ್ದು, ಪ್ರಾಥಮಿಕ ವಿಚಾರಣೆ ಬಳಿಕ ಬಂಧಿಸಲಾಗುವುದು ಎಂದು ಪುಣೆ ಗ್ರಾಮಾಂತರ ಎಸ್‌ಪಿ ಪಂಕಜ್ ದೇಶಮುಖ್ ತಿಳಿಸಿದ್ದಾರೆ

ನೂತನ ರೋಟರಿ ಮೈಸೂರು ಎಲೈಟ್ ಉದ್ಘಾಟನೆ



ಮೈಸೂರಿನ ಜೆ.ಪಿ.ನಗರದಲ್ಲಿ ರೋಟರಿ ಮೈಸೂರು ಎಲೈಟ್ ಅನ್ನು ಜಿಲ್ಲಾ ಗವರ್ನರ್ ಎಚ್.ಆರ್.ಕೇಶವ್ ಉದ್ಘಾಟಿಸಿ, ಪ್ರಮಾಣ ಪತ್ರ ವಿತರಿಸಿದರು.

ಮೈಸೂರು, ಜು.18–ರೋಟರಿ ಅಂತರ ರಾಷ್ಟ್ರೀಯ ಜಿಲ್ಲೆ 3181 ಅಡಿಯಲ್ಲಿ ಜೆ.ಪಿ. ನಗರದಲ್ಲಿ ರೋಟರಿ ಮೈಸೂರು ಎಲೈಟ್ ಅನ್ನು ಜಿಲ್ಲಾ ಗವರ್ನರ್ ಎಚ್.ಆರ್. ಕೇಶವ್ ಉದ್ಘಾಟಿಸಿದರು.

ಕ್ಲಬ್ ರೋಟರಿ ವಿಜಯನಗರ ಪ್ರಾಯೋಜಕತ್ವದಲ್ಲಿ ಪ್ರಾರಂಭವಾಗಿದ್ದು, ನೂತನ ಕ್ಲಬ್ ಅಧ್ಯಕ್ಷ ಎಂ.ರವಿ ಹಾಗೂ ಕಾರ್ಯದರ್ಶಿ ಸುರೇಶ್ ಬಸಪ್ಪ, ಕ್ಲಬ್ ಸಂಸ್ಥಾಪಕ ಮಾರ್ಗದರ್ಶಕ ಎಚ್.ಎಂ.ಹರೀಶ್ ಇದ್ದರು.

ಒಟ್ಟು 33 ಸದಸ್ಯರಿರುವ ಈ ಕ್ಲಬ್‌ಗೆ 2024–25ನೇ ಸಾಲಿನ ಜಿಲ್ಲಾ ಗವರ್ನರ್ ವಿಕ್ರಂದತ್ ಅವರು ಎಲ್ಲಾ ಸದಸ್ಯರಿಗೂ ರೋಟರಿ ಕಿಟ್‌ಗಳನ್ನು ನೀಡಿ, ಪ್ರಮಾಣವಚನ ಬೋಧಿಸಿದರು.

2025–26ನೇ ಸಾಲಿನ ಜಿಲ್ಲಾ ಗವರ್ನರ್ ರಾಮಕೃಷ್ಣ ಅವರು ಕ್ಲಬ್‌ನ ರೋಟರಿ ಫ್ಲಾಗ್ ಅನ್ನು ಬಿಡುಗಡೆ ಮಾಡಿದರು. ಕ್ಲಬ್ ವಿಸ್ತರಣೆ ಕಾರ್ಯಾಧ್ಯಕ್ಷ ಡಾ. ಶಿವಪ್ರಸಾದ್ ಕ್ಲಬ್‌ನ ಬುಲೆಟಿನ್ ಸ್ಪಂದನಾ ಬಿಡುಗಡೆ ಮಾಡಿದರು. ಕಾರ್ಯದರ್ಶಿ ಸುಕೀಶ್ ಬಸಪ್ಪ ವಂದಿಸಿದರು.

ಸಾರ್ಥಕ ಬದುಕಿಗೆ ವಚನ ಸಾಹಿತ್ಯ ಸಹಕಾರಿ

ಮರಿಮಲ್ಲಪ್ಪ ಕಾಲೇಜು ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ ಅಭಿಮತ



ಮೈಸೂರಿನ ಅಗ್ರಹಾರದ ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬ್ಯಾಗ್, ವಚನದೀವಿಗೆ ಪ್ರಮಾಣಪತ್ರ ಮತ್ತು ವಚನ ಪುಸ್ತಕ ವಿತರಿಸಲಾಯಿತು.

ಮೈಸೂರು,ಜು.18–ಸಾರ್ಥಕ ಬದುಕಿಗೆ ವಚನ ಸಾಹಿತ್ಯ ಸಹಕಾರಿ ಎಂದು ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಅನ್ನಪೂರ್ಣಮ್ಮ ಮತ್ತು ಪ್ರೇಮ ಪ್ರಭುಸ್ವಾಮಿ ದತ್ತಿ ಅಂಗವಾಗಿ ಮೈಸೂರಿನ ಅಗ್ರಹಾರದ ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ 102ನೇ ಶಾಲೆಗಳೆಡೆಗೆ ವಚನಗಳ ನಡಿಗೆ ಮತ್ತು ಮಂಗಳ ಮುದ್ದುಮಾದಪ್ಪ ಅವರ ದಾಸೋಹದ ಅಂಗವಾಗಿ 25ನೇ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಬ್ಯಾಗ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಸವಣ್ಣನವರ ಸಪ್ತಸೂತ್ರಗಳ ವಚನವನ್ನು ಎಳೆಯ ವಯಸ್ಸಿನಲ್ಲಿ ಅಳವಡಿಸಿಕೊಂಡು ಅದರಂತೆ ನಡೆದರೆ ಚಾರಿತ್ರ್ಯ ಶುದ್ಧವಾಗಿ ವಿದ್ಯಾರ್ಥಿ ಜೀವನಕ್ಕೆ ಮೌಲ್ಯ ಬರುತ್ತದೆ ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಮಾತನಾಡಿ, ಬಸವಣ್ಣನವರು ತಾವು ಮಾತ್ರ ಬೆಳೆಯದೆ ಸಕಲ ಜನಾಂಗವನ್ನು ಬೆಳೆಸಲು ಪ್ರಯತ್ನಿಸಿದುದರಿಂದ ವಿಶ್ವಗುರುವಾದರು. ಶರಣರ ವಚನಗಳು ಬದುಕಿಗೆ ದಾರಿದೀಪವಾಗಿದ್ದು ಅವುಗಳನ್ನು ಕೇವಲ ಅಧ್ಯಯನಕ್ಕೆ ಮಾತ್ರ ಸೀಮಿತಗೊಳಿಸದೆ ಬದುಕನ್ನು ರೂಪಿಸಿಕೊಳ್ಳಲು ಅಳವಡಿಸಿಕೊಂಡಿದ್ದೇ ಆದರೆ ಆದರ್ಶ ವ್ಯಕ್ತಿಗಳಾಗಿ ದೇಶಕ್ಕೆ ಕೀರ್ತಿ ತರುತ್ತಾರೆ ಎಂದರು.

ನಂತರ ವಚನ ವಾಚನ ಮಾಡಿದ 28 ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ವಚನದೀವಿಗೆ ಪ್ರಮಾಣಪತ್ರ ಮತ್ತು ವಚನ ಪುಸ್ತಕ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ದತ್ತಿ ದಾಸೋಹಿ ಪ್ರೇಮ ಪ್ರಭುಸ್ವಾಮಿ, ಮೈಸೂರು ಜಿಲ್ಲಾ ಶರಣು ವಿಶ್ವವಚನ ಫೌಂಡೇಷನ್ ಅಧ್ಯಕ್ಷ ಅನಿಲ್‌ಕುಮಾರ್ ವಾಜಂತ್ರಿ, ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ, ಉಪಾಧ್ಯಕ್ಷರಾದ ಶಿವಮಠ ಉಮಾಪತಿ, ಉಷಾ ನಾಗೇಶ್, ಕಾರ್ಯದರ್ಶಿ ಅನಿತಾ, ನಾಗರಾಜ್, ಮುಖ್ಯ ಶಿಕ್ಷಕ ಟಿ.ಎಸ್.ಪ್ರಭುಸ್ವಾಮಿ, ಶಿಕ್ಷಕರಾದ ಶೀಲ, ಶಿವಮ್ಮ ಉಪಸ್ಥಿತರಿದ್ದರು.

ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆ



ಮೈಸೂರು,ಜು.18–ಮೈಸೂರು ಮಹಾನಗರಪಾಲಿಕೆ ಮತ್ತು ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜುಲೈ 18ರಿಂದ 31 ರವರೆಗೆ ಮೊಬೈಲ್ ಆ್ಯಪ್ ಮೂಲಕ ಶಾಲೆಗೆ ದಾಖಲಾಗಿ ಶಾಲಾ ಬಿಟ್ಟ ಮಕ್ಕಳು ಹಾಗೂ ಶಾಲೆಗೆ ದಾಖಲಾಗದೆ ಇರುವ ಮಕ್ಕಳ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ. ಈ ಹಿನ್ನೆಲೆ ನಗರಪಾಲಿಕೆಯ ವಲಯ ಕಚೇರಿ 1ರಿಂದ 9ರವರೆಗೆ ಎಲ್ಲ 65 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಕಂದಾಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಂದಾಯ ಪರಿಶೀಲಕರು, ಆರೋಗ್ಯ ನಿರೀಕ್ಷಕರ ತಂಡಗಳನ್ನು ರಚಿಸಲಾಗಿರುತ್ತದೆ. ಈ ತಂಡದಲ್ಲಿ ಶಾಲಾ ಶಿಕ್ಷಣ ಇಲಾಖೆ ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತದೆ.

ಸದರಿ ತಂಡಗಳು ಆಯಾಯ ವಲಯ ಕಚೇರಿಗಳ ವ್ಯಾಪ್ತಿಯಲ್ಲಿರುವ ವಾರ್ಡ್‌ಗಳ ಪ್ರತಿ ಮನೆಗೆ ಭೇಟಿ ನೀಡಿ 6ರಿಂದ 16 ವರ್ಷದ ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆಯನ್ನು ಮೊಬೈಲ್ ಅಪ್ಲಿಕೇಶನ್ ಆ್ಯಪ್ ಮೂಲಕ ಮಾಡಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ಪಡಿತರ ಚೀಟಿ, ಆಧಾರ್ ಕಾರ್ಡ್ ಮತ್ತು ಎಸ್‌ಎ ಟಿಎಸ್ ಐಡಿ ದಾಖಲೆಗಳನ್ನು ಪಡೆದು ಮೊಬೈಲ್ ಆ್ಯಪ್‌ನಲ್ಲಿ ವಿವರಗಳನ್ನು ನಮೂದಿಸ ಬೇಕಾಗಿದ್ದು, ಸದರಿ ತಂಡಗಳು ಸಮೀಕ್ಷೆ ಮಾಡಲು ಮನೆ ಮನೆಗೆ ಬಂದಾಗ ಪಡಿತರ ಚೀಟಿ ಆಧಾರ್ ಕಾರ್ಡ್ ಮತ್ತು ಎಸ್‌ಎಟಿಎಸ್ ಐಡಿ ದಾಖಲೆಗಳನ್ನು ನೀಡಿ ಸಾರ್ವಜನಿಕರು ಸಹಕರಿಸಬೇಕು ಎಂದು ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಶರೀಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿಶ್ವ ಜನಸಂಖ್ಯಾ ದಿನಾಚರಣೆ

ಮೈಸೂರು, ಜು.18– 2024–25ನೇ ಸಾಲಿನ ಜಿಲ್ಲಾ ಮಟ್ಟದ ವಿಶ್ವ ಜನಸಂಖ್ಯಾ ದಿನಾಚರಣೆಯನ್ನು ಜುಲೈ 20ರಂದು ಹೆಚ್.ಡಿ.ಕೋಟೆಯ ಅಂಬೇಡ್ಕರ್ ಭವನದಲ್ಲಿ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ

ನನ್ನಿಂದ ಯಾವ ತಪ್ಪು ಆಗಿಲ್ಲ; ನನ್ನ ಬಗ್ಗೆ ಸಂಶಯ ಬೇಡ

- ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವರಿಕೆ
- ಬಿಜೆಪಿ ಜೆಡಿಎಸ್ ನಾಯಕರು ನನ್ನ ವಿರುದ್ಧ ಷಡ್ಯಂತರ ನಡೆಸುತ್ತಿದ್ದಾರೆ



ಬೆಂಗಳೂರು,ಜು.18– ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಹಗರಣಗಳನ್ನು ಮುಂದಿಟ್ಟು ವಿಪಕ್ಷಗಳು ನಡೆಸುತ್ತಿರುವ ಹೋರಾಟ ಹಾಗೂ ಸ್ವಪಕ್ಷದ ಶಾಸಕರ ಅಸಮಾಧಾನದ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಬೆಂಗಳೂರಿನ ಖಾಸಗಿ ಹೋಟೆಲಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಪ್ರಾಥಮಿಕವಾಗಿ ಮಾತನಾಡಿದ ಮುಖ್ಯಮಂತ್ರಿಗಳು, ತನ್ನ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಷಡ್ಯಂತ್ರ ನಡೆಸುತ್ತಿದ್ದಾರೆ. ಅದರಲ್ಲೂ ಬಿಜೆಪಿಯ ಬಿ.ಎಲ್. ಸಂತೋಷ್ ಸೇರಿದಂತೆ ಮೂವರು ನಾಯಕರು ಸರ್ಕಾರವನ್ನು ಅಸ್ಥಿರಗೊಳಿಸುವ ನಿಟ್ಟಿನಲ್ಲಿ ತಂತ್ರ ಹೆಣೆಯುತ್ತಿದ್ದಾರೆ. ಇದಕ್ಕೆಲ್ಲ ನಮ್ಮ ಶಾಸಕರು ಬಲಿಯಾಗಬಾರದು ಎಂದರು.

ಮುಡಾದಲ್ಲಿ ನಮ್ಮ ಕುಟುಂಬದಿಂದ ಯಾವುದೇ ರೀತಿಯ ತಪ್ಪು ನಡೆದಿಲ್ಲ. ಎಲ್ಲವೂ ಕಾನೂನು ವ್ಯಾಪ್ತಿಯಲ್ಲೇ ನಡೆದಿದೆ. ಇದರ ಬಗ್ಗೆ ಯಾವುದೇ ಶಾಸಕರಿಗೂ ಸಂಶಯ ಬೇಡ ಎಂದ ಸಿದ್ದರಾಮಯ್ಯ, ಮುಡಾದಿಂದ ತಮ್ಮ ಪತ್ನಿ ಹೆಸರಿನಲ್ಲಿ ಪಡೆದಿದ್ದ ನಿವೇಶನಗಳಿಗೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಪ್ರದರ್ಶಿಸಿದರಲ್ಲದೆ, ಅದರಲ್ಲಿನ ಪ್ರಮುಖ ಅಂಶಗಳನ್ನು ಶಾಸಕರಿಗೆ ಓದಿ ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲೂ ಸರ್ಕಾರದಿಂದ ಯಾವುದೇ ತಪ್ಪು ನಡೆದಿಲ್ಲ. ಆದರೆ ಬಿಜೆಪಿ ಮತ್ತು ಜೆಡಿಎಸ್‌ನವರು ಅಪ ಪ್ರಚಾರ ನಡೆಸುವ ಮೂಲಕ ಹಾಗೂ ಪ್ರಕರಣವನ್ನು ತಿರುಚಿ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ. ಹೀಗಾಗಿ ಬಿಜೆಪಿ ಮತ್ತು ಜೆಡಿಎಸ್ ವಿರುದ್ಧ ಸದನದ ಒಳಗೆ ಹಾಗೂ ಹೊರಗೆ ಹೋರಾಟ ನಡೆಸಬೇಕು. ವಿಪಕ್ಷಗಳಿಗೆ ಎಲ್ಲಾ ಶಾಸಕರು ಒಗ್ಗಟ್ಟಾಗಿ ತಕ್ಕ ಉತ್ತರ ನೀಡಬೇಕೆಂದು ಹೇಳಿದರು.

ಇದೇ ವೇಳೆ ಹಲವಾರು ಶಾಸಕರು ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಳಿ ಕೆಲ ಸಚಿವರ ವಿರುದ್ಧ ದೂರು ಸಲ್ಲಿಸಿದರು. ಕೆಲವು ಸಚಿವರನ್ನು ಶಾಸಕರು ಭೇಟಿ ಮಾಡಲೇ ಆಗುತ್ತಿಲ್ಲ. ಶಾಸಕರೊಂದಿಗೆ ಸಚಿವರು ಉಡಾಫೆಯಿಂದ ನಡೆದುಕೊಳ್ಳುತ್ತಿದ್ದಾರೆ. ಅವರವರ ಇಲಾಖೆಗಳಿಗೆ ಸಂಬಂಧಿಸಿದಂತೆ ಯಾವುದೇ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಿಲ್ಲ ಎಂದು ದೂರಿದರು. ಗ್ಯಾರಂಟಿ ಯೋಜನೆಗಳಿಗೆ ಹೆಚ್ಚಿನ ಹಣ ಖರ್ಚು ಮಾಡುತ್ತಿರುವುದರಿಂದ ನಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುತ್ತಿಲ್ಲ. ಇದರಿಂದಾಗಿ ಮತದಾರರಿಗೆ ಮುಖ ತೋರಿಸದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಶಾಸಕರು ಅಳಲು ತೋಡಿಕೊಂಡರು.

ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು, ಗ್ಯಾರಂಟಿ ಯೋಜನೆಗಳಿಗಾಗಿ ಯಾವುದೇ ಇಲಾಖೆಯ ಹಣವನ್ನೂ ಕಡಿತಗೊಳಿಸುತ್ತಿಲ್ಲ ಬಜೆಟ್‌ನಲ್ಲಿ ಅಯಾ ಇಲಾಖೆಗಳಿಗೆ ಮೀಸಲಿಟ್ಟಿರುವ ಹಣವನ್ನು ನೀಡಲಾಗುತ್ತಿದೆ. ಗ್ಯಾರಂಟಿ ಯೋಜನೆಗಳಿಗೆಂದು ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣ ಇಡಲಾಗಿದೆ. ಆದರೆ ಹೆಚ್ಚುವರಿ ಅನುದಾನ ಕೊಡಲು ಸಾಧ್ಯವಾಗುತ್ತಿಲ್ಲ ಎಂದು ಸ್ಪಷ್ಟನೆ ನೀಡಿದರಲ್ಲದೆ, ಶಾಸಕರ ಎಲ್ಲಾ ಸಮಸ್ಯೆಗಳನ್ನು ಬಗೆ ಹರಿಸುವ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.07.2024 ಶುಕ್ರವಾರ, ಮಳೆ ನಕ್ಷತ್ರ: ಪುನರ್ವಸು 6.07.2024 ರಿಂದ 19.07.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ:ಮೂಲ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಶಾಲಾಕ್ಯತಂತ್ರ ವಿಭಾಗ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಶೃಂಗೇರಿ ಶ್ರೀ ಶಂಕರ ಮಠ ಅಭಿನವ ಶಂಕರಾಲಯ:** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವ, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, 8.30ಕ್ಕೆ ಹೋಮ ಸಂಕಲ್ಪ, ಸರಸ್ವತಿ ಹೋಮ, ಬೆಳಗ್ಗೆ 11.30ಕ್ಕೆ ಹೋಮ ಪೂರ್ಣಾಹುತಿ, ಮಧ್ಯಾಹ್ನ 12ರಿಂದ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶ್ರೀ ಸರಸ್ವತೀ ಅಲಂಕಾರ (ವೀಣಾ ಶಾರದೆ), ವಿದುಷಿ ಅನಘ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಲ್ಕೋಹಾಲ್‌ನಿಂದ ಉಂಟಾಗುವ ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ:** ಆಷಾಢ ಮಾಸ ಪೂಜಾ ಮಹೋತ್ಸವ, ಬೆಳಗ್ಗೆ 7.30ರಿಂದ ಶ್ರೀ ದೇವಿಗೆ ಪಂಚಾಮೃತಾಭಿಷೇಕ, ಬೆಳಗ್ಗೆ 10ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5ರಿಂದ ರಾಜರಾಜೇಶ್ವರಿ ನಗರದ ಶ್ರೀ ರಾಜರಾಜೇಶ್ವರಿ ಮಹಿಳಾ ಮಂಡಳಿ ಸದಸ್ಯರಿಂದ ಸೌಂದರ್ಯ ಲಹರಿ, ಸಂಜೆ 6ರಿಂದ ಬಿಇಎಂಎಲ್ ವೇದ ಬಳಗದವರಿಂದ ವೇದ ಪಾರಾಯಣ, ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ.

■ **ಕರ್ನಾಟಕ ಸರ್ಕಾರ ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲಾ ಕನ್ನಡ ಉಪನ್ಯಾಸಕರ ವೇದಿಕೆ:** ಪುನಶ್ಚೇತನ ಕಾರ್ಯಾಗಾರ, ವಿಮರ್ಶಕ ಬಂಜಗೆರೆ ಜಯಪ್ರಕಾಶ್ ಕಾರ್ಯಕ್ರಮಕ್ಕೆ ಚಾಲನೆ ಮತ್ತು "ಕನ್ನಡ ರಾಷ್ಟ್ರೀಯತೆ: ಇಂದಿನ ಸವಾಲುಗಳು" ವಿಷಯ ಕುರಿತು ವಿಶೇಷ ಉಪನ್ಯಾಸ, ಅಧ್ಯಕ್ಷತೆ: ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಮರಿಸ್ವಾಮಿ, ಉಪಸ್ಥಿತರು: ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ, ಪ್ರಾಂಶುಪಾಲ ವಿಷಕಂಠಮೂರ್ತಿ, ಕನ್ನಡ ಉಪನ್ಯಾಸಕರ ವೇದಿಕೆ ನೂತನ ಅಧ್ಯಕ್ಷ ಎಂ.ಮಹೇಶ್, ಮಧ್ಯಾಹ್ನದ ಅಧಿವೇಶನದಲ್ಲಿ ದೇವನೂರು ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಬಾಲಸುಬ್ರಮಣ್ಯಂ 'ಪರೀಕ್ಷಾ ಪದ್ಧತಿ ಮತ್ತು ಮೌಲ್ಯಮಾಪನದ ಸವಾಲುಗಳು' ವಿಷಯ ಕುರಿತು ಉಪನ್ಯಾಸ, ಅಧಿವೇಶನ ಎರಡರಲ್ಲಿ 'ಪದವಿಪೂರ್ವ ಹಂತದಲ್ಲಿ ಕನ್ನಡ ಭಾಷೆ ಆಯ್ಕೆ ವಿಚಾರ' ಕುರಿತು ಹುಣಸೂರು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ರಾದ ಡಾ.ನೀ.ಗೋ.ರಮೇಶ್ ಅವರಿಂದ ಉಪನ್ಯಾಸ, ಉಪಸ್ಥಿತರು: ಕವಿಗಳು ಹಾಗೂ ಬಿ.ಮಟ ಕೆರೆ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಸಂತೋಷ್ ಚೊಕ್ಕಾಡಿ, ಚಾಮರಾಜ ಜೋಡಿ ರಸ್ತೆಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪುಟ್ಟಗೌರಮ್ಮ, ಸ್ಥಳ: ಮಹಾಜನ ಪದವಿಪೂರ್ವ ಕಾಲೇಜಿನ ವಿವೇಕಾನಂದ ಸಭಾಂಗಣ, ಜಯಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ಸಂಶೋಧನಾ ವಿದ್ಯಾರ್ಥಿಗಳು, ಮಾನಸಗಂಗೋತ್ರಿ :** ಪ್ರೊ.ಹೆಚ್.ನಾಗರಾಜ್ ಅವರ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ಕೃಷ್ಣಯಾದವಾನಂದ ಸ್ವಾಮೀಜಿ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್, ವಿಶೇಷ ಆಹ್ವಾನಿತರು : ಬೆಂಗಳೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ನಿರಂಜನ ವಾನಳ್ಳಿ, ಅಭಿನಂದಿತರು : ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಹೆಚ್.ನಾಗರಾಜ್, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಮೈಸೂರು ವಿವಿ, ಬೆಳಗ್ಗೆ 10.45ಕ್ಕೆ.

■ **ಶ್ರೀ ಕೃಷ್ಣ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಮಿತ್ರ ಮಂಡಳಿ :** ಉಡುಪಿ ಶ್ರೀ ಪೇಜಾವರ ಅಧೋಕ್ಷಜ ಮಠದ ಸಂಸ್ಥಾನಾಧೀಶರಾದ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರಿಗೆ ಮತ್ತು ಉಡುಪಿ ಶ್ರೀ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರಿಗೆ ಗುರುವಂದನಾ ಸಮಾರಂಭ, ಶ್ರೀಮತಿ ದಿವ್ಯಾ ಗಿರಿಧರ್ ಮತ್ತು ಅನಂತರಾಜ್ ಮಿಸ್ತ್ರಿ ತಂಡದವರಿಂದ ದಾಸವೈಭವ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಸಂಜೆ 5ಕ್ಕೆ.

■ **ಶ್ರೀ ಉತ್ತರಾದಿ ಮಠ :** ಶ್ರೀ 1008 ಶ್ರೀ ಸತ್ಯಸಂಕಲ್ಪತೀರ್ಥ ಶ್ರೀಪಾದಂಗಳವರ 185ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಪ್ರಸಿದ್ಧ ಪ್ರವಚನಕಾರರಾದ ಪಂ.ಶ್ರೀ.ವಿದ್ಯಾದೀಶಾಚಾರ್ಯ ಗುತ್ತಲ್ ಅವರಿಂದ ಶ್ರೀ ರಾಘವೇಂದ್ರಸ್ವಾಮಿಗಳು ರಚಿಸಿರುವ 'ಪ್ರಾತಃಸಂಕಲ್ಪಗದ್ಯ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6ರಿಂದ.

■ **ಶ್ರೀ ಕೃಷ್ಣ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಮಿತ್ರ ಮಂಡಳಿ :** ಉಡುಪಿ ಶ್ರೀ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾದೀಶತೀರ್ಥ ಶ್ರೀಪಾದಂಗಳವರಿಂದ ಶ್ರೀ ಮನ್ಮಹಾಭಾರತ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಡಾ. ಎಸ್. ವಿ. ನರಸಿಂಹನ್, ಪ್ರಸ್ತುತಿ– ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ಕೆ.ಬಿ.ಪ್ರವೀಣ್, ಕುಲ ಸಚಿವರು, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ– ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಕರ್ನಾಟಕ ಮೆದುಳು ಆರೋಗ್ಯ ಪ್ರಾಧಿಕಾರ, ಬೆಂಗಳೂರು, 9.00 ನಮ್ಮ ಆರೋಗ್ಯ, 'ನೋವು ನಿವಾರಣೆಗಾಗಿ ಅಗ್ನಿಕರ್ಮ ಚಿಕಿತ್ಸೆ' ಕುರಿತು ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ ತಗ್ಗಹಳ್ಳಿಯ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಆಯುಷ್ ವೈದ್ಯಾಧಿಕಾರಿ ಡಾ. ಭಾಗ್ಯಲಕ್ಷ್ಮೀ. ಟಿ. ಎಸ್ ಅವರೊಂದಿಗೆ ಮಾತುಕತೆ. 'ಎಂಬೋಲೈಸೇಷನ್' ಕುರಿತು ನರ ಹಾಗೂ ರಕ್ತನಾಳ ತಜ್ಞರಾದ ಡಾ. ರೂಪಾ ಶೇಷಾದ್ರಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಕೆ. ಜೆ. ಯೇಸುದಾಸ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.30ದೇವರನಾಮ–ಸಿ.ಎಸ್. ಲಕ್ಷ್ಮೀ – ಹಾಡುಗಾರಿಕೆ, 12.45 ಕಾದಂಬರಿ ವಿಹಾರ – ಅ.ನ.ಕೃ ಅವರ ಉದಯರಾಗ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್. ಎಸ್, 1.20 ಭಾವಗೀತೆಗಳು–ರೇಖಾ ರವಿಶಂಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಾದ್ಯವೃಂದ, ಎ. ಡಿ. ಜಾಕರಿಯಾ, 4.00 ಮಹಿಳಾರಂಗ–ಸಖೀ ಸಂವಾದ, ವಿಷಯ–ಹೆಣ್ಣಿನ ಕುರಿತಾಗಿ ಗಂಡಿನ ದೃಷ್ಟಿಕೋನದಲ್ಲಿ ಏನೆಲ್ಲ ಬದಲಾವಣೆ ಬಯಸುತ್ತೀರಿ, ಪ್ರಸ್ತುತಿ : ಸಹನಾ ಮತ್ತು ಕೀರ್ತನಾ, 4.30 ವೃತ್ತಿ ಮಾರ್ಗದರ್ಶನ : ಲಲಿತ ಕಲೆಗಳ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರು ವಿಶ್ವವಿದ್ಯಾಲಯದ ಲಲಿತಕಲಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಅನಿತಾ ಬ್ರಾಗ್ಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.50 ಕೃಷಿರಂಗ–ವ್ಯವಸಾಯದ ಅನುಭವ ಹಂಚಿಕೊಳ್ಳುತ್ತಾರೆ, ಮದ್ದೂರು ತಾಲೂಕು ಆತಗೂರು ಹೋಬಳಿ ಅವಸರದಹಳ್ಳಿಯ ಎ.ಎಂ. ಮಹೇಶ್, ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ. ಪದ್ಮಮೂರ್ತಿ – ಹಾಡುಗಾರಿಕೆ, 10.00 ಹಳ್ಳಿ ಹಾಡು, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 19 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 94 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಬಿಜಿಯವರ **ಭೂಮಂತ್ರ...**



ಮೈಸೂರು ಮಾಜಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರ ಸತ್ಯವಾಕ್ಯವನ್ನು ಆಲಿಸುವ ಸಮಯ ಬಂದಿದೆ

■ ಪುಟ–4

ವಾಲ್ಮೀಕಿ ನಿಗಮದ ಹಗರಣ ಸಂಬಂಧ ಸಿಎಂ, ಡಿಸಿಎಂ ಇಡಿ ತನಿಖೆಗೊಳಪಡಿಸಿ

ರಾಜ್ಯ ಕಾಂಗ್ರೆಸ್ ಸರ್ಕಾರ ಅಸ್ಥಿರಗೊಳಿಸುವ ಹುನ್ನಾರ

● ಕೇಂದ್ರದ ವಿರುದ್ಧ ನಾಲ್ವರು ಹಿರಿಯ ಸಚಿವರು, ಸಿಎಂ ಕಾನೂನು ಸಲಹೆಗಾರ ಆರೋಪ ● ಇಡಿಯಿಂದ ತಪ್ಪಿತಸ್ಥರ ಹುಡುಕುವ ಉದ್ದೇಶ ಬಿಟ್ಟು ಸರ್ಕಾರ ಬುಡಮೇಲು ಮಾಡುವ ಕೃತ್ಯ

ಬೆಂಗಳೂರು, ಜು.18(ಕೆಎಂಶಿ)– ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನ ಜಾರಿ ನಿರ್ದೇಶನಾಲಯ (ಇಡಿ) ತನಿಖೆಗೊಳಪಡಿಸುವ ಮೂಲಕ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಸಂಚು ರೂಪಿಸಿದೆ ಎಂದು ಮುಖ್ಯಮಂತ್ರಿ ಅವರ ಆಪ್ತ ಸಚಿವರ ಬಳಗ ಇಂದಿಲ್ಲಿ ಕಿಡಿಕಾರಿದೆ.

ಸಚಿವರಾದ ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಸಂತೋಷ್ ಲಾಡ್ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ವಾಲ್ಮೀಕಿ ನಿಗಮದ ಹಗರಣದಲ್ಲಿ ಇಡಿಗೆ ತಪ್ಪಿತಸ್ಥರ ಹುಡುಕುವ ಉದ್ದೇಶ ಇಲ್ಲ, ಕಾಂಗ್ರೆಸ್ ಸರ್ಕಾರವನ್ನು ಬುಡಮೇಲು ಮಾಡುವುದೇ ಇವರ ಉದ್ದೇಶ ಎಂದರು.

ಪ್ರಕರಣದ ಆರೋಪಿಗಳಿಂದ ಅಪ್ರೂವರ್ ಆಗಿ ಹೇಳಿಕೆ ಪಡೆಯುವ ಯತ್ನ ನಡೆದಿದೆ. ತಪ್ಪೊಪ್ಪಿಗೆ ನೀಡಿ ಇಲ್ಲದಿದ್ದರೆ, ನಿಮಗೆ ಇಡಿ ಪವರ್ ಗೊತ್ತಿಲ್ಲ, ನಂತರ ನೀವೇ ಸಂಕಷ್ಟಕ್ಕೆ ಸಿಲುಕುತ್ತೀರಿ ಎಂದು ವಿಚಾರಣೆ ವೇಳೆ ಹೆದರಿಸುವ ಮೂಲಕ ಅಧಿಕಾರಿಗಳು ತನಿಖೆಯನ್ನೇ ತಪ್ಪು ದಾರಿಗೆ ಕೊಂಡೊಯ್ಯುತ್ತಿದ್ದಾರೆ ಎಂದು ದೂರಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಅಸ್ಥಿರಗೊಳಿಸುವ ಪ್ರಜಾಪ್ರಭುತ್ವ ವಿರೋಧಿ ಕೆಲಸಕ್ಕೆ ಕೇಂದ್ರ ಮುಂದಾಗಿದೆ. ಆದರೆ, ಇಂತಹ ಗೊಡ್ಡು ಹೆದರಿಕೆ–ಬೆದರಿಕೆಗಳಿಗೆ ನಾವು ಬಗ್ಗುವ ಮಾತೇ ಇಲ್ಲ ಎಂದರು.



ಪತ್ರಿಕಾಗೋಷ್ಠಿಯಲ್ಲಿ ಸಚಿವರಾದ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್, ಸಂತೋಷ್ ಲಾಡ್, ಪ್ರಿಯಾಂಕ ಖರ್ಗೆ ಇನ್ನಿತರರಿದ್ದರು.

ಕೇಂದ್ರ ಬಿಜೆಪಿ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನಡೆಗೆ ಛೀಮಾರಿ ಹಾಕಿದ ಅವರು, ವಾಲ್ಮೀಕಿ ನಿಗಮದ ಹಗರಣದ ತನಿಖೆ ನಡೆಸುತ್ತಿರುವ ಇಡಿ ಅಧಿಕಾರಿಗಳು ವಿಚಾರಣೆಗೊಳಪಟ್ಟವರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ. ಈ ಹಗರಣದಲ್ಲಿ ಉನ್ನತ ಮಟ್ಟದಲ್ಲಿರುವವರೂ ಭಾಗಿಯಾಗಿದ್ದಾರೆ ಎಂಬ ಹೇಳಿಕೆ ನೀಡುವಂತೆ ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿದರು. ಜನ ಮನ್ನಣೆ ಹಾಗೂ ಅಧಿಕಾರ ಕಳೆದುಕೊಂಡು ರಾಜ್ಯದಲ್ಲಿ ದುರ್ಬಲವಾಗಿರುವ ಬಿಜೆಪಿ ನಾಯಕರು, ಜಾರಿ ನಿರ್ದೇಶನಾಲಯ (ಇಡಿ) ಬಳಸಿಕೊಂಡು ವಾಮಮಾರ್ಗದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಯತ್ನಿಸುತ್ತಿದ್ದಾರೆ.

ಆಪರೇಷನ್ ಕಮಲ ಸೇರಿದಂತೆ ಬಿಜೆಪಿಯ ಇಂತಹ ಜನ ವಿರೋಧಿ ಕಸರತ್ತುಗಳು ದೇಶದ ರಾಜಕೀಯ ಇತಿಹಾಸದಲ್ಲಿ ಹೊಸ ವಿಚಾರವೇನಲ್ಲ. ಇಡಿ, ಸಿಬಿಐ ಹಾಗೂ ಐಟಿ ಸಂಸ್ಥೆಗಳನ್ನು ಸರ್ಜಿಕಲ್ ಸ್ಟ್ರೈಕ್ ತರ ವಿರೋಧ ಪಕ್ಷಗಳ ವಿರುದ್ಧ ಬಿಜೆಪಿ ಬಳಕೆ ಮಾಡುತ್ತಲೇ ಇದೆ. ಇದೀಗ ಮುಂದುವರೆದ ಭಾಗವಾಗಿ ಕರ್ನಾಟಕದಲ್ಲೂ ಹತಾಶ ಮನೋಭಾವದಿಂದ 2009ರಂತೆ ಆಪರೇಷನ್ ಕಮಲ ಸಾಧ್ಯವಿಲ್ಲ ಎಂದು ತಿಳಿದು, ಇದೀಗ ಇಡಿ ಮೂಲಕ ರಾಜ್ಯ ಸರ್ಕಾರವನ್ನು ಬುಡಮೇಲು ಮಾಡುವ ಕೆಲಸವನ್ನು ಕೇಂದ್ರ ಸರ್ಕಾರ ಮುಂದೆ ನಿಂತು ಮಾಡುತ್ತಿದೆ. ಆದರೆ, ಇವರ ಗೊಡ್ಡು ಬೆದರಿಕೆಗಳಿಗೆ, ಸಂವಿಧಾನ ವಿರೋಧಿ ನಡೆಗಳಿಗೆ ಬಗ್ಗುವ ಮಾತೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ಕಳೆದ 10 ವರ್ಷದಲ್ಲಿ ಇಡಿ ರಾಜಕೀಯ ಅಸ್ತ್ರವಾಗಿದೆ. ಬಿಜೆಪಿಗೆ ಎಲ್ಲಿ ಚುನಾವಣೆ ಗೆಲ್ಲಲು ಸಾಧ್ಯವಿಲ್ಲವೋ ಅಲ್ಲೆಲ್ಲಾ ಇಡಿ, ಐಟಿ ಬಳಸಿಕೊಂಡು ಆಡಳಿತ ಪಕ್ಷಗಳ ಮೇಲೆ ದಾಳಿ ಮಾಡುವುದು ವಾಡಿಕೆಯಾಗಿದೆ.

ಬಿಜೆಪಿಯ ಇಂತಹ ನೀಚ ನಡೆಗಳಿಗೆ ಜಾರ್ಖಂಡ್, ಪಶ್ಚಿಮಬಂಗಾಳ, ದೆಹಲಿ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮಹಾರಾಷ್ಟ್ರ ಸೇರಿದಂತೆ ಸಾಕಷ್ಟು ಉದಾಹರಣೆಗಳಿದ್ದು, ಪಟ್ಟಿ ಇನ್ನೂ ದೊಡ್ಡದಿದೆ ಎಂದರು. ■ 5ನೇ ಪುಟಕ್ಕೆ

ವಾಲ್ಮೀಕಿ ನಿಗಮದ ಹಣ ಲೂಟಿಗೆ ಜ್ಯೂನಿಯರ್ ಅಕೌಂಟೆಂಟ್ ಹುದ್ದೆ ಸೃಷ್ಟಿ

● ನಿಗಮದ ಎಂಡಿ ಪದ್ಮನಾಭ ಮಾಸ್ಟರ್ ಪ್ಲಾನ್
● ಆ ಹುದ್ದೆಯ ಮೂಲಕ 187 ಕೋಟಿ ವರ್ಗಾವಣೆ

ಬೆಂಗಳೂರು, ಜು.18(ಕೆಎಂಶಿ)– ಮಹರ್ಷಿ ವಾಲ್ಮೀಕಿ ನಿಗಮದ ಕೋಟ್ಯಾಂತರ ಹಣ ಲೂಟಿ ಮಾಡುವ ಉದ್ದೇಶದಿಂದಲೇ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ ಜ್ಯೂನಿಯರ್ ಅಕೌಂಟೆಂಟ್ ಹುದ್ದೆ ಸೃಷ್ಟಿ ಮಾಡಿದ್ದ ವಿಷಯ ಬೆಳಕಿಗೆ ಬಂದಿದೆ.

ಶಿವಕುಮಾರ್ ಎಂಬ ಹೆಸರಲ್ಲಿ ಜ್ಯೂನಿಯರ್ ಅಕೌಂಟೆಂಟ್ ಹುದ್ದೆ ಸೃಷ್ಟಿಸಿ, ಹಣಕಾಸು ವ್ಯವಹಾರ ನೋಡಿಕೊಳ್ಳುವ ಅಧಿಕಾರ ನೀಡಿ, ಗುರುತಿನ ಚೀಟಿಯನ್ನೂ ನೀಡಲಾಗಿತ್ತು ಎಂಬುದು ಎಸ್ಐಟಿ ತನಿಖೆಯಿಂದ ಬಯಲಾಗಿದೆ. ನಿಗಮದ ಹಣ ಇಟ್ಟಿದ್ದ ನಗರದ ಮಹಾತ್ಮ ಗಾಂಧಿ (ಎಂಜಿ) ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ■ 5ನೇ ಪುಟಕ್ಕೆ

ಸಿದ್ದರಾಮಯ್ಯನವರೇ ಅಪಮಾನಿಸಲು ನಿಮಗೆ ಕನ್ನಡಿಗರೇ ಬೇಕಿತ್ತೇ?

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕುಹಕ

ಬೆಂಗಳೂರು, ಜು.18–ಕನ್ನಡಿಗರಿಗೆ ಉದ್ಯೋಗ ಕೊಡುವ ವಿಧೇಯಕ ತಂದಿದ್ಯಾಕೆ, ತಡೆ ಹಿಡಿದಿದ್ದೇಕೆ, ಕನ್ನಡಿಗರ ಬದುಕಿನೊಂದಿಗೆ ಚೆಲ್ಲಾಟವೇಕೆ. ಅಪಮಾನಿಸಲು ನಿಮಗೆ ಕನ್ನಡಿಗರೇ ಬೇಕಿತ್ತೆ...! ಇದು ಕನ್ನಡಿಗರಿಗೆ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು, ಉದ್ದಿಮೆಗಳಲ್ಲಿ ಉದ್ಯೋಗ ಮೀಸಲು ಜಾರಿಗೆ ತರಲು ಉದ್ದೇಶಿಸಿದ್ದ ವಿಧೇಯಕದಿಂದ ಹಿಂದೆ ಸರಿದಿದ್ದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ವಿಧೇಯಕವನ್ನು ಹಿಂಪಡೆಯುತ್ತಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಎಕ್ಸ್ ಪೋಸ್ಟ್‌ನ್ನು ತನ್ನ ಎಕ್ಸ್ ಖಾತೆಯಲ್ಲಿ ಲಗತ್ತಿಸಿರುವ ಅವರು 'ಯೂ ಟರ್ನ್ ಸರ್ಕಾರ' ಎಂದು ಲೇವಡಿ ಮಾಡಿದ್ದಾರೆ. ಕನ್ನಡಿಗರಿಗೆ ಉದ್ಯೋಗ ಕೊಡುವ ವಿಧೇಯಕ ದಿಢೀರ್ ತಡೆಹಿಡಿದು ಕನ್ನಡ–ಕನ್ನಡಿಗ–ಕರ್ನಾಟಕವನ್ನು ಅಪಮಾನಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ■ 11ನೇ ಪುಟಕ್ಕೆ

ವಾಲ್ಮೀಕಿ ನಿಗಮ ಹಗರಣದ ವಿರುದ್ಧ ಬಿಜೆಪಿ ಸಮರ

ವಿಧಾನಸೌಧ ಮುತ್ತಿಗೆಗೆ ಯತ್ನ, ವಿಜಯೇಂದ್ರ ಸೇರಿ ಹಲವರು ಪೊಲೀಸ್ ವಶಕ್ಕೆ



ಬೆಂಗಳೂರು, ಜು.18– ವಾಲ್ಮೀಕಿ ನಿಗಮದಲ್ಲಿ ಅಕ್ರಮ ಮತ್ತು ಮುಡಾ ಹಗರಣ ಪ್ರಕರಣ ಸಂಬಂಧ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ತನ್ನ ಸಮರವನ್ನು ಮುಂದುವರೆಸಿದೆ. ಹಗರಣ ಹಾಗೂ ಅಕ್ರಮ ಪ್ರಕರಣಗಳ ಸಂಬಂಧ ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಾಲ್ಮೀಕಿ ನಿಗಮದಲ್ಲಿ ಅಕ್ರಮ ಮತ್ತು ಮುಡಾ ಹಗರಣವನ್ನು ಖಂಡಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ನೇತೃತ್ವದಲ್ಲಿ ಫ್ರೀಡಂಪಾರ್ಕ್‌ನಿಂದ ವಿಧಾನಸೌಧದವರೆಗೆ ಪ್ರತಿಭಟನಾ ರ್‍ಯಾಲಿ ನಡೆಯಿತು. ಈ ನಡುವೆ ವಿಧಾನಸೌಧಕ್ಕೆ ಮುತ್ತಿಗೆಗೆ ಯತ್ನಿಸಿದ ಬಿವೈ ವಿಜಯೇಂದ್ರ ಸೇರಿ ಹಲವು ನಾಯಕರು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಮಧ್ಯೆ ಪ್ರತಿಭಟನೆ ವೇಳೆ ಪ್ರತಿಭಟನಾಕಾರರು ಬ್ಯಾರಿಕೇಡ್ ಮೇಲೆ ಹತ್ತಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿಜಯೇಂದ್ರ, ಸಿಎಂ ಸಿದ್ದರಾಮಯ್ಯಗೆ ಭಯ ಶುರುವಾಗಿದೆ. ಇದರಿಂದಾಗಿ ಇಡಿ ಮೇಲೆ ಆರೋಪ ಮಾಡುತ್ತಿದ್ದಾರೆ. ನಿಗಮದ ಭ್ರಷ್ಟಾಚಾರ ದೇಶಾದ್ಯಂತ ಚರ್ಚೆಯಾಗುತ್ತಿದೆ. ಕಾಂಗ್ರೆಸ್‌ಗೆ ನೈತಿಕತೆ ಇದೆಯಾ ಎಂದು ಪ್ರಶ್ನಿಸಿದರು. ಎಸ್‌ಸಿ, ಎಸ್‌ಟಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ. ಆದರೂ ಕಾಂಗ್ರೆಸ್ ನಿರಪರಾಧಿಗಳೆಂದು ಹೇಳಿಕೆ ಕೊಡುತ್ತಿದೆ. ಅಧಿಕಾರಿಗಳ ಮೇಲೆ ಆರೋಪ ಹೊರಿಸುತ್ತಿದ್ದಾರೆ. ಸಿಎಂ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಮಳೆ ಆರ್ಭಟ; ನದಿ ಪಾತ್ರದ ಜನರ ಸುರಕ್ಷತೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳಿ

● ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಸೂಚನೆ ● ಜನರಿಗೂ ಪರಿಸ್ಥಿತಿ ಮನವರಿಕೆ ಮಾಡಿಕೊಡುವಂತೆ ಸಲಹೆ

ಮೈಸೂರು, ಜು.18(ಎಸ್‌ಬಿಡಿ)– ನದಿ ಪಾತ್ರದ ಗ್ರಾಮಗಳ ಜನರ ಸುರಕ್ಷತೆಗೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ವಹಿಸುವಂತೆ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ವಿಪತ್ತು ನಿರ್ವಹಣಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಾದ್ಯಂತ ಮಳೆ ಹೆಚ್ಚಾಗಿದ್ದು, ಈಗಾಗಲೇ ಕಬಿನಿ ಜಲಾಶಯದಿಂದ ಸುಮಾರು 70,000 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ನುಗು ಡ್ಯಾಮ್‌ನಿಂದಲೂ ನೀರನ್ನು ಹೊರಬಿಡುತ್ತಿರುವುದರಿಂದ ನದಿ ಪಾತ್ರದ ಗ್ರಾಮಗಳ ಜನರ ಸುರಕ್ಷತೆಗೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ವಹಿಸಲು ಕೂಡಲೇ ಕ್ರಮ ವಹಿಸಬೇಕು ಎಂದು ತಿಳಿಸಿದರು. ■ 5ನೇ ಪುಟಕ್ಕೆ



ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಅಧಿಕಾರಿಗಳೊಂದಿಗೆ ಗುರುವಾರ ವಿಪತ್ತು ನಿರ್ವಹಣಾ ಸಭೆ ನಡೆಸಿದರು.

ರೇಣುಕಾಸ್ವಾಮಿ ಹತ್ಯೆ ಪ್ರಕರಣ

ನಟ ದರ್ಶನ್, ಇತರ 16 ಆರೋಪಿಗಳ ನ್ಯಾಯಾಂಗ ಬಂಧನ ಆ.1ರವರೆಗೆ ವಿಸ್ತರಣೆ

ಬೆಂಗಳೂರು, ಜು.18– ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್, ಅವರ ಸ್ನೇಹಿತೆ ಪವಿತ್ರಾ ಗೌಡ ಹಾಗೂ ಇತರ 15 ಆರೋಪಿಗಳ ನ್ಯಾಯಾಂಗ ಬಂಧನವನ್ನು ವಿಶೇಷ ನ್ಯಾಯಾಲಯ ಆಗಸ್ಟ್ 1ರವರೆಗೆ ವಿಸ್ತರಿಸಿದೆ.

ದರ್ಶನ್ ಮತ್ತು ಪವಿತ್ರಾ ಸೇರಿದಂತೆ ಎಲ್ಲಾ 17 ಆರೋಪಿಗಳ ನ್ಯಾಯಾಂಗ ಬಂಧನ ಇಂದು ಅಂತ್ಯಗೊಂಡಿದ್ದ ರಿಂದ ಅವರನ್ನು ಬೆಂಗಳೂರು ಮತ್ತು ತುಮಕೂರು ಕಾರಾಗೃಹದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆರೋಪಿಗಳನ್ನು ಬಿಡುಗಡೆ ಮಾಡುವುದರಿಂದ ಪ್ರಸ್ತುತ ನಡೆಯುತ್ತಿರುವ ತನಿಖೆಗಳಿಗೆ ಅಡ್ಡಿಯಾಗಬಹುದು ಎಂದು ವಾದಿಸಿದರು. ಅಲ್ಲದೆ ಕಾನೂನಿನ ನಿರ್ಲಕ್ಷ್ಯವನ್ನು ಪ್ರದರ್ಶಿಸುವ ಮೂಲಕ ತಾಂತ್ರಿಕ, ಭೌತಿಕ ಮತ್ತು ವೈಜ್ಞಾನಿಕ ಪುರಾವೆಗಳನ್ನು ನಾಶ ಮಾಡಲು ಆರೋಪಿಗಳು ಪ್ರಯತ್ನಿಸಿದ್ದನ್ನು ಪ್ರಾಸಿಕ್ಯೂಟರ್ ಎತ್ತಿ ತೋರಿಸಿದರು.



ಅಲ್ಲದೆ ಆರೋಪಿ ದರ್ಶನ್ ಮನೆಯಿಂದ 83.65 ಲಕ್ಷ ರೂಪಾಯಿ ನಗದು ವಶಪಡಿಸಿಕೊಂಡಿರುವುದನ್ನು ಪ್ರಾಸಿಕ್ಯೂಟರ್ ಬಹಿರಂಗ ಪಡಿಸಿದರು. ಕೊಲೆಗೂ ಮುನ್ನ ಹಾಗೂ ನಂತರ ವಿವಿಧ ವ್ಯಕ್ತಿಗಳನ್ನು ಸಂಪರ್ಕಿಸಲು ವಿವಿಧ ಹೆಸರಿನಲ್ಲಿ ನೋಂದಾಯಿಸಲಾದ ಹಲವು ಸಿಮ್ ಕಾರ್ಡ್‌ಗಳನ್ನು ಅವರು ಬಳಸಿರುವುದು ಪತ್ತೆಯಾಗಿದೆ. ಜಾಮೀನು ನೀಡುವುದರಿಂದ ನಿರ್ಣಾಯಕ ಸಾಕ್ಷ್ಯ ನಾಶಕ್ಕೆ ಕಾರಣವಾಗಬಹುದು ಎಂದು ಪ್ರಾಸಿಕ್ಯೂಷನ್ ಒತ್ತಿ ಹೇಳಿದೆ. ಈ ಮಧ್ಯೆ, ಮನೆ ಆಹಾರ, ಹಾಸಿಗೆ ಮತ್ತು ಪುಸ್ತಕಗಳನ್ನು ತರಿಸಿಕೊಳ್ಳಲು ಜೈಲು ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ದರ್ಶನ್ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿ ವಿಚಾರಣೆ ಶುಕ್ರವಾರ ನಡೆಯಲಿದೆ.

ಮುಡಾ ನಿವೇಶನ ಹಗರಣ

ವಾರದಿಂದ ತನಿಖಾಧಿಕಾರಿಗಳ ಸುಳಿವಿಲ್ಲ



ತನಿಖೆ ನಡೆಸುತ್ತಿದ್ದ ಮುಡಾ ಕಚೇರಿ ಸಭಾಂಗಣ ಬಂದ್ ಆಗಿರುವುದು

ಸಾರ್ವಜನಿಕರ ಕಾಡುತ್ತಿರುವ ಹತ್ತು ಹಲವು ಪ್ರಶ್ನೆ!

ಮೈಸೂರು, ಜು.18 (ಆರ್‌ಕೆ)–ಶೇ 50:50 ಅನುಪಾತದಡಿ ಮನಸ್ಸೋ ಇಚ್ಛೆ ನಿವೇಶನ ಹಂಚಿಕೆ ಮಾಡಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟ ಉಂಟು ಮಾಡಿರುವ ಪ್ರಕರಣ ಸಂಬಂಧ ತನಿಖೆ ನಡೆಸುತ್ತಿರುವ ಅಧಿಕಾರಿಗಳ ತಂಡ ವಾರವಾದರೂ ಸುಳಿವಿಲ್ಲ.

ಬ್ರಹ್ಮಾಂಡ ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಸರ್ಕಾರ ರಚಿಸಿರುವ ಹಿರಿಯ ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದ ತನಿಖಾ ಸಮಿತಿಯ ಸದಸ್ಯರು ಮುಡಾ ಕಚೇರಿಯಲ್ಲಿ ಕಡತಗಳ ಪರಿಶೀಲನೆ ಮಾಡುತ್ತಿದ್ದರಾದರೂ, ಈ ಮಧ್ಯೆ ಸರ್ಕಾರ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖಾ ಆಯೋಗವನ್ನು ರಚಿಸಿತ್ತು. ಈ ಹಿನ್ನೆಲೆಯಲ್ಲಿ ವಾರದ ಹಿಂದೆ ತಾವು ತನಿಖೆ ನಡೆಸುತ್ತಿದ್ದ ಮುಡಾ ಕಚೇರಿ ಸಭಾಂಗಣದ ಬಾಗಿಲು ಬಂದ್ ಮಾಡಿ ಸೀಲ್ ಹಾಕಿ ಹೋದ ಅಧಿಕಾರಿಗಳು ಮತ್ತೆ ಮುಡಾದತ್ತ ಸುಳಿದಿಲ್ಲ. ಸೋಮವಾರ ಬರುತ್ತಾರೆ ಎಂದು ಭಾವಿಸಲಾಗಿತ್ತಾದರೂ ಇಲ್ಲಿಯವರೆಗೆ ■ 5ನೇ ಪುಟಕ್ಕೆ

ಮಳೆ ರಜೆ ಬಗ್ಗೆ ನಕಲಿ ಆದೇಶ ವೈರಲ್ ಡಿಸಿಯಿಂದ ಎಫ್‌ಐಆರ್ ದಾಖಲಿಸುವ ಎಚ್ಚರಿಕೆ

ಮಂಗಳೂರು, ಜು.18– ಮಳೆಯ ಕಾರಣಕ್ಕಾಗಿ ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಆದೇಶ ಪ್ರತಿ ರವಾನಿಸುವವರ ವಿರುದ್ಧ ಎಫ್‌ಐಆರ್ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಎಚ್ಚರಿಕೆ ನೀಡಿದ್ದಾರೆ.

ಜುಲೈ 18ರಂದು ರಜೆ ಘೋಷಿಸಲಾಗಿದೆ ಎಂಬ ನಕಲಿ ಪತ್ರವೊಂದು ಬುಧವಾರ ಸಂಜೆ ವೈರಲ್ ಆದ ಬೆನ್ನಲ್ಲೇ ಜಿಲ್ಲಾಧಿಕಾರಿಗಳು ಈ ಎಚ್ಚರಿಕೆ ನೀಡಿದ್ದಾರೆ. ರಜೆಯ ವಿಚಾರವಾಗಿ ಜಿಲ್ಲಾಧಿಕಾರಿಗಳ ಅಧಿಕೃತ ಮೊಬೈಲ್ ನಂಬರ್‌ಗೆ ನಿರಂತರ ಕರೆಗಳು ಬರುತ್ತಿವೆ. ಇದರಿಂದ ಮಳೆಯಿಂದ ಸಂಭವಿಸುವ ವಿಪತ್ತು ನಿರ್ವಹಣೆಗೂ ಅಡ್ಡಿಯಾಗುತ್ತಿದೆ. ಶಾಲಾ ಮಕ್ಕಳ ಹೊರತಾಗಿ ಬೇರೆಯವರು ಇಂತಹ ಕರೆ ಮಾಡುತ್ತಿದ್ದು, ಇದರಿಂದ ಅಧಿಕೃತ ಮೊಬೈಲ್ ಉಪಯೋಗ ಇಲ್ಲದಂತಾಗಿದೆ ಎಂದಿರುವ ಜಿಲ್ಲಾಧಿಕಾರಿ, ಈ ಬಗ್ಗೆ ಕಠಿಣ ನಿರ್ಧಾರ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಶಿಕ್ಷಣ ಇಲಾಖೆಯಿಂದ ಕಂಪ್ಯೂಟರ್ ಖರೀದಿಯಲ್ಲಿ 147 ಕೋಟಿ ಅವ್ಯವಹಾರ ಬಯಲು

● 2010–11ನೇ ಸಾಲಿನ ಐಸಿಟಿ–3 ಯೋಜನೆಯಡಿಯ ಹಗರಣದ ತನಿಖೆ ಸಿಐಡಿಗೆ ● 2,633 ಅನುದಾನಿತ ಪ್ರೌಢಶಾಲೆ, 1,763 ಸರ್ಕಾರಿ ಶಾಲೆಗಳಿಂದ ಕಂಪ್ಯೂಟರ್ ಖರೀದಿ ಬಗ್ಗೆ ಮಾಹಿತಿ ಕೋರಿಕೆ ● ರಾಜ್ಯದ ಎಲ್ಲಾ ಜಿಲ್ಲೆಗಳ ಡಯಟ್ ನೋಡಲ್ ಅಧಿಕಾರಿ, ಆಯಾ ತಾಲೂಕಿನ ಬಿಆರ್‌ಸಿ ಒಳಗೊಂಡ ತಂಡದಿಂದ ಮಾಹಿತಿ ಸಂಗ್ರಹ



ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಚೇರಿ

■ ಎಸ್.ಟಿ.ರವಿಕುಮಾರ್

ಮೈಸೂರು, ಜು.18–ಪ್ರಸಕ್ತ ಕಾಂಗ್ರೆಸ್ ಸರ್ಕಾರದಲ್ಲಿ ಬಯಲಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಹಗರಣ, ಸಾವಿರಾರು ಕೋಟಿ ರೂ. ಮುಡಾ ನಿವೇಶನ ಹಗರಣ, ವಕ್ಫ್ ಮಂಡಳಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಹಗರಣಗಳ ತನಿಖೆಯ ಬೆನ್ನಲ್ಲೇ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ 2010–11ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ 147 ಕೋಟಿ ರೂ. ಇನ್‌ಫರ್ಮೇಷನ್ ಅಂಡ್ ಕಮ್ಯುನಿಕೇಷನ್ ಟೆಕ್ನಾಲಜಿ (ಐಸಿಟಿ)–3 ಯೋಜನೆ ಹಗರಣ ಇದೀಗ ಬೆಳಕಿಗೆ ಬಂದಿದೆ.

14 ವರ್ಷಗಳ ಹಿಂದೆ ನಡೆದಿರುವ ಹಗರಣವನ್ನು ಪ್ರಸ್ತುತ ಕಾಂಗ್ರೆಸ್ ಸರ್ಕಾರ ಸಿಐಡಿ ತನಿಖೆಗೆ ಒಪ್ಪಿಸಿದ್ದು, 2 ತಿಂಗಳೊಳಗೆ ವರದಿ ನೀಡುವಂತೆ ಆದೇಶಿಸಿದೆ. ಅದರನ್ವಯ ತನಿಖೆ ಆರಂಭಿಸಿರುವ ಬೆಂಗಳೂರಿನ ಸಿಐಡಿಯ ಆರ್ಥಿಕ ಅಪರಾಧಗಳ ವಿಭಾಗದ ಡಿವೈಎಸ್ಪಿ ದರ್ಜೆಯ ತನಿಖಾಧಿಕಾರಿ, ಐಸಿಟಿ ಯೋಜನೆ ಸಂಬಂಧ ಅಗತ್ಯ ಮಾಹಿತಿ ಮತ್ತು ದಾಖಲಾತಿ ಒದಗಿಸುವಂತೆ ಕೋರಿ 2024ರ ಏಪ್ರಿಲ್ 16ರಂದು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (Department of State Educational Research and Training) ನಿರ್ದೇಶಕರಿಗೆ ಕೋರಿದ್ದರು.

ಅದರಂತೆ 2024ರ ಜೂನ್ 15ರಂದು ಜ್ಞಾಪನ ಹೊರಡಿಸಿದ ಡಿಎಸ್‌ಇಆರ್‌ಟಿ ನಿರ್ದೇಶಕರು ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು ಪ್ರಕರಣ ಕುರಿತಂತೆ ಮಾಹಿತಿ ಹಾಗೂ ದಾಖಲೆ ಒದಗಿಸುವಂತೆ ಆದೇಶಿಸಿದ್ದಾರೆ.

2010–11ನೇ ಸಾಲಿನಲ್ಲಿ ಐಸಿಟಿ–3 ಯೋಜನೆಯಡಿ ರಾಜ್ಯದ 4,396 ಆಯ್ದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಶಿಕ್ಷಣ ಕಲ್ಪಿಸುವ ನಿಟ್ಟಿನಲ್ಲಿ ಪೂರೈಕೆಯಾದ ಕಂಪ್ಯೂಟರ್‌ಗಳು ಹಾಗೂ ಇನ್ನಿತರ ಉಪಕರಣ ಸರಬರಾಜು ಹಾಗೂ ಅವುಗಳ ನಿರ್ವಹಣಾ ಗುತ್ತಿಗೆ, ಜಾಲದ ಬಗ್ಗೆ ಮಾಹಿತಿ ಮತ್ತು ದಾಖಲಾತಿ ಒದಗಿಸುವಂತೆ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಯೋಜನೆಗೆ ಸಂಬಂಧಿಸಿದಂತೆ 1,763 ಸರ್ಕಾರಿ ಹಾಗೂ 2,633 ಅನುದಾನಿತ ಪ್ರೌಢಶಾಲೆಗಳ ಪಟ್ಟಿ ಲಗತ್ತಿಸಿ ಜ್ಞಾಪನಾ ಪತ್ರ ಕಳುಹಿಸಲಾಗಿದ್ದು, ಅದರನ್ವಯ ಡಯಟ್ ಹಂತದಲ್ಲಿ ತಮ್ಮ ಜಿಲ್ಲೆಯ ತಾಲೂಕು ಡಯಟ್ ನೋಡಲ್ ಅಧಿಕಾರಿ ಹಾಗೂ ಬ್ಲಾಕ್ ರಿಸೋರ್ಸ್ ಅಧಿಕಾರಿ (BRC)ಯನ್ನೊಳಗೊಂಡ ತಂಡ ರಚಿಸಿ, ಆ ದ್ವಿಸದಸ್ಯ ತಂಡವು, ತಮ್ಮ ವ್ಯಾಪ್ತಿಗೆ ಬರುವ ಶಾಲೆಗಳಲ್ಲಿ ಐಸಿಟಿ–3 ಯೋಜನೆಗೆ ಬಳಸಿರುವ ಉಪಕರಣಗಳ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ.

ಈ ದ್ವಿಸದಸ್ಯ ತಂಡವು ಪಟ್ಟಿಯಲ್ಲಿ ನೀಡಿರುವ ತಮ್ಮ ತಾಲೂಕಿನ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ಭೇಟಿ ನೀಡಿ ಕಂಪ್ಯೂಟರ್ ತರಬೇತಿಗೆ ಗುರ್ತಿಸಿರುವ ಸ್ಥಳ, ಪೂರೈಸಿರುವ ಪೀಠೋಪಕರಣ, ಕಂಪ್ಯೂಟರ್ ಪರಿಕರಗಳು, ನೆಟ್‌ವರ್ಕಿಂಗ್ ವ್ಯವಸ್ಥೆ ಬಗ್ಗೆ ಮಾಹಿತಿ ನೀಡುವಂತೆ ನಿರ್ದೇಶಕರು ತಿಳಿಸಿದ್ದಾರೆ.

ಸೈಟ್ ಸಿದ್ಧತೆಗಾಗಿ ಶಾಲೆಗೆ ಬಿಡುಗಡೆಯಾದ ಅನುದಾನ ಬಳಕೆ, ಪೀಠೋಪಕರಣಗಳ ದಾಸ್ತಾನಿನ ಮಾಹಿತಿ, ದಾಸ್ತಾನು ವಹಿಯ ದೃಢೀಕೃತ ಪ್ರತಿ, ಎಂಎಫ್‌ಡಿ ಪ್ರಿಂಟರ್ಸ್, ಯುಪಿಎಸ್ ಬ್ಯಾಟರಿಗಳು, ಪ್ರೊಜೆಕ್ಟರ್‌ಗಳ ಸಂಖ್ಯೆ ಮತ್ತು ಅವು ಸುಸ್ಥಿತಿಯಲ್ಲಿರುವ ಬಗ್ಗೆ ದೃಢೀಕೃತ ಪ್ರತಿ ಪಡೆಯುವಂತೆಯೂ ಅವರು ಜ್ಞಾಪನಾ ಪತ್ರದಲ್ಲಿ ಸೂಚಿಸಿದ್ದಾರೆ. ಎಎಂಸಿ ಸಂಬಂಧ ಶಾಲೆಗೆ ಸರಬರಾಜಾದ ಕಂಪ್ಯೂಟರ್ ಸಲಕರಣೆಗಳ ಕಾರ್ಯ ನಿರ್ವಹಣೆ ಕುರಿತಂತೆ ಅಂದಿನ ಶಾಲಾ ಮುಖ್ಯೋಪಾಧ್ಯಾಯರು ನೀಡಲಾದ ಫೀಲ್ಡ್ ಸರ್ವೆ ವರದಿಯ ದೃಢೀಕೃತ ಪ್ರತಿ, ನೆಟ್‌ವರ್ಕಿಂಗ್ ಸಂಬಂಧ ಕಂಪ್ಯೂಟರ್ ಕೊಠಡಿಯಲ್ಲಿ ಸಜ್ಜುಗೊಳಿಸಿದ LAN, Network, Wires, Plug Points ಬಗ್ಗೆ ಮಾಹಿತಿ ಪಡೆಯಬೇಕು ಎಂದು ತಿಳಿಸಲಾಗಿದೆ.

ಕಳೆದ 15 ವರ್ಷಗಳ ಹಿಂದೆ ನಡೆದಿರುವ 147 ಕೋಟಿ ರೂ.ಗಳ ಶಾಲಾ ಕಂಪ್ಯೂಟರ್ ಹಗರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ಕೈಗೆತ್ತಿಕೊಂಡಿದ್ದು, ಅದಕ್ಕೆ ಪೂರಕ ಮಾಹಿತಿ ಒದಗಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

ನಕ್ಕರೆ ಅದೇ ಸ್ವರ್ಗ

ಬಸ್ಯಾ : ನೋಡಿಲ್ಲಿ ಪೇಪರ್. ಲಾಂಗ್ ಜಂಪ್‌ನಲ್ಲಿ ಚಿನ್ನದ ಪದಕ ಕಳೆದುಕೊಂಡ ಇಂಡಿಯನ್ ಅಥ್ಲೀಟ್ ಅಂತಿದೆ.

ಸಂತ : ಥೂ... ಯಾರು ಹೇಳಿದ್ರು ಅವನಿಗೆ ಮೆಡಲ್ ಹಾಕ್ಕೊಂಡ್ ಜಂಪ್ ಮಾಡೋಕೆ!

ಮೈಸೂರು ಮಿತ್ರ

ಶುಕ್ರವಾರ, 19 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನೀರಿನ ಸಾಗರ ದಾಟಲು ತೆಪ್ಪ ಬೇಕು...
ಸಂಸಾರದ ಸಾಗರ ದಾಟಲು ತೆಪ್ಪಗೆ ಇರಬೇಕು.. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗಳಿಗೆಯಲ್ಲಿ ಮಾಡಿದ ತಪ್ಪು, ಸಾಯುವವರೆಗೂ ಮುಪ್ಪು

ನಿಮ್ಮ ಪತ್ರಗಳು

■ ಕಿರಿದಾದ ದಾರಿಯಲ್ಲಿ ತರಕಾರಿ ಮಾರುವವರ ಆರ್ಭಟ

ಮಾನ್ಯರೆ,

ಮೈಸೂರಿನ ಹೆಬ್ಬಾಳು–ಮೇಟಗಳ್ಳಿ ಮಾರ್ಗದಿಂದ ಸೂರ್ಯ ಬೇಕರಿ ವೃತ್ತಕ್ಕೆ ಸೇರುವ ಮಾರ್ಗ ಮಧ್ಯೆ ಬರುವ ಬಸವನಗುಡಿಯಲ್ಲಿ ಬಹಳ ದಿನಗಳಿಂದ ತರಕಾರಿ ಮಾರುವವರ ಆರ್ಭಟ ಹೆಚ್ಚಾಗಿದೆ. ಮೊದಲೇ ರಸ್ತೆ ಕಿರಿದಾಗಿದ್ದು ಇದರ ಮೇಲೆ ತರಕಾರಿ ಮಾರಾಟಗಾರರು ಪ್ರತಿದಿನ ಸಂಜೆ ವೇಳೆ ಪೂರ್ಣ ಬಸವನಗುಡಿ ದೇವಸ್ಥಾನದಿಂದ ಸೂರ್ಯ ಬೇಕರಿವರೆಗೂ ಫುಟ್‌ಪಾತ್ ಹಾಗೂ ರಸ್ತೆಯನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡು ವ್ಯಾಪಾರ ಮಾಡುವ ಮೂಲಕ ರಸ್ತೆ ಸಂಚಾರವನ್ನು ಹಾಳು ಮಾಡುತ್ತಿದ್ದಾರೆ. ನಗರದ ಹೊರವರ್ತುಲ ರಸ್ತೆ, ಜಿಲ್ಲಾಸ್ಪತ್ರೆ, ಜಯದೇವ ಆಸ್ಪತ್ರೆ, ಇಎಸ್‌ಐ, ಒಂಟಿಕೊಪ್ಪಲು ಮಾರ್ಗದಿಂದ ಮೇಟಗಳ್ಳಿ ಮಾರ್ಗದ ಮುಖಾಂತರ ಚಲಿಸುವ ಬಸ್ಸು ಹಾಗೂ ಇತರೆ ವಾಹನಗಳಿಗೆ ಸಮಸ್ಯೆಯುಂಟಾಗುತ್ತಿದೆ. ಪಾದಚಾರಿಗಳು ದಾರಿ ಸಿಗದೇ ರಸ್ತೆಯಲ್ಲಿ ಓಡಾಡುವುದರಿಂದ ಅನೇಕ ಅಪಘಾತಗಳು ಸಂಭವಿಸಿದರೂ ಮುಲಾಜಿಲ್ಲದೇ ತಮ್ಮ ವ್ಯಾಪಾರ ನಡೆಸುತ್ತಿದ್ದಾರೆ. ಇಲ್ಲಿನ ನಿವಾಸಿಗಳು ಪ್ರಶ್ನೆ ಮಾಡಿದರೆ ಗುಂಪು ಸೇರಿ ದಾಂಧಲೆ–ದಬ್ಬಾಳಿಕೆ ಸೃಷ್ಟಿಸುವ ಅನೇಕ ಸಂದರ್ಭಗಳು ವರದಿಯಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಜನರ ಸಂಚಾರ ಅನುಕೂಲತೆ ಹಾಗೂ ಪಾದಚಾರಿಗಳ ಸುರಕ್ಷತೆಗಾಗಿ ಪೊಲೀಸರು ಕ್ರಮ ಕೈಗೊಳ್ಳಬೇಕಾಗಿ ಮನವಿ.

–ಯಶಸ್. ಆರ್, ಮೈಸೂರು.

■ ಪಂಚ ಭಾಗ್ಯಗಳೊಂದಿಗೆ ಹಗರಣಗಳ ಭಾಗ್ಯ ನೀಡಿದ ಕಾಂಗ್ರೆಸ್ ಆತ್ಮ ವಿಮರ್ಶೆ ಮಾಡಿಕೊಳ್ಳಲಿ

ಮಾನ್ಯರೆ,

ಅಧಿಕಾರಕ್ಕೆ ಬಂದ ಒಂದು ವರ್ಷದ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ಹಗರಣಗಳ ಸುಳಿಗೆ ಸಿಲುಕಿಕೊಂಡಿದ್ದು, ವಾಲ್ಮೀಕಿ ನಿಗಮದ ಹಗರಣ, ಮುಡಾ ಹಗರಣ, ವಕ್ಫ್ ಬೋರ್ಡ್, ಪ್ರವಾಸೋದ್ಯಮ ಹಾಗೂ ಅಪೆಕ್ಸ್ ಬ್ಯಾಂಕ್ ಹಗರಣಗಳು ಮುಖ್ಯಮಂತ್ರಿ ಸಿದ್ದರಾಮಯ್ಯರವರ 2.0 ಆಡಳಿತ ವೈಖರಿಯನ್ನು ಪ್ರಶ್ನಿಸುವಂತಾಗಿದೆ.

ಬಿಜೆಪಿ ಸರಕಾರದ ವಿರುದ್ಧ ಭ್ರಷ್ಟಾಚಾರದ ಸಮರವನ್ನೇ ಸಾರಿದ್ದ ಕಾಂಗ್ರೆಸ್, 40 ಪರ್ಸೆಂಟ್ ಕಮಿಷನ್ ಸರ್ಕಾರ, ಪೇಸಿಎಂ ಎಂಬಿತ್ಯಾದಿ ಘೋಷಣೆಗಳ ಮೂಲಕ ಬಿಜೆಪಿಯನ್ನು ಮಣಿಸಿ ಅಧಿಕಾರಕ್ಕೆ ಬಂದ ವರ್ಷದ ಅವಧಿಯಲ್ಲೇ ಸಾಲು ಸಾಲು ಹಗರಣಗಳ ಕಪಿಮುಷ್ಟಿಗೆ ಸಿಲುಕಿ ಪಂಚಭಾಗ್ಯಗಳ ಜೊತೆಗೆ 'ಹಗರಣಗಳ ಭಾಗ್ಯ'ವನ್ನೂ ದಯಪಾಲಿಸಿದೆ.

ಕಳೆದ ಹತ್ತು ವರ್ಷದ ಅವಧಿಯಲ್ಲಿ ಹಗರಣ ಮುಕ್ತ ಆಡಳಿತ ನೀಡಿದ ನರೇಂದ್ರ ಮೋದಿಯವರು 3ನೇ ಬಾರಿಗೆ ಅಧಿಕಾರ ಗದ್ದುಗೆ ಏರಿದ್ದಾರೆ. ಆದರೆ ಮೋದಿಯವರ ಆಡಳಿತವನ್ನು ಟೀಕಿಸುವ ಕೈ ನಾಯಕರು ತಮ್ಮ ಆಡಳಿತ ವೈಖರಿಯನ್ನು ಒಮ್ಮೆ ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಸೂಕ್ತ.

– ಹೆಚ್. ಆರ್. ಪ್ರಸಾದ್, ವಿವೇಕಾನಂದನಗರ, ಮೈಸೂರು.

■ ಸದನದ ಸಮಯ ಜನರ ಸಮಸ್ಯೆಗಳಿಗೆ ಮೀಸಲಿರಲಿ

ಮಾನ್ಯರೇ,

ರಾಜ್ಯದಲ್ಲಿ ಜುಲೈ 15 ರಿಂದ 26 ರವರೆಗೆ ವಿಧಾನಮಂಡಲ ಅಧಿವೇಶನ ಆರಂಭವಾಗಿದ್ದು, ಇದರಲ್ಲಿ ಹಲವಾರು ವಿಚಾರಗಳು ಚರ್ಚೆಯಾಗುತ್ತಿವೆ. ಇತ್ತೀಚೆಗೆ ವಿಧಾನಮಂಡಲ ಅಧಿವೇಶನ ಎಂದರೆ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವಿನ ಜಟಾಪಟಿ, ಜಂಗಿಕುಸ್ತಿಗೆ ವೇದಿಕೆಯಾಗಿದೆ. ಬರೀ ಸದ್ದು ಗದ್ದಲ ಪ್ರತಿಪಕ್ಷಗಳ ಸಭಾತ್ಯಾಗಗಳಿಗಷ್ಟೇ ಸದನದ ಸಮಯ ವ್ಯರ್ಥವಾಗದಿರಲಿ.

ಸಾರ್ವಜನಿಕ ಹಿತಾಸಕ್ತಿಯುಳ್ಳ ಒಳಗೊಂಡ ಹತ್ತಾರು ವಿಷಯಗಳ ವಿಸ್ತೃತವಾದ ಚರ್ಚೆಗೆ ಸದನದಲ್ಲಿ ಸಮಯ ಮೀಸಲಿದ್ದರೆ ಒಳ್ಳೆಯದು. ಆಡಳಿತ ಮತ್ತು ವಿರೋಧಿ ಪಾಳಯ ಎರಡೂ ಕಡೆಯ ಸದಸ್ಯರು ಪರಸ್ಪರ ಆರೋಪ ಪ್ರತ್ಯಾರೋಪಗಳ, ಏರುದನಿಯ, ನಿಂದನೆಯ ಮಾತುಗಳಿಗೆ ಸೀಮಿತರಾಗದೇ ದಾಖಲೆಗಳನ್ನು ಆಧರಿಸಿ ತಮ್ಮ ವಾದ ಮಂಡಿಸಿ, ಅದಕ್ಕೆ ಸರ್ಕಾರ ಕೂಡ ತನ್ನ ಉತ್ತರ ನೀಡುವ ನಿರ್ದಿಷ್ಟ ಸಮಯ ಬಂದಾಗ ದಾಖಲೆಗಳೊಂದಿಗೆ ಉತ್ತರಿಸಿದರೆ ಸದನದ ಸಮಯ ಸದ್ವಿನಿಯೋಗವಾದಂತೆಯೇ ಸರಿ. ಸದಸ್ಯರುಗಳು ಕೂಡ ತಮಗೆ ಸಿಕ್ಕಿರುವ ಸಮಯಾವಕಾಶವನ್ನು ಕ್ಷೇತ್ರದ ಸಮಸ್ಯೆ, ಮನವಿಗಳ ಬಗ್ಗೆ ಮಾತಾಡಿದರೆ ಇನ್ನೂ ಒಳ್ಳೆಯದು. ಒಟ್ಟಿನಲ್ಲಿ ಅಧಿವೇಶನದಲ್ಲಿ ಸಮಸ್ಯೆಗಳ ಚರ್ಚೆಯು ಆರೋಗ್ಯಕರವಾಗಿ ಆಗಬೇಕಿದೆ. ಸದನದಲ್ಲಿ ವಿನಾಕಾರಣ ಗದ್ದಲಗಳಿಗೆ ಆಸ್ಪದ ಕೊಡದೇ ಕಾಲಹರಣ ಮಾಡದೇ ಜನರು ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಈ ಬಾರಿಯ ವಿಧಾನಮಂಡಲ ಅಧಿವೇಶನವು ಯಶಸ್ವಿಯಾಗಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಆಸ್ಥಾನ ವಿದ್ವಾನ್

ಮಾನ್ಯರೆ,

'ಮೈಸೂರು ಮಿತ್ರ'ದ ಮೇ 26ರ 'ವಾರದ ಮಿತ್ರ' ಸಂಚಿಕೆಯಲ್ಲಿ ಪ್ರಕಟವಾದ ಎಸ್. ಪ್ರಕಾಶ್‌ಬಾಬು ಅವರ 'ಆಧ್ಯಾತ್ಮಿಕ ಸಂತ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ' ಲೇಖನ ಸಮುಚಿತವೂ ಸಮೀಚೀನವೂ ಆಗಿತ್ತು (ಲೇಖಕರಿಗೆ ಅಭಿನಂದನೆ).


ಒಂದು ಮಾತಿನಲ್ಲಿ ಹೇಳುವುದಾದರೆ, ಶ್ರೀ ಸಚ್ಚಿದಾನಂದ ಸ್ವಾಮೀಜಿ ಅವರೊಂದು ಅಧ್ಯಾತ್ಮ ಮೇರು; ಜಗದ್ಗುರು; '...ದೇವ ಕೃಷಿಕರು' ಕೂಡ.

ಇಲ್ಲಿ ವೈಯಕ್ತಿಕ ಸಂಗತಿಯೊಂದನ್ನು ತಿಳಿಸಬೇಕಾಗಿದೆ. ಪೂಜ್ಯ ಸ್ವಾಮೀಜಿಯವರು ಕೆಲ ವರ್ಷಗಳ ಹಿಂದೆ ನನಗೆ 'ದತ್ತಪೀಠ ಆಸ್ಥಾನ ವಿದ್ವಾನ್' ಬಿರುದನ್ನು ಅನುಗ್ರಹಿಸಿದರು. ಸಾಮಾನ್ಯವಾಗಿ ಇಂಥ ಪದವಿ ಅರಮನೆಯಿಂದ ಪ್ರಣೀತವಾಗುತ್ತದೆ. ಆದರೆ ನನ್ನಂಥ (?) ವ್ಯಕ್ತಿಗೆ 'ಗುರುಮನೆ'ಯಿಂದ ಪ್ರಾಪ್ತವಾದುದು ವಿಸ್ಮಯಕರವೇ ಸರಿ!

ಆ ವರ್ಷ ಈ ಗೌರವಕ್ಕೆ ಪಾತ್ರನಾದವನು ಮೈಸೂರಿನಲ್ಲಿ, (ಕರ್ನಾಟಕದಲ್ಲಿ?) ನಾನೊಬ್ಬನೆ ಇರಬೇಕು! ಇತರ ಪ್ರಶಸ್ತಿ ಪುರಸ್ಕೃತರು ಬಹುತೇಕ ಆಂಧ್ರದವರು! ಸ್ವಾಮೀಜಿಯ ಔದಾರ್ಯ ಸೀಮಾತೀತ.

ನಾನು ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದ್ದೇನೆ. ಅವುಗಳಲ್ಲಿ 'ದ.ಪೀ. ಆಸ್ಥಾನ ವಿದ್ವಾನ್' ಮಕುಟಪ್ರಾಯವಾದುದೆಂದು ಭಾವಿಸುತ್ತೇನೆ. (ಪ್ರತಿಷ್ಠಿತ ಪಂಪ ಪ್ರಶಸ್ತಿ, ಇತ್ತೀಚೆಗೆ ಬಂತು). ಸ್ವಾಮೀಜಿ ಅವರಿಗೆ ನಾನು ಚಿರಋಣಿ, ಅವರು ಚಿರಾಯುವಾಗಲಿ! ಧನ್ಯೋಸ್ಮಿ.

– ಸಿಪಿಕೆ, ಮೈಸೂರು.



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಮೈಸೂರು ಮಾಜಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರ ಸತ್ಯವಾಕ್ಯವನ್ನು ಆಲಿಸುವ ಸಮಯ ಬಂದಿದೆ



ಮುಡಾ ಪ್ರಧಾನ ಕಚೇರಿ.



ಮೈಸೂರು ಮಾಜಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ

ಪ್ರಾಣಿಗಳ ಪೈಕಿ ಐದು ಪಂಚೇಂದ್ರಿಯಗಳ ಜೊತೆಗೆ ಆರನೇ ಜ್ಞಾನೇಂದ್ರಿಯವನ್ನು (Sixth Sense) ಹೊಂದಿರುವ ಮನುಷ್ಯನನ್ನು ಅತ್ಯಂತ ಬುದ್ಧಿಜೀವಿ ಎಂದು ಪರಿಗಣಿಸಲಾಗಿದೆ.

ಈ ವಿಶೇಷ ಗುಣ ಸಾಮರ್ಥ್ಯದಿಂದ ಕೆಲವು ಜನ ಒಂದು ವಿಷಯ ಇಲ್ಲವೆ ಓರ್ವ ವ್ಯಕ್ತಿಗೆ ಸಂಬಂಧಪಟ್ಟಂತೆ ಮುಂದೇನಾಗಬಹುದೆಂಬುದನ್ನು ಹಿಂದಿನ ಘಟನೆಗಳನ್ನು ಗಮನಿಸಿ ಇಲ್ಲವೆ ಆಧರಿಸಿ ಹೇಳುವ ಶಕ್ತಿಯನ್ನು ಹೊಂದಿರುತ್ತಾರೆ.

ಪ್ರಸ್ತುತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಲ್ಲಿ ನಡೆದಿರುವಂತಹ ಒಂದು ಹಗರಣ ಹಾಗೂ ವಿವಾದ ಜ್ವಾಲಾಮುಖಿಯಂತೆ ಭುಗಿಲೆದ್ದಿದ್ದು, ಇದು ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕಾರ ಗದ್ದುಗೆಗೆ ಕಂಟಕವಾಗಿ ಪರಿಣಮಿಸಿದೆ. ಇವೆಲ್ಲಾ ಬೆಳವಣಿಗೆಗಳ ಸಂಬಂಧ 2021ರಲ್ಲಿಯೇ ಅಂದಿನ ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಭವಿಷ್ಯ ನುಡಿದಿದ್ದರು.

ರೋಹಿಣಿ ಸಿಂಧೂರಿ, ಮೈಸೂರು ಜಿಲ್ಲಾಧಿಕಾರಿಯಾಗಿದ್ದಾಗ ತಮ್ಮ ಕರ್ತವ್ಯಗಳನ್ನು ದಿಟ್ಟವಾಗಿಯೇ ನಿರ್ವಹಿಸಿದವರು. ಆದರೆ ರಾಜ್ಯ ಸರ್ಕಾರವೇ ಕುರುಡು, ಕಿವುಡತನದಿಂದ ಅವರ ವಿಚಾರದಲ್ಲಿ ವರ್ತಿಸಿತು. ಈಗ, ಕೇವಲ ಮೂರು ವರ್ಷಗಳ ನಂತರ 2024ರಲ್ಲಿ ಒಂದು ಆಡಳಿತಾತ್ಮಕ ವಂಚನೆ, ರಾಜ್ಯದ ಬೊಕ್ಕಸಕ್ಕೆ ಭಾರಿ ನಷ್ಟ ಹಾಗೂ ಎಲ್ಲಕ್ಕೂ ಮಿಗಿಲಾಗಿ ಈ ಹಗರಣದಲ್ಲಿ ಪ್ರಭಾವಶಾಲಿ ಹಾಗೂ ಬಲಾಢ್ಯ ರಾಜಕಾರಣಿಗಳು ಮತ್ತು ಅಧಿಕಾರಿಗಳು ಶಾಮೀಲಾಗಿರುವುದಕ್ಕೆ ಸಾಕ್ಷಿಭೂತರಾಗಿದ್ದೇವೆ.

ಅಂದಿನ ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, 'ಮೈಸೂರು ಮಿತ್ರ' ಪ್ರತಿನಿಧಿ ಬಿ.ಸಿ. ತಿಮ್ಮಯ್ಯ ಅವರಿಗೆ 08.06.2021 ರಂದು ನೀಡಿದ ಸಂದರ್ಶನದಲ್ಲಿ, **"ಯಾವುದೇ ಅಧಿಕಾರಿ ಮೈಸೂರಲ್ಲಿ ಭೂ ಮಾಫಿಯಾ ವಿರುದ್ಧ ಸೊಲ್ಲೆತ್ತುವ ಧೈರ್ಯ ಇನ್ನು ಮಾಡಲಾರರು"** ಎಂದು ಹೇಳಿದ್ದರು. ಅದರ ಅರ್ಥ ಏನೆಂದರೆ ಈ ಭೂ ಮಾಫಿಯಾಗಳಿಗೆ ಸರ್ಕಾರದ ಬೆಂಬಲವಿದೆ ಎಂಬುದು.

ಇದೇ ವೇಳೆ ಅವರು ಮೈಸೂರು ಜಿಲ್ಲೆಯಲ್ಲಿ 2,991 ಸಣ್ಣ ಮತ್ತು ದೊಡ್ಡ ಪ್ರಮಾಣದ ಕೆರೆಗಳಿವೆ. ಅವುಗಳನ್ನು ಹೇಗೆ ನಾಶಪಡಿಸಲಾಗಿದೆ ಮತ್ತು ಯಾವ ರೀತಿಯಲ್ಲಿ ಅವುಗಳನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ ಎಂಬುದನ್ನೂ ಹೇಳಿ, **'ನೀವು ಪತ್ರಿಕೆಯಲ್ಲಿ ಬರೆಯುತ್ತೀರಿ, ನಂತರ ಅದು ಮರೆತು ಹೋಗುತ್ತದೆ. ಆದರೆ, ಈ ವಿಚಾರವನ್ನು ನೀವು ಸದ್ಯದಲ್ಲೇ ಒಂದು ದಿನ ನೆನಪಿಸಿಕೊಳ್ಳುತ್ತೀರಿ' ಎಂದು ಹೇಳಿದ್ದರು. ಆ ದಿನ ಬಂದೇಬಿಟ್ಟಿದೆ.**

ಆ ವೇಳೆ ಬಿಜೆಪಿ ಸರ್ಕಾರದ ಅಡಿಯಲ್ಲಿದ್ದ ಮುಡಾ, **50:50 ಅನುಪಾತದ** ಆಧಾರದ ಮೇಲೆ ನಿವೇಶನಗಳನ್ನು ಮುಡಾ ಮತ್ತು ಭೂಮಿ ಕಳೆದುಕೊಂಡವರ ನಡುವೆ ಹಂಚಿಕೊಳ್ಳುವ ನಿರ್ಣಯವನ್ನು ಕೈಗೊಂಡಿತ್ತು. ಆದರೆ, ಮುಡಾ ವ್ಯವಹಾರಗಳ ವಿಚಾರದಲ್ಲಿ ರೋಹಿಣಿ ಸಿಂಧೂರಿ ಏನೂ ಮಾಡುವಂತಿರಲಿಲ್ಲ. ಅವರು ಭೂ ಕಬಳಿಕೆ ಬಗ್ಗೆ ಮಾತ್ರವೇ ಮಾತನಾಡುತ್ತಿದ್ದರು.

ಅದಾಗ್ಯೂ, ಕೆಟ್ಟ ಕಾರಣಗಳಿಗೋಸ್ಕರ ಮುಡಾ ಸುದ್ದಿಯಲ್ಲಿರುವಾಗ ನಾನು ಈಗ ಸಾಕಷ್ಟು ದುರುಪಯೋಗವಾಗಿರುವ 50:50 ಅನುಪಾತದ ಯೋಜನೆ ಹಾಗೂ ನಮ್ಮ ರಾಜಕಾರಣಿಗಳು, ಅಧಿಕಾರಿ ವರ್ಗದವರು ಮತ್ತು ಅವರ ಮಿತ್ರರಿಗೆ ಅನುಕೂಲ ಮಾಡಿಕೊಡುವ ಒಂದು ಕುಟಿಲ ತಂತ್ರದ ಬಗ್ಗೆ ಒಂದಿಷ್ಟು ಮಾತುಗಳನ್ನು ಹೇಳಲೇಬೇಕಾಗಿದೆ. **50:50 ಅನುಪಾತದ ಯೋಜನೆಯು, ಭೂಮಿಯನ್ನು ಕಳೆದುಕೊಂಡವರ (ಮುಡಾದಿಂದ ವಶಪಡಿಸಿಕೊಳ್ಳಲಾದ ಭೂಮಿಯ ಮಾಲೀಕರು) ಹಾಗೂ ಮುಡಾ ನಡುವೆ ಆಗುವ ಒಪ್ಪಂದ ಅಥವಾ ವ್ಯವಹಾರ (deal)** ಎಂದು ನಾನು **ಹೇಳಬಯಸುತ್ತೇನೆ. ಈ ಯೋಜನೆಯ ಅಡಿಯಲ್ಲಿ, ಮುಡಾ ಭೂಮಿಯನ್ನು ಕಳೆದುಕೊಂಡವರಿಗೆ ಹಣದ ರೂಪದಲ್ಲಿ ಪರಿಹಾರ ನೀಡುವುದಿಲ್ಲ. ಅದಕ್ಕೆ ಬದಲಾಗಿ, ವಶಪಡಿಸಿಕೊಂಡ ಭೂಮಿಯಲ್ಲಿ ಅಭಿವೃದ್ಧಿಪಡಿಸಲಾದ ಶೇಕಡಾ 50ರಷ್ಟು ನಿವೇಶನವನ್ನು, ಭೂಮಿ ಕಳೆದುಕೊಂಡವರಿಗೆ ನೀಡಲಾಗುತ್ತದೆ. ಬಿಡಿ ನಿವೇಶನಗಳು ಅಥವಾ ಈಗಾಗಲೇ ರಚಿಸಲಾಗಿರುವ ಪ್ರಮುಖ ಬಡಾವಣೆಯ ನಿವೇಶನಗಳನ್ನಲ್ಲ. ಅದರ ಬಗ್ಗೆ ಹೆಚ್ಚು ನನಗೆ ಗೊತ್ತಿಲ್ಲ.**

ಆದರೆ, ದಿನಾಂಕ 20–11–2020 ರಂದು ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆ ನಡಾವಳಿಯಲ್ಲಿ ನನಗೆ ದೊರಕಿದ ಪ್ರತಿ ಪ್ರಕಾರ, ಅದರ 13ನೇ ಪುಟದ ಕೊನೆಯಲ್ಲಿ ನಿರ್ಣಯ ಸಂಖ್ಯೆ 3ರ ವಿಷಯವು ಸ್ಪಷ್ಟವಾಗಿ ನಮೂದಾಗಿಲ್ಲ. ಅದು ಹೀಗಿದೆ: ಪ್ರಾಧಿಕಾರ ಭೂ ಸ್ವಾಧೀನಪಡಿಸದೆ ಉಪಯೋಗಿಸಿಕೊಂಡಿರುವಂತಹ ಪ್ರಕರಣಗಳಲ್ಲಿ ಭೂ

> **ದಿನಾಂಕ 20–11–2020 ರಂದು ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆ ನಡಾವಳಿ ಯಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯ:**
> **"ಪ್ರಾಧಿಕಾರ ಭೂ ಸ್ವಾಧೀನಪಡಿಸದೆ ಉಪಯೋಗಿಸಿಕೊಂಡಿರುವಂತಹ ಪ್ರಕರಣಗಳಲ್ಲಿ ಭೂ ಪರಿಹಾರ ರೂಪದಲ್ಲಿ ಪರಿಹಾರವಾಗಿ ಅಭಿವೃದ್ಧಿಪಡಿಸಿದ ಒಟ್ಟು ವಿಸ್ತೀರ್ಣದ ಪೈಕಿ ಶೇ.50 ವಿಸ್ತೀರ್ಣದ ಅಭಿವೃದ್ಧಿಪಡಿಸಿದ ಜಾಗವನ್ನು ಒಪ್ಪುವ ಪ್ರಕರಣಗಳಲ್ಲಿ ನೀಡುವುದು".**

ಪರಿಹಾರ ರೂಪದಲ್ಲಿ ಪರಿಹಾರವಾಗಿ ಅಭಿವೃದ್ಧಿಪಡಿಸಿದ ಒಟ್ಟು ವಿಸ್ತೀರ್ಣದ ಪೈಕಿ ಶೇ.50 ವಿಸ್ತೀರ್ಣದ ಅಭಿವೃದ್ಧಿಪಡಿಸಿದ ಜಾಗವನ್ನು ಒಪ್ಪುವ ಪ್ರಕರಣಗಳಲ್ಲಿ ನೀಡಲು ತೀರ್ಮಾನಿಸಲಾಯಿತು.

ಮುಡಾದ (ಈ ಹಿಂದೆ ಇದು ಮೈಸೂರು ನಗರ ವಿಶ್ವಸ್ಥ ಮಂಡಳಿ– ಸಿಐಟಿಬಿ) ವಿಷಯದಲ್ಲಿ ಓರ್ವ ಪತ್ರಕರ್ತನಾಗಿ ಸಿಐಟಿಬಿ ಮತ್ತು ಮುಡಾದ ವ್ಯವಹಾರಗಳ ಬಗ್ಗೆ 1978ರಿಂದ ನನ್ನ ನೆನಪುಗಳನ್ನು ಮೆಲುಕು ಹಾಕಲು ಬಯಸುತ್ತೇನೆ.

ಅಂದಿನ ಸಿಐಟಿಬಿ ಆಡಳಿತ ಮಂಡಳಿಯಲ್ಲಿ ಅಧಿಕ ಮಂದಿ ತಜ್ಞರು ಹಾಗೂ ಕಡಿಮೆ ಸಂಖ್ಯೆಯ ರಾಜಕಾರಣಿಗಳು ಇರುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಹೀಗಾಗಿಯೇ ದಿವಂಗತ ಎಫ್.ಕೆ.ಇರಾನಿಯವರಂತಹ ಕೈಗಾರಿಕೋದ್ಯಮಿಗಳು, ಕರ್ನಾಟಕದ ಮುಖ್ಯ ಇಂಜಿನಿಯರ್ ಆಗಿದ್ದ ಜಿ.ಎಸ್.ಗಣಪತಿ ಹಾಗೂ ನಗರ ಯೋಜನಾ ಪರಿಣತರು, ನನಗೆ ತಿಳಿದಂತೆ ಇತರ ಕೆಲವು ತಜ್ಞರು ಇದ್ದರು. ನಾನು ಮೈಸೂರಿಗೆ ಬಂದಂತಹ ಸಮಯದಲ್ಲಿ ಬಿ.ಎನ್.ಕೆಂಗೇಗೌಡ ಮತ್ತು ಕೆಂಪೇಗೌಡರು ಅಧ್ಯಕ್ಷರಾಗಿದ್ದರು.

ಗಾಂಧಿವಾದಿಗಳಾಗಿ, ಮಾದರಿ ರಾಜಕಾರಣಿಗಳಾಗಿದ್ದಂತಹವರು. ಇವರ ಪೈಕಿ ಬಿ.ಎನ್.ಕೆಂಗೇಗೌಡರು ನಮಗೆ ಡಿ.ದೇವರಾಜ ಅರಸ್ ರಸ್ತೆ ನೀಡಿದರೆ, ಕೆಂಪೇಗೌಡರು ಕುವೆಂಪು ನಗರದಲ್ಲಿರುವ ವಿಶ್ವಮಾನವ ಜೋಡಿ ರಸ್ತೆಯನ್ನು ನೀಡಿದಂತಹವರು.

ಅದಾದ ನಂತರ, ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾಯರ ಕಾಲದಿಂದ ಮೈಸೂರಿನ ಸಿಐಟಿಬಿಯು ಅವನತಿಯ ಹಾದಿ ಹಿಡಿದು ಈಗ ನೆಲ ಕಚ್ಚಿದೆ. ಮೈಸೂರಿಗರ ಅಭಿಮಾನಕ್ಕೆ ಪಾತ್ರರಾದ ಮತ್ತೊಬ್ಬರು ಅಧ್ಯಕ್ಷರೆಂದರೆ ಅದು **ಡಿ. ಮಾದೇಗೌಡರು. ಮನೆ ಮಾದೇಗೌಡರೆಂದೇ ಹೆಸರು ಮಾಡಿದವರು.**

ಕಳೆದ ಒಂದು ದಶಕಕ್ಕೂ ಅಧಿಕ ಕಾಲದಿಂದ ದುರಾಡಳಿತ ಮತ್ತು ಭ್ರಷ್ಟಾಚಾರ ಯಾವ ರೀತಿಯಲ್ಲಿ ಮುಡಾವನ್ನು ಸಂಪೂರ್ಣ ಆವರಿಸಿದೆಯೆಂದರೆ, ಅನೇಕರು ಒಳ್ಳೆಯ ಕಾರಣಕ್ಕೆ ಇದನ್ನು ಮುಚ್ಚುವ ಸಲಹೆ ನೀಡಿದ್ದಾರೆ. ಹಾಗೂ ಖಾಸಗಿ ಅಭಿವೃದ್ಧಿಗಾರರೊಂದಿಗೆ (Private Developers) ವ್ಯವಹರಿಸುವ ಉಳಿದ ಅದರ ಜವಾಬ್ದಾರಿಯನ್ನು ನಗರಾಭಿವೃದ್ಧಿ ಸಚಿವಾಲಯಕ್ಕೆ ವಹಿಸಿ, ಅದರ ಸ್ಥಳೀಯ ಕಚೇರಿಯನ್ನು ಇದೇ ಮುಡಾ ಕಟ್ಟಡದಲ್ಲೇ ಪ್ರಾರಂಭಿಸಬಹುದು ಎಂದು ಹೇಳಿದ್ದಾರೆ.

'ಮೈಸೂರು ಮಿತ್ರ'ನ ತಮ್ಮ ಸಂದರ್ಶನದಲ್ಲಿ ರೋಹಿಣಿ ಸಿಂಧೂರಿ, ನಿರ್ಲಜ್ಜ ರಾಜಕಾರಣಿಗಳು ಮತ್ತು ಲ್ಯಾಂಡ್ ಡೆವಲಪರ್ಸ್, ಗೋಮಾಳಗಳು (ಸರ್ಕಾರಿ ಭೂಮಿ) ಮತ್ತು ಕೆರೆಗಳನ್ನು ಯಾವ ರೀತಿ ಕಬಳಿಸುತ್ತಾರೆಂಬುದನ್ನು ಸವಿಸ್ತಾರವಾಗಿ ಹೇಳಿದ್ದರು. ಮೊದಲು ಅವರು ಮಣ್ಣು, ಕೈಗಾರಿಕೆಗಳ ತ್ಯಾಜ್ಯ ಮತ್ತು ನಿರ್ಮಾಣ ಅವಶೇಷ (Construction debris) ಗಳನ್ನು ಕೆರೆಗಳಿಗೆ ತಂದು ಸುರಿದು ಅವುಗಳನ್ನು ಮುಚ್ಚುತ್ತಾರೆ. ನಂತರ ಸಮತಟ್ಟು ಭೂಮಿಯನ್ನಾಗಿ ಮಾಡುತ್ತಾರೆ. ಬಳಿಕ ಕೆರೆ ಮಾಯ!

ರೋಹಿಣಿ ಸಿಂಧೂರಿಯವರು ಮುಂದುವರೆದು ಹೇಳುತ್ತಾರೆ, 61 ಎಕರೆ ವಿಸ್ತಾರದ ಕೇರ್ಗಳ್ಳಿ ಕೆರೆ ಭೂಮಿಯಲ್ಲಿ ಹೌಸಿಂಗ್ ಬೋರ್ಡ್ ಮನೆಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಆದರೆ, ಅದೃಷ್ಟವಶಾತ್, ಅದನ್ನು ಅವರೇ ರದ್ದು ಮಾಡಿಸಿದರು. ಅಚ್ಚರಿ ಎಂದರೆ, ಆ ನಂತರ, ಈ 61 ಎಕರೆ ಕೇರ್ಗಳ್ಳಿ ಕೆರೆಗೆ ಏನಾಯಿತು? ನನಗೆ ಗೊತ್ತಿಲ್ಲ.

ಇದೇ ರೀತಿಯಾಗಿ ಲಿಂಗಾಂಬುಧಿ ಕೆರೆಯನ್ನು ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಗಳು ನಡೆದವು. 'ಮೈಸೂರು ಮಿತ್ರ' ಹಾಗೂ ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಆರಂಭಿಕ ಹಂತಗಳಲ್ಲಿ ಅದರ ಬಗ್ಗೆ ಬರೆದವು. ನಂತರ ಜಿಲ್ಲಾಧಿಕಾರಿಗಳಾಗಿ ಬಂದಂತಹ ಓರ್ವ ಪ್ರಾಮಾಣಿಕ ಅಧಿಕಾರಿ ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ಕಾಪಾಡಿದರು.

ಕುಕ್ಕರಹಳ್ಳಿ ಕೆರೆಯ ಬಗ್ಗೆ ಕಡಿಮೆ ಹೇಳಿದಷ್ಟು ಒಳ್ಳೆಯದು. ಅದರ ಬಗ್ಗೆ ನಾನೇ ಸವಿಸ್ತಾರವಾಗಿ ಬರೆದಿದ್ದೇನೆ. ಈ ಕೆರೆಯನ್ನು ಸಹ ಹುಣಸೂರು ಮುಖ್ಯ ರಸ್ತೆಯ ಕಡೆಯಿಂದ ನಾನಾ ರೀತಿಯ ತ್ಯಾಜ್ಯ, ಕಸ–ಕಡ್ಡಿ ಇತ್ಯಾದಿಗಳನ್ನು ಹಾಕಿ, ಮುಚ್ಚುವ ಕುಟಿಲ ಯೋಜನೆಯನ್ನು ರೂಪಿಸಲಾಗಿತ್ತು. ಸದ್ಯ ನುತರ ಪ್ರೊ.ಕೆ.ಎಸ್.ಹೆಗ್ಡೆ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದಾಗ (ಕುಕ್ಕರಹಳ್ಳಿ ಕೆರೆಯ ಪಾಲಕ) ಕೆರೆಯ ಮಧ್ಯ ಭಾಗಕ್ಕೆ ಕೊಳಚೆ ಮತ್ತು ಕಲ್ಮಶಯುಕ್ತ ನೀರು ಬಂದು ಸೇರುವುದನ್ನು ತಡೆಯಲು ಕೆರೆಯ ಉತ್ತರ ಭಾಗದಲ್ಲಿ ಅಡ್ಡಲಾಗಿ ಏರಿಯನ್ನು ನಿರ್ಮಿಸಿದರು. ಆದರೂ, ಕೆರೆಗೆ ಕೊಳಚೆ ನೀರು ಬಂದು ಸೇರುವುದನ್ನು ಸಂಪೂರ್ಣವಾಗಿ ತಪ್ಪಿಸಲಾಗಲಿಲ್ಲ ಇಂದಿಗೂ ಕೆಟ್ಟ ಕಾರಣಗಳಿಗಾಗಿ ಕುಕ್ಕರಹಳ್ಳಿ ಕೆರೆ ಸುದ್ದಿಯಾಗುತ್ತಿದೆ.

ಮೈಸೂರು ನಗರಕ್ಕೆ ಅರ್ಹರಾದಂತಹ ನಿವೃತ್ತ ಇಲ್ಲವೆ ವೃತ್ತಿನಿರತ ಅಧಿಕಾರಿಗಳು, ಕೈಗಾರಿಕೋದ್ಯಮಿಗಳು, ದೂರದೃಷ್ಟಿವುಳ್ಳ ನಗರ ಯೋಜನಾಕಾರರ ಒಳಗೊಂಡ ಪ್ರಾಮಾಣಿಕ ಸ್ವಯಂಸೇವಕರಿಂದ ಕೂಡಿದ **'ನಾಗರಿಕರ ಗಸ್ತು ಕಾರ್ಯ ಪಡೆ'** (Citizens watchdog Task Force)ಯ ಅಗತ್ಯವಿದೆ. ಇವರು ಜಿಲ್ಲಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ, ಮುಡಾ ಹಾಗೂ ನಗರಾಭಿವೃದ್ಧಿ ಇಲಾಖೆಗೆ ಮಾರ್ಗದರ್ಶನ ನೀಡುವುದರೊಂದಿಗೆ ಸಹಕರಿಸಬೇಕು. ಎಸ್.ಎಂ.ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ಅವರು **ಮೈಸೂರು ಅಜೆಂಡಾ ಟಾಸ್ಕ್ ಫೋರ್ಸ್** ರಚನೆಯ ಪ್ರಯೋಗ ಮಾಡಿದ್ದರು. ಆದರೆ ಅದು ಎಲ್ಲಾ ಸರ್ಕಾರಿ ಪ್ರಾಯೋಜಿತ ಇಲ್ಲವೆ ಅದರ ನೆರವಿನಿಂದ ನಿರ್ವಹಣೆ ಆಗುವ ಸಂಸ್ಥೆಯಂತೆ ವೈಫಲ್ಯ ಕಂಡಿತು.

ನಾನು ಇಲ್ಲಿ ಚಿಂತಿಸಲು ಬೇಕಾದ ಒಂದು ಆಲೋಚನೆಯ ಬೀಜವನ್ನು ಮಾತ್ರ ಬಿತ್ತಿದ್ದೇನೆ. ಅದು ಮೊಳಕೆಯಾಗಿ, ಚಿಗುರೊಡೆದು ಹೆಮ್ಮರವಾಗಿ ಬೆಳೆದು ನಮಗೆ ಉತ್ತಮ ನೆರಳು ಹಾಗೂ ಫಲವನ್ನು ನೀಡಿ, ಎಲ್ಲರೂ ಜೀವಿಸಲು ಮೈಸೂರನ್ನು ಒಂದು ಉತ್ತಮ ನೆಲೆಯಾಗಿಸಬಹುದು ಎಂಬ ಪುಟ್ಟ ಆಶಾಭಾವನೆ ನನ್ನದು. ಮುಂದೆ ನಗರಕ್ಕೆ ಎದುರಾಗಬಹುದಾದ ಆಘಾತವನ್ನು ತಡೆಯಲು ಮೈಸೂರಿನ ನಾಗರಿಕರಾದ ನಾವು ನಮ್ಮ ಕೈಲಾದಷ್ಟು ಪ್ರಯತ್ನವನ್ನು ಮಾಡಬೇಕಿದೆ; ಅದುವೇ 2021 ರಲ್ಲಿ ರೋಹಿಣಿ ಸಿಂಧೂರಿಯವರು ನುಡಿದ ಭವಿಷ್ಯವಾಣಿ ವಿಚಾರದಲ್ಲಿ ಎಚ್ಚರ!. ತಮಗೆ ಸಹಾಯ ಮಾಡುವವರಿಗೆ ದೇವರು ಸಹಾಯ ಮಾಡುತ್ತಾನೆ.

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

e-mail
voice@starofmysore.com

ನಾಳೆ ಅಂತರ ಶಾಲಾ ಸಂಸ್ಕೃತೋತ್ಸವ ಸ್ಪರ್ಧೆ

ಮೈಸೂರು, ಜು.18- ಭಾರತೀಯ ವಿದ್ಯಾ ಭವನ ಮೈಸೂರು ಕೇಂದ್ರದ ವತಿಯಿಂದ ಅಂತರ ಶಾಲಾ ಸಂಸ್ಕೃತೋತ್ಸವ ಸ್ಪರ್ಧೆ 2024–25 ಅನ್ನು ಮೈಸೂರು ವಿಜಯನಗರದ ಮೊದಲನೇ ಹಂತದಲ್ಲಿರುವ ಭಾರತೀಯ ವಿದ್ಯಾ ಭವನದಲ್ಲಿ ಜು.20 (ಶನಿವಾರ) ರಂದು ಬೆಳಿಗ್ಗೆ 9.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಸುಮಾರು 25 ಶಾಲೆಯ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಲಿದ್ದಾರೆ. ಮೈಸೂರು ಬಿವಿಬಿ ಛೇರ್ಮನ್ ಡಾ.ಕೆ.ಬಿ. ಗಣಪತಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ಮಹಾಜನ ಪ್ರೌಢಶಾಲೆಯ ಸಂಸ್ಕೃತ ಅಧ್ಯಾಪಕರಾದ ಶ್ರೀಮತಿ ಸುಕನ್ಯ ರಾಮಶೇಷಯ್ಯ ಮುಖ್ಯ ಅತಿಥಿಗಳಾಗಿರುವರು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀವಾಣಿ ಶಾವಾ ಮೊ.ನಂ.9620716542, ಪ್ರವೀಣ್ ಮೊ.ನಂ. 8123046343, ಶ್ರೀಕಾಂತ್ ಮೊ.ನಂ.9699654899 ಹಾಗೂ ನಾಗರಾಜ ಹೆಗ್ಡೆ ಮೊ.ನಂ.9731464741 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೂರನೇ ಪುಟದಿಂದ

ಅಸ್ಥಿರಗೊಳಿಸುವ ಹುನ್ನಾರ

ಕೆಲವು ಪ್ರತಿಷ್ಠಿತ ಸುದ್ದಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಈ ಬಗ್ಗೆ ಅಧ್ಯಯನ ಮಾಡಿವೆ. 2014ರಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ದೇಶದಲ್ಲಿ ಇಡಿ ದಾಖಲಿಸುವ ಪ್ರಕರಣಗಳ ಸಂಖ್ಯೆ ಶೇ.400ರಷ್ಟು ಹೆಚ್ಚಳವಾಗಿದೆ. ಅದರಲ್ಲಿ ಶೇ.95ರಷ್ಟು ಪ್ರಕರಣಗಳು ವಿರೋಧ ಪಕ್ಷಗಳ ವಿರುದ್ಧವಾಗಿದೆ.

ಶೇ.5ರಷ್ಟು ಮಾತ್ರ ಬಿಜೆಪಿ ಅಥವಾ ಮಿತ್ರಪಕ್ಷಗಳ ಮೇಲೆ ಗುರಿಯಾಗಿದೆ. ಬಿಜೆಪಿ ವಾಷಿಂಗ್ ಮೆಷಿನ್ ಪಕ್ಷ ಎಂಬುದನ್ನು ಸಾಬೀತುಪಡಿಸುತ್ತಿದೆ. ವಿಪಕ್ಷದಲ್ಲಿದ್ದರೆ ಕೇಸು, ಬಿಜೆಪಿಗೆ ಸೇರಿದ ಕೂಡಲೇ ಖುಲಾಸೆ ಚೀಟಿ ಎಂಬುದನ್ನು ಒತ್ತಿ ಹೇಳುತ್ತಿವೆ ಎಂದು ಅವರು ಅಂಕಿ–ಅಂಶಗಳನ್ನು ಮುಂದಿಟ್ಟರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಈ ಕಾಲದಲ್ಲಿ ಸತ್ಯ ಮತ್ತು ನಿಖರ ಅಂಕಿ–ಅಂಶಗಳು ಲೆಕ್ಕಕ್ಕಿಲ್ಲದಂತಾಗಿವೆ. ಯುಪಿಎ ಸರ್ಕಾರದ ಅವಧಿಯಲ್ಲಿ ಶೇ.53ರಷ್ಟು ಪ್ರಕರಣಗಳು ಮಾತ್ರ ವಿರೋಧ ಪಕ್ಷಗಳ ನಾಯಕರ ಮೇಲೆ ದಾಖಲಾಗಿತ್ತು, ಶೇ.47ರಷ್ಟು ಪ್ರಕರಣಗಳು ಸ್ವತಃ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ನಾಯಕರ ಮೇಲೆ ದಾಖಲಾಗಿದ್ದವು. ಆದರೆ, ಇಂದಿನ ಸ್ಥಿತಿ ಏನು ಎಂದು ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

ಈ ಹಿಂದೆ ಬಿಜೆಪಿ ಸರ್ಕಾರದಲ್ಲೂ ಸಾಕಷ್ಟು ಹಗರಣಗಳು ನಡೆದಿವೆ. ಕೊರೊನಾ ಸಂದರ್ಭದಲ್ಲಿ ಹೆಣದ ಮೇಲೂ ಹಣ ಮಾಡಿದ ಆರೋಪ ಬಿಜೆಪಿ ಮೇಲಿದೆ. ಆದರೆ, ಜಾರಿ ನಿರ್ದೇಶನಾಲಯ ಈ ಬಗ್ಗೆ ಏಕೆ ತನಿಖೆ ನಡೆಸುವುದಿಲ್ಲ ಎಂದರು.

ಬಿಜೆಪಿಯವರ ಮೇಲೇಕೆ ಕ್ರಮವಿಲ್ಲ: ಬಿಜೆಪಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದಲ್ಲಿ 46 ಕೋಟಿ ರೂ. ಲೂಟಿಯಾಗಿದೆ, ಬಿಜೆಪಿಯ ಮಾಜಿ ಎಂಎಲ್‌ಸಿ ಹಾಗೂ ಮಾಜಿ ಎಂಪಿ ಅಭ್ಯರ್ಥಿಯೊಬ್ಬರ ಬ್ಯಾಂಕ್ ಖಾತೆಗೆ 3 ಕೋಟಿ ರೂ. ಹೋಗಿದೆ, ಈ ಪ್ರಕರಣವನ್ನು ಏಕೆ ಇಡಿ ತನಿಖೆ ಮಾಡುತ್ತಿಲ್ಲ. ಇದು ಹಗರಣದ ಲಾಭಾಂಶ ಅಲ್ವಾ, ಆ ಲೂಟಿಯ ಹಣ ಯಾವ ಎಲೆಕ್ಷನ್‌ಗೆ ಹೋಗಿದೆ ಎಂದು ಇಡಿ ಏಕೆ ತನಿಖೆ ನಡೆಸುತ್ತಿಲ್ಲ. ಭೋವಿ ನಿಗಮ, ತಾಂಡ ಅಭಿವೃದ್ಧಿ ನಿಗಮದಲ್ಲೂ ಕೋಟಿ ಕೋಟಿ ರೂ. ಲೂಟಿಯಾಗಿದೆ ಅಲ್ಲಿ ಏಕೆ ತನಿಖೆ ಇಲ್ಲ ಎಂದರು. ವಾಲ್ಮೀಕಿ ನಿಗಮ ಹಗರಣದ ಸ್ವರೂಪದಂತೆಯೇ ಈ ಹಿಂದೆ ಡಾ. ಅಂಬೇಡ್ಕರ್ ನಿಗಮದಲ್ಲೂ ಹಗರಣವಾಗಿದೆ. ಈ ಬಗ್ಗೆ ಏಕೆ ತನಿಖೆ ಇಲ್ಲ. ಕೋವಿಡ್ ಸಂದರ್ಭದಲ್ಲಿ ಹೆಣಗಳು ಬೀಳುತ್ತಿದ್ದರೆ, ಬಿಜೆಪಿ ನಾಯಕರು ಹೆಣಗಳ ಮೇಲೆ ಹಣ ಮಾಡುತ್ತಾ ಇದ್ದರಲ್ಲ, ಆ ಬಗ್ಗೆ ತನಿಖೆ ಏಕಿಲ್ಲ. ಬಿಜೆಪಿ ಶಾಸಕರೊಬ್ಬರು ಪಕ್ಷದ ಅಧ್ಯಕ್ಷ ವಿಜಯೇಂದ್ರ ಆಗಾಗ್ಗೆ ದುಬೈಗೆ ಹೋಗಿಬರುತ್ತಿರುವ ಬಗ್ಗೆ ಧ್ವನಿ ಎತ್ತುತ್ತಿದ್ದಾರಲ್ಲ, ಆ ಬಗ್ಗೆ ತನಿಖೆ ಏಕಿಲ್ಲ ಎಂದು ಗುಡುಗಿದರು.

ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣದ ತನಿಖೆಯಲ್ಲಿ ಪಾರದರ್ಶಕತೆ ಇಲ್ಲ. ಬರೀ ಅಧಿಕಾರದ ದುರುಪಯೋಗ ನಡೆಯುತ್ತಿದೆ. ಪ್ರಕರಣದ ಸಾಕ್ಷಿಗಳನ್ನು ಕರೆಸಿ ಸತ್ಯಕ್ಕೆ ದೂರವಾದ ಸುಳ್ಳಿನ ಹೇಳಿಕೆಗಳನ್ನು ನೀಡುವಂತೆ ಮಾಡಲಾಗುತ್ತಿದೆ, ಇದು ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದ್ದು, ಅಗತ್ಯ ಬಿದ್ದರೆ ನಾವೂ ಕಾನೂನಿನ ಹೋರಾಟದ ಜೊತೆಗೆ ಬೀದಿಗಿಳಿದು ಹೋರಾಡುತ್ತೇವೆ ಎಂದರು.

ಸುರಕ್ಷತೆಗೆ ಮುಂಜಾಗರೂಕ ಕ್ರಮ ಕೈಗೊಳ್ಳಿ

ಇನ್ನೆರಡು ದಿನಗಳಲ್ಲಿ ಕೆಆರ್‌ಎಸ್ ಜಲಾಶಯದಿಂದಲೂ ನೀರನ್ನು ಹೊರಬಿಡುವ ಸಾಧ್ಯತೆಯಿದ್ದು, ನಂಜನಗೂಡು ಹಾಗೂ ತಿ.ನರಸೀಪುರ ತಾಲೂಕು ನದಿ ಪಾತ್ರದ ಜನರ ಸುರಕ್ಷತೆಗಾಗಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಈಗಿನಿಂದಲೇ ಅಧಿಕಾರಿಗಳು ಎಲ್ಲಾ ತಾಲೂಕುಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಬೇಕು. ನದಿಯ ಎರಡೂ ದಂಡೆಗಳಲ್ಲಿನ ಸಾರ್ವಜನಿಕರು ಹಾಗೂ ಜಾನುವಾರುಗಳ ರಕ್ಷಣೆಗಾಗಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಮನವರಿಕೆ ಮಾಡಿಕೊಡಬೇಕು ಎಂದರು.

ಪ್ರಾಣಹಾನಿ ಆಗಬಾರದು: ಅತಿಯಾದ ಮಳೆಯಿಂದ ಯಾವುದೇ ಅವಘಡ ಹಾಗೂ ಪ್ರಾಣಹಾನಿ ಸಂಭವಿಸಬಾರದು. ಈ ನಿಟ್ಟಿನಲ್ಲಿ ಮೊದಲೇ ಪರಿಸ್ಥಿತಿಯನ್ನು ಅರಿತು ಅಪಾಯದ ಸ್ಥಳದಲ್ಲಿರುವ ಜನರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಬೇಕು. ಕಾಳಜಿ ಕೇಂದ್ರಗಳಲ್ಲಿ ಎಲ್ಲಾ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು. ಉತ್ತಮ ಆಹಾರ, ಶುದ್ಧ ಕುಡಿಯುವ ನೀರು ಹಾಗೂ ಪ್ರಾಥಮಿಕ ಆರೋಗ್ಯ ಚಿಕಿತ್ಸಾ ಸೌಲಭ್ಯವನ್ನು ಒದಗಿಸಬೇಕು. ಇದಕ್ಕಾಗಿ ಈಗಿನಿಂದಲೇ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಗ್ರಾಮೀಣ ಪ್ರದೇಶದಲ್ಲಿ ಮಳೆ ಗಾಳಿಯಿಂದ ಮರಗಳು ಮುರಿದು ವಿದ್ಯುತ್ ಸಂಪರ್ಕ ಕಡಿತಗೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹಾಗಾಗಿ ವಿದ್ಯುತ್ ನಿಗಮದವರು ಜನರಿಗೆ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳು ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ಗುರುತಿಸಿ ಅವುಗಳನ್ನು ತಕ್ಷಣವೇ ತೆರವುಗೊಳಿಸಬೇಕು ಎಂದು ತಿಳಿಸಿದರು.

ನೈಟ್ ಟೀಮ್ ನೇಮಿಸಿ: ನಗರ ಪ್ರದೇಶದಲ್ಲಿ ಮಳೆ ನೀರು ಹರಿವಿಗೆ ಅಡ್ಡಿಯುಂಟಾಗುವ ಸಮಸ್ಯೆ ಹಲವೆಡೆ ಕಂಡು ಬರುತ್ತಿದೆ. ಈ ಸಮಸ್ಯೆಯನ್ನು ತಕ್ಷಣವೇ ಸರಿಪಡಿಸದಿದ್ದರೆ ತಗ್ಗಿನಲ್ಲಿರುವ ಮನೆಗಳಿಗೆ ನೀರು ನುಗ್ಗಿ ತೀವ್ರ ತೊಂದರೆ ಉಂಟಾಗುತ್ತದೆ. ಹೀಗಾಗದಂತೆ ಕ್ರಮ ವಹಿಸುವುದರ ಜೊತೆಗೆ ತುರ್ತು ಕಾರ್ಯಾಚರಣೆಗೆ ನೈಟ್ ಟೀಮ್(ರಾತ್ರಿ ಪಾಳಿಯ ತಂಡ) ಅನ್ನು ನಿಯೋಜಿಸಬೇಕು ಎಂದರು.

ಈಗಾಗಲೇ ನಂಜನಗೂಡು, ಸರಗೂರು ತಾಲೂಕುಗಳಲ್ಲಿ ಮಳೆಯಿಂದ ಬ್ರಿಡ್ಜ್‌ಗಿಂತಲೂ ಮೇಲೆ ನೀರು ಹರಿಯುತ್ತಿದ್ದು, ಅಂತಹ ಜಾಗದಲ್ಲಿ ಸಾರ್ವಜನಿಕರು ಓಡಾಡದಂತೆ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಮಾಹಿತಿ ನೀಡಬೇಕು. ಈ ಬಗ್ಗೆ ಸೂಚನಾ ಫಲಕ ಅಳವಡಿಸಬೇಕು. ಕುಡಿಯುವ ನೀರು ಪೂರೈಸುವ ಮುನ್ನ ಅದರ ಗುಣಮಟ್ಟವನ್ನು ಪ್ರತಿದಿನವೂ ಪರೀಕ್ಷಿಸಬೇಕು. ಈ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ತ್ವರಿತ ಕ್ರಮವಾಗಬೇಕು: ಮಳೆಹಾನಿ ಸಂಭವಿಸಿದ್ದಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ತಕ್ಷಣವೇ ಪರಿಹಾರ ಕ್ರಮ ಕೈಗೊಳ್ಳುವುದರ ಜೊತೆಗೆ ನಷ್ಟದ ಪರಿಹಾರ ಕಲ್ಪಿಸಲು ಮುಂದಾಗಬೇಕು. ಕೃಷಿ ಹಾಗೂ ತೋಟಗಾರಿಕಾ ಬೆಳೆ ಹಾನಿಯಾದರೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಪರಿಹಾರಕ್ಕೆ ಶಿಫಾರಸು ಮಾಡಬೇಕು. ಶಿಥಿಲಗೊಂಡ ಕಟ್ಟಡಗಳಲ್ಲಿ ಶಾಲೆ ಹಾಗೂ ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿದ್ದರೆ ಕೂಡಲೇ ಸ್ಥಳಾಂತರಿಸಬೇಕು ಎಂದು ಸೂಚಿಸಿದರು.

ಔಷಧ ಲಭ್ಯವಿರಬೇಕು: ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಮಾತನಾಡಿ, ಕಾಳಜಿ ಕೇಂದ್ರಗಳು ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅಗತ್ಯವಿರುವ ಔಷಧಗಳು ಲಭ್ಯವಿರಬೇಕು. ಜನರಿಗೆ ಏನಾದರೂ ಅನಾರೋಗ್ಯ ಉಂಟಾದರೆ ಕೂಡಲೇ ಪ್ರಾಥಮಿಕ ಚಿಕಿತ್ಸೆ ನೀಡಿ, ನಿಗಾ ವಹಿಸಬೇಕು. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಆಸ್ಪತ್ರೆಗೆ ದಾಖಲಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಡಾ.ಪಿ.ಶಿವರಾಜು, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಶರೀಫ್, ಮುಡಾ ಆಯುಕ್ತ ರಘುನಂದನ್, ನಂಜನಗೂಡು, ಹೆಚ್.ಡಿ.ಕೋಟೆ, ಸರಗೂರು ತಹಶೀಲ್ದಾರರು ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ವಾರದಿಂದ ತನಿಖಾಧಿಕಾರಿಗಳ ಸುಳಿವಿಲ್ಲ

ಬಂದಿಲ್ಲ. ಹಾಗಾಗಿ ಮುಡಾ ಅಧಿಕಾರಿಗಳೇ ಗೊಂದಲಕ್ಕೀಡಾಗಿದ್ದಾರೆ. ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖಾ ಆಯೋಗ ರಚನೆಯಾಗಿರುವುದರಿಂದ ಪ್ರಸ್ತುತ ನಡೆಯುತ್ತಿರುವ ತನಿಖಾ ಪ್ರಕ್ರಿಯೆಗೆ ಬ್ರೇಕ್ ಹಾಕಿ ಸರ್ಕಾರವೇ ಅಧಿಕಾರಿಗಳನ್ನು ವಾಪಸ್ ಕರೆಸಿಕೊಂಡಿರಬಹುದು ಎಂದು ಮುಡಾ ಕಚೇರಿ ಮೂಲಗಳು ತಿಳಿಸಿವೆ. ಮತ್ತೊಂದೆಡೆ ಹೊಸದಾಗಿ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖಾ ಆಯೋಗವೂ ಮೈಸೂರಿಗೆ ಬಂದಿಲ್ಲ. ತನಿಖೆ ಹಳ್ಳ ಹಿಡಿದಿರುವುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇಕಾ ಎಂದು ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ. ಒಂದು ತನಿಖಾ ಸಮಿತಿ ಸದಸ್ಯರು ಮುಡಾ ಕಚೇರಿ ಸಭಾಂಗಣ ದಲ್ಲಿ 50:50ರ ಅನುಪಾತದಡಿ ಮಂಜೂರು ಮಾಡಿರುವ ನಿವೇಶನಗಳ ಕುರಿತಂತೆ ತನಿಖೆ ಆರಂಭಿಸಿ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸುತ್ತಿರುವಾಗಲೇ ಮತ್ತೊಂದು ತನಿಖಾ ಆಯೋಗ ರಚಿಸಿರುವುದು ಪ್ರಕರಣದ ತನಿಖೆ ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದು ಮನದಟ್ಟಾಗುತ್ತದೆ ಎಂದು ಕೆಲವರು ಗೇಲಿಮಾಡುತ್ತಿದ್ದಾರೆ. ಇತ್ತ ನಿವೃತ್ತ ಐಎಎಸ್ ಅಧಿಕಾರಿ ನೇತೃತ್ವದ ಸಮಿತಿ ತನಿಖೆಯನ್ನು ಅರ್ಧಕ್ಕೆ ನಿಲ್ಲಿಸಿದೆ. ಅದು ಮಧ್ಯಂತರ ತನಿಖಾ ವರದಿಯನ್ನು ಸಲ್ಲಿಸಿಲ್ಲ, ಮತ್ತೊಂದೆಡೆ ಹೊಸದಾಗಿ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖಾ ಆಯೋಗವೂ ಮುಡಾ ಕಚೇರಿಯತ್ತ ಸುಳಿಯದ ಕಾರಣ ನಿವೇಶನ ಹಂಚಿಕೆ ಹಗರಣದ ತನಿಖಾ ಪ್ರಗತಿ ಯಾವ ಸ್ಥಿತಿಯಲ್ಲಿದ್ದೆ ಎಂಬುದು ಸ್ಪಷ್ಟವಾಗುತ್ತದೆ.

ಇತ್ತ ತನಿಖೆ ನೆಪದಲ್ಲಿ ಮುಡಾದಲ್ಲಿ ಎಲ್ಲಾ ಸಾರ್ವಜನಿಕ ಸೇವೆ, ಅಭಿವೃದ್ಧಿ ಕಾಮಗಾರಿಗಳು, ಸಭೆ, ಹೊಸ ಆದೇಶ, ನಿರ್ಣಯ ಸ್ತಬ್ಧವಾಗಿದೆ. ಸರ್ಕಾರದ ಆದೇಶದನ್ವಯ ಮುಡಾ ಕಚೇರಿಯ ಎಲ್ಲಾ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ.

ಲೂಟಿಗೆ ಜ್ಯೂನಿಯರ್ ಅಕೌಂಟೆಂಟ್ ಹುದ್ದೆ ಸೃಷ್ಟಿ

ಫೆ.21ರಂದು 03412303 0001619 ನಂಬರ್‌ನ ಖಾತೆ ತೆರೆಯಲಾಗಿತ್ತು.

ಯೂನಿಯನ್ ಬ್ಯಾಂಕ್‌ನಲ್ಲಿನ ಶಿವಕುಮಾರ್ ಖಾತೆಗೆ ನಿಗಮದಿಂದ 187 ಕೋಟಿ ರೂ. ವರ್ಗಾವಣೆಗೆ ಮನವಿ ಮಾಡಲಾಯಿತು. ಮನವಿ ಮೇರೆಗೆ ನಿಗಮದಿಂದ 187 ಕೋಟಿ ರೂ.ಗಳನ್ನು ವರ್ಗಾವಣೆ ಮಾಡಿದ್ದ ವಾಲ್ಮೀಕಿ ನಿಗಮ, ಮಾರ್ಚ್ 5ರಿಂದ ಮೇ 6ರವರೆಗೆ ಹಂತ ಹಂತವಾಗಿ ಅಲ್ಲಿಂದ ಹೈದರಾಬಾದ್‌ನ ಆರ್‌ಬಿಎಲ್ ಬ್ಯಾಂಕ್‌ಗೆ ಹಣ ವರ್ಗಾವಣೆ ಮಾಡಲಾಗಿತ್ತು. ಎರಡು ತಿಂಗಳ ಅವಧಿಯಲ್ಲಿ 94 ಕೋಟಿ ರೂ. ವರ್ಗಾವಣೆ ಕೃತ್ಯದಲ್ಲಿ ಯೂನಿಯನ್ ಬ್ಯಾಂಕ್‌ನ ಕೆಲವು ಅಧಿಕಾರಿಗಳು ಶಾಮೀಲಾಗಿರುವ ವಿಚಾರ ಎಸ್‌ಐಟಿ ತನಿಖೆಯಲ್ಲಿ ಪತ್ತೆಯಾಗಿದೆ. ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ಸಂಚಿಗೆ ಸಹಕಾರ ನೀಡಿದ್ದ ಯೂನಿಯನ್ ಬ್ಯಾಂಕ್‌ನ ಆರು ಅಧಿಕಾರಿಗಳು ನಾಪತ್ತೆಯಾಗಿದ್ದು, ಈ ಆರೋಪಿಗಳಿಗಾಗಿ ಎಸ್‌ಐಟಿ ತೀವ್ರ ಶೋಧ ನಡೆಸುತ್ತಿದೆ.

ಕೊಡಗಿನಲ್ಲಿ ಧಾರಾಕಾರ ಮಳೆ, ಉಕ್ಕಿ ಹರಿಯುತ್ತಿರುವ ಜೀವನದಿ ಕಾವೇರಿ

ಕೆಆರ್‌ಎಸ್ ಭರ್ತಿಗೆ ಕೇವಲ 9 ಅಡಿ ಮಾತ್ರ ಬಾಕಿ

- ಕೆಆರ್‌ಎಸ್ ಜಲಾಶಯದ ಇಂದಿನ ಮಟ್ಟ 114.90 ಅಡಿ
- ಕಬಿನಿ ಜಲಾಶಯದಿಂದ 70 ಸಾವಿರ ಕ್ಯುಸೆಕ್ ನೀರು ಬಿಡುಗಡೆ
- ಈಗಾಗಲೇ ತಮಿಳುನಾಡಿಗೆ ಹರಿದ ನೀರು 6 ಟಿಎಂಸಿ

ಮೈಸೂರು, ಜು.18(ಬಿಎಲ್‌ಯು)– ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಕಾರಣ ಜೀವ ನದಿ ಕಾವೇರಿ ಉಕ್ಕಿ ಹರಿಯುತ್ತಿದೆ. ಹಾಗಾಗಿ ಮಂಡ್ಯದ ಕೆಆರ್‌ಎಸ್ ಜಲಾಶಯಕ್ಕೆ ಭಾರೀ ಪ್ರಮಾಣದ ನೀರು ಹರಿದು ಬರುತ್ತಿದ್ದು, ಜಲಾಶಯ ಭರ್ತಿಯಾಗಲು ಇನ್ನು ಕೇವಲ 10 ಅಡಿ ಮಾತ್ರ ಬಾಕಿ ಇದೆ.

ಕೊಡಗು ಜಿಲ್ಲೆಯಲ್ಲಿ ವರುಣ ಆರ್ಭಟಿಸುತ್ತಿದ್ದು, ಕಾವೇರಿ ನದಿ ಬೋರ್ಗರೆಯುತ್ತಾ ಹರಿಯುತ್ತಿದೆ. ಕೆಆರ್‌ಎಸ್ ಜಲಾಶಯಕ್ಕೆ ದಿನ ಕಳೆದಂತೆ ನೀರಿನ ಪ್ರಮಾಣ ಹೆಚ್ಚಾಗಿದ್ದು, ಜೀವ ಕಳೆ ಬಂದಿದೆ.



ಕೊಡಗಿನ ಭಾಗಮಂಡಲದ ತ್ರಿವೇಣಿ ಸಂಗಮ ಜಲಾವೃತಗೊಂಡಿರುವುದು.

ಕೆಆರ್ ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 114.90 ಅಡಿಗಳಾಗಿವೆ. ಜಲಾಶಯಕ್ಕೆ 40,490 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಜಲಾಶಯದಿಂದ 2560 ಕ್ಯುಸೆಕ್ ನೀರನ್ನು ಹೊರಗೆ ಬಿಡಲಾಗುತ್ತಿದೆ. ತಮಿಳುನಾಡಿಗೆ ಜುಲೈ 31ರವರೆಗೆ ಪ್ರತಿದಿನ ಒಂದು ಟಿಎಂಸಿ ನೀರು ಬಿಡುವಂತೆ ಆದೇಶಿಸಿದ್ದರೂ ಕೆಆರ್‌ಎಸ್ ಭರ್ತಿಯಾಗದ ಕಾರಣ ಅಲ್ಲಿಂದ ನೀರು ಬಿಡುತ್ತಿಲ್ಲ. ಆದರೆ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ. ಕೇರಳದ ವೈನಾಡು ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಕಾರಣ ಕಬಿನಿ ಜಲಾಶಯ ತುಂಬಿ ತುಳುಕುತ್ತಿದೆ.

ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,281 ಅಡಿಗಳಾಗಿದೆ. ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಭರ್ತಿಗೆ ಮೂರು ಅಡಿ ಬಾಕಿ ಅಂತರ ಕಾಯ್ದುಕೊಳ್ಳಲಾಗಿದೆ. ಕಬಿನಿ ಜಲಾಶಯಕ್ಕೆ 52,777 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 70,000 ಕ್ಯುಸೆಕ್ ನೀರು ಬಿಡಲಾಗುತ್ತಿದೆ. ಹಾಗಾಗಿ ನಿತ್ಯವೂ ತಮಿಳುನಾಡಿಗೆ ಸುಮಾರು ಆರು ಟಿಎಂಸಿ ನೀರು ಹರಿದು ಹೋಗುತ್ತಿದೆ. ಈ ಮೂಲಕ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶಿಸಿರುವಷ್ಟು ನೀರು ಒಂದು ವಾರದಲ್ಲಿ ತಮಿಳುನಾಡು ಸೇರಲಿದೆ.

ಮೈಸೂರಿನ ಹೆಚ್.ಡಿ.ಕೋಟೆಯ ತಾರಕ ಜಲಾಶಯ ಗರಿಷ್ಠ 2425 ಅಡಿಗಳಾಗಿದ್ದು, ಇಂದಿನ ಮಟ್ಟ 2401 ಅಡಿಗಳಾಗಿದೆ. ಜಲಾಶಯಕ್ಕೆ 1600 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಆದರೆ ಜಲಾಶಯದಿಂದ ನೀರು ಬಿಡುತ್ತಿಲ್ಲ.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.18–2024–25ನೇ ಸಾಲಿಗೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ರೈತ ಮಹಿಳೆಯರಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಹಸು ಅಥವಾ ಎಮ್ಮೆ ಖರೀದಿ ಉದ್ದೇಶಕ್ಕಾಗಿ ಬ್ಯಾಂಕ್‌ಗಳಿಂದ ಪಡೆದಿರುವ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿರುವ ಮಹಿಳೆಯರಿಗೆ ಶೇ.6%ರ ಬಡ್ಡಿ ಸಹಾಯಧನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆಸಕ್ತ ರೈತ ಮಹಿಳೆಯರು ಸ್ಥಳೀಯ ಪಶುಪಾಲನಾ ಇಲಾಖೆಯ ಪಶುವೈದ್ಯ ಸಂಸ್ಥೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲಾದ ಫಲಾಪೇಕ್ಷಿಗಳನ್ನು ಆಯಾ ತಾಲ್ಲೂಕು ಆಯ್ಕೆ ಸಮಿತಿ ಮೂಲಕ ಸರ್ಕಾರದ ಮಾರ್ಗಸೂಚಿಯಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಿ.ಪಿ.ಎಲ್ ಹೊಂದಿರುವ ಮಹಿಳೆಯರನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆ ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ಅಥವಾ ಸ್ಥಳೀಯ ಪಶುವೈದ್ಯರನ್ನು ಸಂಪರ್ಕಿಸಬಹುದು ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

2ನೇ ಆಷಾಢ ಶುಕ್ರವಾರ; ಚಾಮುಂಡಿಬೆಟ್ಟದಲ್ಲಿ ಇಂದು ವಿಶೇಷ ಪೂಜಾ ಕೈಂಕರ್ಯ

ಜಿಲ್ಲಾಡಳಿತದಿಂದ ಸಕಲ ಸಿದ್ಧತೆ



ಮೈಸೂರು,ಜು.18(ಪಿಎಂ)– ನಾಳೆಯ 2ನೇ ಆಷಾಢ ಶುಕ್ರವಾರದ ವಿಶೇಷ ಪೂಜಾ ಕೈಂಕರ್ಯದ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದ್ದು, ಚಾಮುಂಡೇಶ್ವರಿ ತಾಯಿಯ ವಿಶೇಷ ಪೂಜಾ ವಿಧಿವಿಧಾನದಲ್ಲಿ ಪಾಲ್ಗೊಳ್ಳಲಿರುವ ಭಕ್ತರು ಭಕ್ತಿಯ ಪರಾಕಾಷ್ಠೆ ಮೆರೆಯಲಿದ್ದಾರೆ.

ಬೆಟ್ಟದಲ್ಲಿ ನಡೆಯುವ ವಿಶೇಷ ಪೂಜೆ ಕೈಂಕರ್ಯದಲ್ಲಿ ಪಾಲ್ಗೊಳ್ಳಲಿರುವ ಭಕ್ತಾದಿಗಳಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸಲಾಗಿದೆ. ಇದಕ್ಕಾಗಿ ಜಿಲ್ಲಾಡಳಿತದ ವತಿಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ತಾಯಿ ಚಾಮುಂಡೇಶ್ವರಿ ಅಮ್ಮನವರ ದರ್ಶನಕ್ಕೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆ.

ಭಕ್ತರು ಸರದಿ ಸಾಲಿನಲ್ಲಿ ಚಾಮುಂಡೇಶ್ವರಿ ದೇವಾಲಯ ಪ್ರವೇಶಿಸಲು ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಆಷಾಢ ಮಾಸದ ಎಲ್ಲಾ ಶುಕ್ರವಾರದಿಂದ ಭಾನುವಾರದವರೆಗೆ ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಹೀಗಾಗಿ ಭಕ್ತಾದಿಗಳು ತಮ್ಮ ವಾಹನಗಳನ್ನು ಲಲಿತಮಹಲ್ ಮೈದಾನದಲ್ಲಿ ನಿಲುಗಡೆ ಮಾಡಿ, ಜಿಲ್ಲಾಡಳಿತ ವತಿಯಿಂದ ವ್ಯವಸ್ಥೆಗೊಳಿಸಿರುವ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ (ಶುಕ್ರವಾರ ಮಾತ್ರ) ತೆರಳಲು ಅವಕಾಶವಿದೆ.

ಚಾಮುಂಡೇಶ್ವರಿ ತಾಯಿಗೆ ಅದ್ಧೂರಿಯಾಗಿ ಪೂಜೆ ನೆರವೇರಲಿದೆ. ದೇವಿಯ ದರ್ಶನಕ್ಕಾಗಿ ಮೈಸೂರು ಮಾತ್ರವಲ್ಲದೆ, ಬೇರೆ ಜಿಲ್ಲೆ, ಹೊರ ರಾಜ್ಯಗಳಿಂದ ಭಕ್ತರು ಬೆಟ್ಟಕ್ಕೆ ಆಗಮಿಸಲಿದ್ದು, ವಿದೇಶಿಗರು ಆಗಮಿಸಿ ಚಾಮುಂಡಿ ಅಮ್ಮನವರ ದರ್ಶನ ಪಡೆದು ಬೆಟ್ಟದ ಪ್ರಾಕೃತಿಕ ಸೌಂದರ್ಯಕ್ಕೆ ಮನಸೋಲುವುದಿದೆ.

ಚಾಮುಂಡಿಬೆಟ್ಟದಲ್ಲಿ ನಡೆಯುವ ಪ್ರಸಕ್ತ ಸಾಲಿನ ಆಷಾಢ ಮಾಸವನ್ನು 'ಪ್ಲಾಸ್ಟಿಕ್ ಮುಕ್ತ ಆಷಾಢ ಮಾಸ' ಎಂಬ ಘೋಷಣೆಯಡಿ ಆಚರಿಸಲು ನಿರ್ಧರಿಸಿರುವ ಜಿಲ್ಲಾಡಳಿತ, ಬೆಟ್ಟಕ್ಕೆ ಪ್ಲಾಸ್ಟಿಕ್ ತರುವ ನಿರ್ಬಂಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮುಂದಾಗಿದೆ. ಹಾಗಾಗಿ ಪರಿಸರಕ್ಕೆ ಮಾರಕವಾಗುವ ನಿಷೇಧಿತ ಪ್ಲಾಸ್ಟಿಕ್ ಪದಾರ್ಥಗಳನ್ನು ಭಕ್ತರು ಬೆಟ್ಟಕ್ಕೆ ಕೊಂಡೊಯ್ಯದಿದ್ದರೆ ಒಳ್ಳೆಯದು. ಇಲ್ಲವಾದರೆ ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ಬೆಟ್ಟದ ಗ್ರಾಪಂ ಸಿಬ್ಬಂದಿ ದಂಡ ವಿಧಿಸಲಿದ್ದಾರೆ.

ಸ್ನೇಹಿತನ ಕೊಂದ ಯುವಕನ ಬಂಧನ



ಹತ್ಯೆಯಾದ ವಿಜಯ ಭಾಸ್ಕರ್



ಆರೋಪಿ ದೇವರಾಜ

ಮೈಸೂರು, ಜು.18– ಕ್ಷುಲ್ಲಕ ಕಾರಣಕ್ಕೆ ಸ್ನೇಹಿತನ ಹತ್ಯೆ ಮಾಡಿದ ಯುವಕನನ್ನು ಮೈಸೂರಿನ ಜಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ತಾಲೂಕು, ಡಿ.ಸಾಲುಂಡಿ ಗ್ರಾಮದ ದೊರೆಸ್ವಾಮಿಯ ಪುತ್ರ ದೇವರಾಜ ಬಂಧಿತ. ಈತ ಅದೇ ಗ್ರಾಮದ ನಾಗೇಗೌಡರ ಪುತ್ರ ವಿಜಯಭಾಸ್ಕರ್(32)ಗೆ ಇರಿದು ಪರಾರಿಯಾಗಿದ್ದ. ಚಾಮರಾಜನಗರ ಸಮೀಪ ಸತ್ಯಮಂಗಲ ರಸ್ತೆಯಲ್ಲಿ ಆರೋಪಿಯನ್ನು ಬುಧವಾರ ರಾತ್ರಿ ಬಂಧಿಸಿ, ಆತನಿಂದ ಚಾಕು ವಶಪಡಿಸಿಕೊಳ್ಳಲಾಗಿದೆ. ಆರೋಪಿಯನ್ನು ಗುರುವಾರ ನ್ಯಾಯಾಲಯದಲ್ಲಿ ಹಾಜರುಪಡಿಸಿ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸ್ನೇಹಿತರಾಗಿದ್ದ ವಿಜಯಭಾಸ್ಕರ್ ಹಾಗೂ ದೇವರಾಜ ಕೆಂಚಲಗೂಡು ಸಮೀಪದ ಬಾರ್ ಮುಂದೆ ಕಳೆದ ಭಾನುವಾರ ರಾತ್ರಿ ಕಳೆದ ಕ್ಷುಲ್ಲಕ ಕಾರಣಕ್ಕೆ ಜಗಳವಾಡಿದ್ದರು. ಸ್ಥಳದಲ್ಲಿದ್ದವರು ಜಗಳ ಬಿಡಿಸಿದ ನಂತರ ವಿಜಯಭಾಸ್ಕರ್ ತನ್ನ ಮತ್ತೋರ್ವ ಸ್ನೇಹಿತ ಕಾರ್ತಿಕ್‌ನೊಂದಿಗೆ ಬೈಕ್‌ನಲ್ಲಿ ಡಿ.ಸಾಲುಂಡಿಗೆ ತೆರಳುತ್ತಿದ್ದಾಗ ಹಿಂಬಾಲಿಸಿದ ದೇವರಾಜ ಕೆಂಚಲಗೂಡು ಗೇಟ್ ಬಳಿ ಅಡ್ಡಗಟ್ಟಿ, ವಿಜಯಭಾಸ್ಕರ್‌ಗೆ ಏಕಾಏಕಿ ಚಾಕುವಿನಿಂದ ಇರಿದಿದ್ದ. ಘಟನೆಯಲ್ಲಿ ಕಾರ್ತಿಕ್ ಕೂಡ ಗಾಯಗೊಂಡ. ರಕ್ತಸ್ರಾವದಿಂದ ಒದ್ದಾಡುತ್ತಿದ್ದ ವಿಜಯಭಾಸ್ಕರ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮೃತಪಟ್ಟರು.

ಈ ಹಿನ್ನೆಲೆಯಲ್ಲಿ ಕೊಲೆ ಯತ್ನ ಪ್ರಕರಣವನ್ನು, ಕೊಲೆ ಪ್ರಕರಣವಾಗಿ ಪರಿವರ್ತಿಸಿಕೊಂಡ ಪೊಲೀಸರು ಆರೋಪಿ ಪತ್ತೆ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದರು. ಜಯಪುರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಸುರೇಶ್ ಬೋಪಣ್ಣ ನೇತೃತ್ವದಲ್ಲಿ ರವಿಕುಮಾರ್, ಕೃಷ್ಣ ಶೆಟ್ಟಿ ಮತ್ತಿತರ ಸಿಬ್ಬಂದಿ ತಂಡ, ಬುಧವಾರ ರಾತ್ರಿ ಆರೋಪಿಯನ್ನು ಬಂಧಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಕೆ.ದೀಪಕ್ ಆಯ್ಕೆ



ಕೆ.ದೀಪಕ್ ನೇತೃತ್ವದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ತಂಡ.

ಮೈಸೂರು, ಜು.18 (ಎಂಟಿವೈ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕೆ.ದೀಪಕ್ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಚುನಾವಣೆ ಜಿದ್ದಾಜಿದ್ದಿಯಿಂದ ಕೂಡಿತ್ತು. ಅಂತಿಮವಾಗಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡು, ಚುನಾವಣಾಧಿಕಾರಿಗಳಾದ ಕಾಶಿನಾಥ್ ಹಾಗೂ ಬನ್ನೂರು ಕೆ.ರಾಜು ನೂತನ ಪದಾಧಿಕಾರಿಗಳ ಹೆಸರನ್ನು ಘೋಷಿಸಿದರು.

ಪದಾಧಿಕಾರಿಗಳು: ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿಯಾಗಿ ಧರ್ಮಾಪುರ ನಾರಾಯಣ್, ನಗರ ಉಪಾಧ್ಯಕ್ಷರಾಗಿ ರವಿ ಪಾಂಡವಪುರ, ಗ್ರಾಮಾಂತರ ಉಪಾಧ್ಯಕ್ಷರಾಗಿ ಹೆಚ್.ಎಸ್.ವೆಂಕಟಪ್ಪ, ಖಜಾಂಚಿಯಾಗಿ ಸುರೇಶ್, ಗ್ರಾಮಾಂತರ ಕಾರ್ಯದರ್ಶಿಯಾಗಿ ದಾ.ರಾ.ಮಹೇಶ್ ಮತ್ತು ನಗರ ಕಾರ್ಯದರ್ಶಿಯಾಗಿ ಕೃಷ್ಣೋಜಿರಾವ್ ಆಯ್ಕೆಯಾದರು.

ಕಾರ್ಯಕಾರಿ ಸಮಿತಿಗೆ ಎಂ.ಟಿ. ಯೋಗೇಶ್‌ಕುಮಾರ್ 216, ಕವಿತಾ 203, ಹನಗೋಡು ನಟರಾಜ್ 180, ಡಿ.ಜಿ.ರೋಜಾ ಮಹೇಶ್ 178, ನಾಣಿ ಹೆಬ್ಬಾಳ್ 166, ಜೆ.ರವಿಚಂದ್ರ ಹಂಚ್ಯಾ 161, ಹಂಪಾ ನಾಗರಾಜು 158, ಸೋಮಶೇಖರ್ ಚಿಕ್ಕಮರಳಿ 153, ಜೆ.ಶಿವಣ್ಣ 151, ಸತೀಶ್ ಆರ್.ದೇಪುರ 146, ದೊಡ್ಡಹುಂಡಿ ರಾಜಣ್ಣ 142, ಹಲ್ಲಹಳ್ಳಿ ಮೋಹನ 142, ಪುನೀತ್ ಎಸ್ 137, ರಾಜು ಕಾರ್ಯ 131, ಸಿ.ಎನ್. ವಿಜಯ್ 131 ಮತ ಪಡೆದು ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಒಟ್ಟು 399 ಮಂದಿ ಸದಸ್ಯರಿದ್ದು, 392 ಮಂದಿ ತಮ್ಮ ಹಕ್ಕು ಚಲಾಯಿಸಿದ್ದರು. ಕಾರ್ಯಕಾರಿ ಸಮಿತಿಯ 15 ಸ್ಥಾನಕ್ಕೆ ಒಟ್ಟು 36 ಮಂದಿ ಸ್ಪರ್ಧಿಸಿದ್ದರು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರು' ಹಿರಿಯ ವರದಿಗಾರ ಎಂ.ಟಿ.ಯೋಗೇಶ್‌ಕುಮಾರ್ ಅತ್ಯಧಿಕ 216 ಮತ ಗಳಿಸಿದ್ದಾರೆ.

ಚುನಾವಣಾಧಿಕಾರಿಗಳಾಗಿ ಕಾಶಿನಾಥ್, ಬನ್ನೂರು ಕೆ.ರಾಜು, ಸಹಾಯಕರಾಗಿ ಬಸವರಾಜು, ನಾಗೇಶ್, ಮುರಳಿ ಕಾರ್ಯ ನಿರ್ವಹಿಸಿದರು. ವಿಜೇತರನ್ನು ಅಡಾಕ್ ಕಮಿಟಿ ಸದಸ್ಯರಾದ ಬಾಲಕೃಷ್ಣ ಮದ್ದೂರು, ಪ್ರಭುರಾಜನ್ ಅಭಿನಂದಿಸಿದರು.

ಲಯನ್ ಸಿ.ಆರ್.ದಿನೇಶ್ ಅವರಿಗೆ ಅತ್ಯುತ್ತಮ ಕಾರ್ಯದರ್ಶಿ ಪ್ರಶಸ್ತಿ



2023–24ನೇ ಸಾಲಿನ 317 G ಜಿಲ್ಲೆಯ 97 ಲಯನ್ಸ್ ಸಂಸ್ಥೆ ಪರವಾಗಿ ಅತ್ಯುತ್ತಮ ಕಾರ್ಯದರ್ಶಿ ಪ್ರಶಸ್ತಿಯನ್ನು ಮೈಸೂರು ಅಂಬಾಸಡರಸ್ ಸಂಸ್ಥೆ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದ ಲಯನ್ ಸಿ.ಆರ್.ದಿನೇಶ್ ಅವರಿಗೆ ಲಯನ್ಸ್ ಜಿಲ್ಲಾ ಪ್ರಶಸ್ತಿ ಸಮಾರಂಭದಲ್ಲಿ ಲಯನ್ಸ್ ಜಿಲ್ಲಾ ರಾಜ್ಯಪಾಲರಾದ ಲಯನ್ ಡಾ.ಎನ್.ಕೃಷ್ಣೇಗೌಡ ನೀಡಿದರು. ಚಿತ್ರದಲ್ಲಿ ಲಯನ್ ಹೇಮಾವತಿ ಕೃಷ್ಣೇಗೌಡ ಅವರನ್ನು ಕಾಣಬಹುದು.

ಮದುವೆ ವೇಳೆ ಮೈಸೂರು ಮಸಾಲೆ ದೋಸೆ ನೆನೆದ ಶ್ರೀಯುತ ನವಜೋಡಿ ಅನಂತ್ ಅಂಬಾನಿ–ರಾಧಿಕಾ!

ಮೈಸೂರು ಕೆಫೆ ಮಾಲೀಕರ ಆಶೀರ್ವಾದ ಪಡೆದ ನವದಂಪತಿ

- ಮೈಸೂರು ಮಸಾಲೆ ದೋಸೆ ಅಂಬಾನಿ ಕುಟುಂಬಕ್ಕೆ ಬಲು ಇಷ್ಟ
- ಭಾನುವಾರದ ಉಪಹಾರಕ್ಕೆ ಮಸಾಲೆ ದೋಸೆ ಇರಲೇಬೇಕು
- ಮಾಟುಂಗಾದಲ್ಲಿ ಪ್ರಸಿದ್ಧಿ ಪಡೆದಿರುವ ಮೈಸೂರು ಕೆಫೆ



ಮುಂಬೈನ ಮಾಟುಂಗಾದಲ್ಲಿರುವ ಮೈಸೂರು ಕೆಫೆ.

ಮೈಸೂರು,ಜು.18(ಬಿಎಲ್‌ಯು)–ವಿಶ್ವದ ಶ್ರೀಮಂತರಲ್ಲಿ ಒಬ್ಬರಾದ ಮುಕೇಶ್ ಅಂಬಾನಿ ಸೇರಿದಂತೆ ಅವರ ಕುಟುಂಬಸ್ಥರಿಗೆ ಮೈಸೂರು ಮಸಾಲೆ ದೋಸೆ ಬಲು ಇಷ್ಟ, ಮೊನ್ನೆ ಮುಂಬೈನಲ್ಲಿ ನಡೆದ ಅನಂತ್ ಅಂಬಾನಿ–ರಾಧಿಕಾ ಮರ್ಚೆಂಟ್ ಮದುವೆಯಲ್ಲಿ ತಮಗೆ ಮೈಸೂರು ಮಸಾಲೆ ದೋಸೆ ಬಡಿಸುವ ಮೈಸೂರು ಕೆಫೆ ಮಾಲೀಕರ ಪಾದ ಮುಟ್ಟಿ ವಧು–ವರರು ಆಶೀರ್ವಾದ ಪಡೆದಿದ್ದಾರೆ.

ದೇಶದ ವಾಣಿಜ್ಯ ನಗರಿ ಮುಂಬೈನ ಬಾಂದ್ರಾ ಕುರ್ಲಾದಲ್ಲಿರುವ ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಜುಲೈ 12ರಂದು ಮುಕೇಶ್ ಅಂಬಾನಿ ಕಿರಿಯ ಪುತ್ರ ಅನಂತ್ ಅಂಬಾನಿ ಹಾಗೂ ಉದ್ಯಮಿ ವೀರೇನ್ ಮತ್ತು ಶೈಲಾ ಮರ್ಚೆಂಟ್ ದಂಪತಿ ಪುತ್ರಿ ರಾಧಿಕಾ ಮರ್ಚೆಂಟ್ ವಿವಾಹ ಸಮಾರಂಭ ನಡೆಯಿತು.



ಮೈಸೂರು ಕೆಫೆ ಮಾಲೀಕರಾದ ಶಾಂತೇರಿ ನಾಯಕ ಅವರಿಂದ ಆರ್ಶಿವಾದ ಪಡೆದ ಅನಂತ್ ಅಂಬಾನಿ ಹಾಗೂ ರಾಧಿಕಾ

ಹಾಲಿವುಡ್, ಬಾಲಿವುಡ್, ಸ್ಯಾಂಡಲ್ ವುಡ್ ನಟ–ನಟಿಯರು ಮಾತ್ರವಲ್ಲದೆ ರಾಜಕಾರಣಿಗಳು, ಉದ್ಯಮಿಗಳು ಅನಂತ್, ರಾಧಿಕಾ ಮದುವೆಗೆ ಸಾಕ್ಷಿಯಾದರು. ಸಾವಿರಾರು ಸಂಖ್ಯೆಯಲ್ಲಿ ಗಣ್ಯಾತಿಗಣ್ಯರು ವಿವಾಹದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಅನಂತ್ ಹಾಗೂ ರಾಧಿಕಾ ತಮಗೆ ರುಚಿ ರುಚಿಯಾದ ಮೈಸೂರು ಮಸಾಲೆ ದೋಸೆ ಬಡಿಸುವ ಮೈಸೂರು ಕೆಫೆ ಮಾಲೀಕರ ಮರೆಯಲಿಲ್ಲ.

ಆಹ್ವಾನಿತರಾಗಿದ್ದ ಮೈಸೂರು ಕೆಫೆ ಮಾಲೀಕರಾದ ಶಾಂತೇರಿ ನಾಯಕ ಅವರನ್ನು ಅನಂತ್, ಪತ್ನಿ ರಾಧಿಕಾಗೆ ಪರಿಚಯಿಸಿದರು. ಈ ವೇಳೆ ಶಾಂತೇರಿ ನಾಯಕರಿಗೆ ರಾಧಿಕಾ, ನಾವು ಪ್ರತಿ ಭಾನುವಾರ ನಿಮ್ಮ ಹೋಟೆಲ್‌ನ ಮೈಸೂರು ಮಸಾಲೆ ದೋಸೆ ಸವಿಯುತ್ತೇವೆ ಎಂದು ಸಂಭ್ರಮಿಸಿದರು. ತರುವಾಯ ಅನಂತ್ ಹಾಗೂ ರಾಧಿಕಾ ಶಾಂತೇರಿ ನಾಯಕ ಅವರ ಕಾಲು ಮುಟ್ಟಿ ಆಶೀರ್ವಾದ ಪಡೆದರು.

ಮುಂಬೈನ ಮಾಟುಂಗಾದಲ್ಲಿರುವ ದಕ್ಷಿಣ ಭಾರತದ ಅತ್ಯಂತ ಜನಪ್ರಿಯ ತಿನಿಸುಗಳ ನೀಡುವ ಮೈಸೂರು ಕೆಫೆಯ ಮಸಾಲೆ ದೋಸೆ ಅಂದರೆ ಅಂಬಾನಿ ಅವರ ಇಡೀ ಕುಟುಂಬಕ್ಕೆ ಅಚ್ಚು ಮೆಚ್ಚು. ಪ್ರತಿ ಭಾನುವಾರದ ಉಪಹಾರದಲ್ಲಿ ಮೈಸೂರು ಮಸಾಲೆ ದೋಸೆ ಇರಲೇಬೇಕು. ಇಲ್ಲದಿದ್ದರೆ ಆ ದಿನದ ಉಪಹಾರ ಅಪೂರ್ಣ ಎಂಬುವಷ್ಟರ ಮಟ್ಟಿಗೆ ಮೈಸೂರು ಮಸಾಲೆ ದೋಸೆ ಜೊತೆ ಅಂಬಾನಿ ಕುಟುಂಬಕ್ಕೆ ಸವಿ ಸವಿ ಸಂಬಂಧ.

ಮುಕೇಶ್ ಅಂಬಾನಿ ಕಾಲೇಜು ದಿನಗಳಲ್ಲಿ ಮೈಸೂರು ಕೆಫೆಗೆ ಹೋಗಿ ಮಸಾಲೆ ದೋಸೆ ಸವಿದು ಬರುತ್ತಿದ್ದರು. ತಂದೆ ಧೀರೂ ಬಾಯ್ ಅಂಬಾನಿ ಮೃತಪಟ್ಟು ಇಡೀ ಉದ್ಯಮದ ಹೊಣೆ ಮುಕೇಶ್ ಅಂಬಾನಿ ಹೊತ್ತಾಗ ಮೈಸೂರು ಕೆಫೆಗೆ ಹೋಗುವುದನ್ನು ಕೈಬಿಟ್ಟರು. ಆದರೆ ಪ್ರತಿ ಭಾನುವಾರದ ಉಪಹಾರಕ್ಕೆ ಮೈಸೂರು ಕೆಫೆಯ ಮಸಾಲೆ ದೋಸೆ ತರಿಸಿಕೊಂಡು ಸವಿಯುವುದನ್ನು ಮಾತ್ರ ಈ ತನಕ ಬಿಟ್ಟಿಲ್ಲ. ಮುಕೇಶ್ ಅಂಬಾನಿ ಅವರ ಮೂಲ ನೆಲೆ ಗುಜರಾತ್‌ನ ಸೂರತ್‌ನಲ್ಲಿ ಕೂಡ ಮೈಸೂರು ಕೆಫೆ ಇದ್ದು, ಅಲ್ಲಿಯೂ ಮೈಸೂರು ಮಸಾಲೆ ದೋಸೆ ಪ್ರಖ್ಯಾತಿ ಪಡೆದಿದೆ. 1963 ರಿಂದ ಸೂರತ್‌ನಲ್ಲಿ ಮೈಸೂರು ಕೆಫೆ ಇದ್ದು, ಅಲ್ಲಿನ ಜನರಿಗೂ ಮೈಸೂರು ಮೂಲದ ಆಹಾರ ಪದಾರ್ಥ ಬಲು ಇಷ್ಟ, ಮೈಸೂರು ಮಸಾಲೆ ದೋಸೆ ಮುಂಬೈನಲ್ಲಿ ಎಷ್ಟರ ಮಟ್ಟಿಗೆ ಪ್ರಖ್ಯಾತಿ ಹೊಂದಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಮೈಸೂರು ಮಿತ್ರ

ಚೆಲುವನಾರಾಯಣನ ಕ್ಷೇತ್ರದ ಅಭಿವೃದ್ಧಿಯಲ್ಲಿ ರಾಜಕೀಯ ಬೇಡ

ಅಭಿನಂದನಾ ಸಮಾರಂಭದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಲಹೆ

ಮೇಲುಕೋಟೆ,ಜು.18– ಚೆಲುವನಾರಾಯಣ ದಿವ್ಯ ಕ್ಷೇತ್ರದ ಅಭಿವೃದ್ಧಿಯಲ್ಲಿ ಯಾರೂ ರಾಜಕೀಯ ಮಾಡಬಾರದು ಎಂದು ಸಲಹೆ ನೀಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪ್ರವಾಸಿ ತಾಣವಾಗಿರುವ ಮೇಲುಕೋಟೆಯ ಸ್ವಚ್ಛತೆ ಕಾಪಾಡಿ ಶುದ್ಧ ಕುಡಿಯುವ ನೀರು ಪೂರೈಸಲು ಗ್ರಾಮ ಪಂಚಾಯಿತಿ ಆದ್ಯತೆ ನೀಡುವುದರ ಜೊತೆಗೆ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕು.



ಮೇಲುಕೋಟೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ನಾಗರಿಕರು ಅಭಿನಂದಿಸಿದರು.

ಮೇಲುಕೋಟೆಯಲ್ಲಿ ಗ್ರಾಪಂ ಸದಸ್ಯರು ಮತ್ತು ನಾಗರಿಕರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮೇಲುಕೋಟೆಯ ಸ್ಮಾರಕಗಳ ಸಂರಕ್ಷಣೆ ಮಾಡುವ ಜೊತೆಗೆ ಗ್ರಾಮ ಪಂಚಾಯಿತಿಯಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು ಕಾಲಮಿತಿಯಲ್ಲಿ ಮಾಡಿಕೊಡಬೇಕು. ನಾಗರಿಕರು ಪಂಚಾಯಿತಿ ಕಚೇರಿಗೆ ಅಲೆಯುವುದನ್ನು ತಪ್ಪಿಸಿ ಅವರ ಸಂಕಷ್ಟಕ್ಕೆ ಸ್ಪಂದಿಸಿ ಸೇವಾ ಮನೋಭಾವದಿಂದ ಕೆಲಸ ಮಾಡಿ ಎಂದರು.

ಮೇಲುಕೋಟೆಗೆ ನನ್ನ ಅಧಿಕಾರಾವಧಿಯಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಮಂಜೂರು ಮಾಡಿಸಿದ್ದೇನೆ. ಕೊಳಗಳ ಅಭಿವೃದ್ಧಿ ಸೇರಿದಂತೆ ಕೆಲವು ಜೀರ್ಣೋದ್ಧಾರ ಕಾಮಗಾರಿಗಳು ಇದೀಗ ಆರಂಭವಾಗಿವೆ. ರಾಮಾನುಜಾಚಾರ್ಯರ ಕರ್ಮಭೂಮಿಯ ಅಭಿವೃದ್ಧಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಎಲ್ಲಾ ರೀತಿಯ ಸಹಕಾರ ನೀಡಲಿದ್ದಾರೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಯೋಜನೆ ಸಿದ್ಧವಾಗಿದ್ದು ಹಂತಹಂತವಾಗಿ ಅನುಷ್ಠಾನ ಮಾಡಲಾಗುತ್ತದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಜಲಜೀವನ್– ಮನೆಮನೆಗೆ ಗಂಟೆ ಯೋಜನೆ ಸಮರ್ಪಕವಾಗಿ ಅನುಷ್ಠಾನ ಆಗಬೇಕು. ಉದ್ಯೋಗ ಖಾತ್ರಿ ಯೋಜನೆಯಡಿ ಹೆಚ್ಚೆಚ್ಚು ಕಾಮಗಾರಿಗಳು ನಡೆಯಬೇಕು ಚೆಲುವನಾರಾಯಣನ ದಿವ್ಯಕ್ಷೇತ್ರದ ಅಭಿವೃದ್ಧಿಯಲ್ಲಿ ಯಾರೂ ರಾಜಕೀಯ ಮಾಡಬಾರದು ಎಂದರು.

ಮೇಲುಕೋಟೆಯ ಪ್ರವಾಸಿಮಂದಿರದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಮಣಿ ಮುರುಗನ್, ಉಪಾಧ್ಯಕ್ಷ ಜಿ.ಕೆ.ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಅವ್ವಗಂಗಾಧರ್, ಜಯಲಕ್ಷ್ಮಿಪುಟ್ಟರಾಜು, ಸೋಮಶೇಖರ್, ಮಾಜಿ ಸದಸ್ಯ ಸುಬ್ಬಣ್ಣ, ಕಾರ್ಯಕರ್ತರಾದ ನಿಂಗೇಗೌಡ, ಹರಿಧರ, ನರಸಿಂಹ, ಕಿರಣ್‌ಗೌಡ, ಪಾರ್ಥ, ಪಳಿಯೋಗರೆ ರವಿ, ಎಂ.ಮಹೇಶ್ ಜಯರಾಮು, ಹಾಲು ಉತ್ಪಾದಕರ ಸಂಘದ ಸದಸ್ಯರಾದ ನಂದಕುಮಾರ್ ಬೆಟ್ಟಸ್ವಾಮಿ ಆನಂದಾಳ್ವಾರ್ ತಿರುಮಲೈ, ಈಶಮುರಳಿ, ಹಿರಿಯ ಮುಖಂಡ ನರಸಿಂಹೇಗೌಡ ಸೇರಿದಂತೆ ಗ್ರಾಪಂ ಸದಸ್ಯರು ಮೇಲುಕೋಟೆಯ ಹಲವು ಜೆಡಿಎಸ್ ಮುಖಂಡರು ನಾಗರೀಕರು ಭಾಗಿಯಾಗಿದ್ದರು.

ನಾಳೆ ಉಚಿತ ಕಾರ್ಯಾಗಾರ

ಮಂಡ್ಯ,ಜು.18– HCL Tech ವತಿಯಿಂದ 2024ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಶೇ.70ಕ್ಕಿಂತ ಅಧಿಕ ಅಂಕ ಪಡೆದಿರುವ ವಾಣಿಜ್ಯ, ಕಲಾ, ವಿಜ್ಞಾನ ವಿದ್ಯಾರ್ಥಿಗಳಿಗೆ ಭಾರತ ದೇಶದ ದೊಡ್ಡ 3ನೇ ಸಾಫ್ಟ್‌ವೇರ್ ಕಂಪನಿಯಾದ HCL Tech ನಲ್ಲಿ ಸ್ಟೈಫಂಡ್ ಸಹಿತ ತರಬೇತಿ, ಕಾಯಂ ಉದ್ಯೋಗದ ಜೊತೆಗೆ ಹಣಕಾಸಿನ ಸಹಾಯದೊಂದಿಗೆ ಉನ್ನತ ಶಿಕ್ಷಣ ಪಡೆಯಬಹುದು. ಈ ಉಪಯೋಗಗಳನ್ನು ಪಡೆಯಲು ಮಂಡ್ಯ ಕೌಶಲ ಅಭಿವೃದ್ಧಿ ನಿಗಮ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಹಿಳಾ ಸರ್ಕಾರಿ ಕಾಲೇಜು, ಕಲ್ಲು ಕಟ್ಟಡ ಇವರು ಜಂಟಿಯಾಗಿ ಜುಲೈ 20ರಂದು ಬೆಳಿಗ್ಗೆ 10 ಗಂಟೆಗೆ ಮಹಿಳಾ ಸರ್ಕಾರಿ ಕಾಲೇಜು, ಕಲ್ಲು ಕಟ್ಟಡದಲ್ಲಿ ಉಚಿತ ಕಾರ್ಯಾಗಾರಕ್ಕೆ ಹಾಜರಾಗಬೇಕಾಗಿದೆ.

https://bit.ly/TechBeeKSDC ವೆಬ್‌ಸೈಟ್ ಮೂಲಕ ಇಂದಿನಿಂದಲೇ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ದೂ.ಸಂ: 87227 90340/9845 45471 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲಾ ಕೌಶಲಾಭಿವೃದ್ಧಿ ಕಚೇರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಮಳೆಯಿಂದ ಕೆಸರು ಗದ್ದೆಯಂತಾಗಿರುವ ರಸ್ತೆ



ಭಾರತೀನಗರ ಸಮೀಪದ ಯಡಗನಹಳ್ಳಿ ಗ್ರಾಮದ ಮುಖ್ಯರಸ್ತೆ ಮಳೆಯಿಂದ ಕೆಸರು ಗದ್ದೆಯಂತಾಗಿರುವುದು.

ಭಾರತೀನಗರ,ಜು.18–ಇಲ್ಲಿಗೆ ಸಮೀಪದ ಯಡಗನಹಳ್ಳಿ ಗ್ರಾಮದ ಮುಖ್ಯರಸ್ತೆ ಮಳೆಯಿಂದ ಕೆಸರು ಗದ್ದೆಯಂತಾಗಿದೆ. ಯಡಗನಹಳ್ಳಿಗೆ ಹೋಗುವ ಮುಖ್ಯರಸ್ತೆಯನ್ನೇ ಅಭಿವೃದ್ಧಿ ಪಡಿಸದ ಜನಪ್ರತಿನಿಧಿಗಳ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಗ್ರಾಮಸ್ಥರು ಕಾಡುಕೊತ್ತನಹಳ್ಳಿ, ಭಾರತೀನಗರ ಗ್ರಾಮಗಳಿಗೆ ಸಂಚರಿಸಲು ಈ ರಸ್ತೆಯನ್ನೇ ಅವಲಂಬಿಸಿದ್ದಾರೆ. ಜೊತೆಗೆ ಗ್ರಾಮದಲ್ಲಿರುವ ಶಾಲೆಗಳಿಗೆ ವಿದ್ಯಾರ್ಥಿಗಳು ಪ್ರತಿನಿತ್ಯ ಓಡಾಡಬೇಕಾಗಿದೆ. ಕೆಸರು ಗದ್ದೆಯಂತಿರುವ ಈ ರಸ್ತೆಯಲ್ಲಿ ವಿದ್ಯಾರ್ಥಿಗಳು ಸಂಚರಿಸದಂತಹ ದುಸ್ಥಿತಿ ಬಂದೊದಗಿದೆ.

ಬೈಕ್ ಸವಾರರು ಈ ರಸ್ತೆಯಲ್ಲಿ ಎಲ್ಲಿ ಜಾರಿಬೀಳುತ್ತೇವೋ ಎಂಬ ಭೀತಿಯಿಂದ ಓಡಾಡಬೇಕಿದೆ. ಈಗಾಗಲೇ ಸಾಕಷ್ಟು ಮಂದಿ ಬಿದ್ದು ಗಾಯಗೊಂಡಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳು ಮತ್ತು ಶಾಸಕರು ಇತ್ತ ಕಡೆ ಕೂಡಲೇ ಗಮನ ಹರಿಸಬೇಕೆಂದು ಗ್ರಾಮಸ್ಥರಾದ ವೈ.ಟಿ.ಸಂತೋಷ್, ವೈ.ಇ.ಪ್ರಸನ್ನ, ವೈ.ಇ.ಪ್ರವೀಣ್‌ಕುಮಾರ್ ಒತ್ತಾಯಿಸಿದ್ದಾರೆ.

ಶ್ರೀ ಕಾವೇರಿ ಸಾಯಿಧಾಮದಲ್ಲಿ ಗುರು ಪೂರ್ಣಿಮೆ

ಪಾಂಡವಪುರ, ಜು.18– ತಾಲೂಕಿನ ದೊಡ್ಡಗೌಡನಕೊಪ್ಪಲು ಗ್ರಾಮದ ಶ್ರೀ ಕಾವೇರಿ ಸಾಯಿಧಾಮದಲ್ಲಿ ಗುರು ಪೂರ್ಣಿಮೆ ಅಂಗವಾಗಿ ಗುರು ಸ್ಮರಣೆ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಜುಲೈ 21ರಂದು ಏರ್ಪಡಿಸಲಾಗಿದೆ

ಅಂದು ಬೆಳಿಗ್ಗೆಯಿಂದಲೇ ವಿಶೇಷ ಪೂಜಾ ಕಾರ್ಯಗಳು ನಡೆದು, 9 ಘಂಟೆಯ ನಂತರ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಆರಂಭಗೊಳ್ಳಲಿದೆ. ಇದೇ ವೇಳೆ ಜೆಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಸಕ್ಕರೆ ಕಾಯಿಲೆ, ರಕ್ತದೊತ್ತಡ, ಮೂಳೆ ಮತ್ತು ಕೀಲು, ಪ್ರಸೂತಿ ಮತ್ತು ಸ್ತ್ರೀರೋಗ ತಪಾಸಣೆ, ಕಣ್ಣಿನ ಪೊರೆ ತಪಾಸಣೆ ಹಾಗೂ ಉಚಿತ ಶಸ್ತ್ರಚಿಕಿತ್ಸೆಯನ್ನು ಏರ್ಪಡಿಸಲಾಗಿದೆ. ಮಾಹಿತಿಗೆ 9449825051, 7619415191, 9741001721 ಸಂಪರ್ಕಿಸಬಹುದು.

ದೊಡ್ಡ ಸೋಮನಹಳ್ಳಿ ಹಾಲು ಉತ್ಪಾದಕರ ಸಂಘ: ಡಾಲು ರವಿ ಬಣಕ್ಕೆ ಭರ್ಜರಿ ಗೆಲುವು



ವಿಜಯೋತ್ಸವ ಆಚರಿಸುತ್ತಿರುವ ನೂತನ ನಿರ್ದೇಶಕರುಗಳು.

ಕೆ.ಆರ್.ಪೇಟೆ,ಜು.18–ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ದೊಡ್ಡ ಸೋಮನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಮನ್‌ಮುಲ್ ಹಿರಿಯ ನಿರ್ದೇಶಕ ಡಾಲು ರವಿ ಬಣದ ಎಲ್ಲಾ 10 ಮಂದಿ ನಿರ್ದೇಶಕರು ಗೆಲುವು ಸಾಧಿಸಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ನಿಂಗೇಗೌಡ(67), ಡಿ.ಪಿ.ಯೋಗಾನಂದ(65), ರಮೇಶ್(61), ಮಹೇಂದ್ರ (58), ಭೈರೇಗೌಡ(57), ಡಿ.ಜೆ.ಸಿದ್ದೇಗೌಡ(53) ಮತ ಪಡೆದು ಭರ್ಜರಿ ಗೆಲುವು ಸಾಧಿಸಿದ್ದಾರೆ, ಮಹಿಳಾ ಮೀಸಲು ಕ್ಷೇತ್ರದಿಂದ ಪ್ರತಿಭಾ(62), ಲತಾ.ಎಸ್.ಆರ್ (51) ಜಯ ಸಾಧಿಸಿದರು. ಬಿ.ಸಿ.ಎಂ.ಬಿ. ಮೀಸಲು ಕ್ಷೇತ್ರದಿಂದ ಡಿ.ಕೆ.ರವೀಶ್ (57), ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಸುರೇಶ್(54) ಮತಗಳನ್ನು ಪಡೆದು ಚುನಾಯಿತರಾಗಿದ್ದಾರೆ. ಪ್ರತಿಸ್ಪರ್ಧಿ ಅಭ್ಯರ್ಥಿಗಳೆಲ್ಲರೂ ಪರಾಜಯಗೊಂಡಿದ್ದಾರೆ.

ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಭರತ್ ಕುಮಾರ್ ಕಾರ್ಯನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಜವರೇಗೌಡ, ಗಂಗಾಧರ್ ಕಾರ್ಯನಿರ್ವಹಿಸಿದರು. ನೂತನವಾಗಿ ಆಯ್ಕೆಯಾದ ಎಲ್ಲಾ 10 ಮಂದಿ ನಿರ್ದೇಶಕರನ್ನು ದೊಡ್ಡ ಸೋಮನಹಳ್ಳಿ ಡೇರಿ ಹಾಗೂ ಗ್ರಾಮ ದೇವತೆ ದೇವಾಲಯದ ಆವರಣದಲ್ಲಿ ವಿಜಯೋತ್ಸವ ಸಮಾರಂಭದಲ್ಲಿ ಡಾಲು ರವಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಮಂಜುನಾಥ್, ಪಟೇಲ್ ಮೊಗ್ಗಣ್ಣ, ಕುಮಾರಸ್ವಾಮಿ, ಲಿಂಗರಾಜು, ಡಿ.ಬಿ. ಪ್ರಕಾಶ್, ಡಿ.ಎಸ್.ಸತೀಶ್, ಮುರುಳಿ, ಡಿ.ಎನ್.ನಾಗರಾಜು, ಪಾಪಣ್ಣ(ಸತೀಶ್), ಗೋಪಿ, ಡಿ.ಟಿ.ಯೋಗೇಶ್, ಕಾರ್ಯದರ್ಶಿ ಜವರೇಗೌಡ, ಹಾಲು ಪರೀಕ್ಷಕ ಡಿ.ಸಿ.ಗಂಗಾಧರ್ ಇತರರು ಉಪಸ್ಥಿತರಿದ್ದು ಅಭಿನಂದಿಸಿದರು.

ಮಕ್ಕಳಿಗೆ ಜ್ಞಾನಶಕ್ತಿ ತುಂಬುವ ಕೆಲಸವಾಗಲಿ



ಮಕ್ಕಳಿಗೆ ಅವಿರತ ಸಂಸ್ಥೆಯಿಂದ ಉಚಿತವಾಗಿ ನೋಟ್‌ಬುಕ್ ವಿತರಿಸಲಾಯಿತು.

ಕಿಕ್ಕೇರಿ,ಜು.18–ಮಕ್ಕಳಲ್ಲಿ ಅಗಾಧವಾದ ಪ್ರತಿಭೆ ಜ್ಞಾನಶಕ್ತಿ ಇದ್ದು ಗುರ್ತಿಸಿ ಶಕ್ತಿ ತುಂಬುವ ಕೆಲಸವಾಗಬೇಕಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಸೀತಾರಾಮು ತಿಳಿಸಿದರು.

ಹೋಬಳಿಯ ಚುಜ್ಜಲಕ್ಯಾತನಹಳ್ಳಿ ಮತ್ತಿತರ ಗ್ರಾಮಗಳ ಸರ್ಕಾರಿ ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಅವಿರತ ಸಂಸ್ಥೆಯಿಂದ ಹಮ್ಮಿಕೊಳ್ಳಲಾಗಿದ್ದ ಉಚಿತ ನೋಟ್ ಬುಕ್ ವಿತರಣಾ ಸಮಾರಂಭದಲ್ಲಿ ಮಾತನಾಡಿ, ಸೇವೆಗಳಲ್ಲಿ ವಿದ್ಯಾರ್ಜನೆಗಾಗಿ ಮಾಡುವ ದಾನಿಗಳ ಸೇವೆ ಬಲುದೊಡ್ಡದಾಗಿದೆ. ಸಮಾಜವನ್ನು ಕಟ್ಟುವ ಕೆಲಸಕ್ಕೆ ವಿದ್ಯಾರ್ಥಿಗಳನ್ನು ಪ್ರೇರಕಶಕ್ತಿಯಾಗಿಸುವ ಅವಿರತ ಸಂಸ್ಥೆಯಂತೆ ದಾನಿಗಳು ಮುಂದೆ ಬರಲಿ ಎಂದರು.

ಅವಿರತ ಸಂಸ್ಥೆಯ ಗುರುಪ್ರಸಾದ್ ಮಾತನಾಡಿದರು. ತೆಂಗಿನಘಟ್ಟ, ಕೋಟಹಳ್ಳಿ, ಕಾಳೇನಹಳ್ಳಿ, ಚುಜ್ಜಲಕ್ಯಾತನಹಳ್ಳಿ ಗ್ರಾಮಗಳ ಸರ್ಕಾರಿ ಶಾಲೆ ಮಕ್ಕಳು ನೋಟ್ ಬುಕ್ ಸ್ವೀಕರಿಸಿ ಖುಷಿಪಟ್ಟರು. ಮುಖಂಡ ಮಲ್ಲೇಶ್, ಕಾಳೇಗೌಡ, ಚಿನ್ನೇನಹಳ್ಳಿ ತಿಲಕ್, ಶಿಕ್ಷಕರಾದ ಜಿ.ಎಸ್.ಮಂಜು, ದಯಾನಂದ್, ನಟರಾಜು, ಕುಮಾರಸ್ವಾಮಿ, ರಮೇಶ್, ಲವಣ್ಣ ನಟರಾಜು, ವರಲಕ್ಷ್ಮಿ, ರುಕ್ಮಿಣಿ, ಲಲಿತಾ, ನೇತ್ರಾ ಮುಂತಾದವರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮಂಡ್ಯ,ಜು.18– ಮಂಡ್ಯ ಜಿಲ್ಲೆಯಲ್ಲಿ 2024–25ನೇ ಸಾಲಿನ ರೈತ ಮಹಿಳೆಯರಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಹಸು /ಎಮ್ಮೆ ಖರೀದಿಗಾಗಿ ಮಹಿಳೆಯರಿಗೆ ಶೇಕಡ 6ರ ಬಡ್ಡಿ ದರದಲ್ಲಿ ಸಹಾಯಧನ ಮಂಜೂರಾತಿಗಾಗಿ ಅರ್ಜಿ ಆಹ್ವಾನಿಸಿದೆ.

ಜಿಲ್ಲೆಯ ಮಹಿಳಾ ಅರ್ಹ ಫಲಾಪೇಕ್ಷಿಗಳು ಸಂಬಂಧಪಟ್ಟ ತಾಲೂಕಿನ ಪಶುಪಾಲನಾ ಇಲಾಖೆಯ ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ಇವರಿಂದ ನಿಗದಿತ ನಮೂನೆ ಅರ್ಜಿಯನ್ನು ಸ್ವೀಕರಿಸಿ ಅದೇ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಜುಲೈ 31 ರೊಳಗೆ ತಾಲೂಕು ಪಶುಪಾಲನಾ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿಗಳ ಕಚೇರಿಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪಶುವೈದ್ಯ ಸಂಸ್ಥೆಯ ಪಶುಪಾಲನಾ ಇಲಾಖೆಯ ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ಅಥವಾ ಜಿಲ್ಲಾ ಉಪ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂಜಾಟ; 49 ಸಾವಿರ ನಗದು ವಶಕ್ಕೆ

ಮೈಸೂರು, ಜು.18(ಎಂಕೆ)– ಇಸ್ಪೀಟ್ ಜೂಜಾಟ ನಡೆಯುತ್ತಿದ್ದ ಗೋಡೌನ್‌ನಲ್ಲಿ ದಾಳಿ ನಡೆಸಿರುವ ಸಿಸಿಆರ್‌ಬಿ ಪೊಲೀಸರು, ಪಣಕ್ಕಿಟ್ಟಿದ್ದ 49,000 ರೂ. ನಗದು ಹಣವನ್ನು ವಶಕ್ಕೆ ಪಡೆದಿದ್ದಾರೆ.

ನಗರ ಹೆಬ್ಬಾಳ್ ಪೊಲೀಸ್ ಠಾಣೆ ವ್ಯಾಪ್ತಿಯ ಹೆಬ್ಬಾಳ್ ಕೈಗಾರಿಕಾ ಪ್ರದೇಶದ ಪೋದಾರ್ ಸ್ಕೂಲ್ ಹತ್ತಿರದ ಪ್ಲಾಟ್ ನಂ.288–ಐ ಎಂಬ ಕಟ್ಟಡದಲ್ಲಿ 25ಕ್ಕೂ ಹೆಚ್ಚು ಮಂದಿ ಸೇರಿಕೊಂಡು ಅಂದರ್ ಬಾಹರ್ ಜೂಜಾಟವಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಸಿಸಿಆರ್‌ಬಿ ಪೊಲೀಸರು, 31 ಜನರನ್ನು ವಶಕ್ಕೆ ಪಡೆದು, ಜೂಜಾಟಕ್ಕೆ ಪಣವಾಗಿಟ್ಟಿದ್ದ 49,000 ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪರಿಶಿಷ್ಟ ಜಾತಿ–ಪಂಗಡದ ಕೈಗಾರಿಕೋದ್ಯಮಿಗಳ ಕುಂದುಕೊರತೆ ಸಭೆ

ಪರಿಶಿಷ್ಟ ಉದ್ದಿಮೆದಾರರಿಗೆ ಸರ್ಕಾರದ ಸವಲತ್ತುಗಳನ್ನು ಕಲ್ಪಿಸುವಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ

ಕರ್ನಾಟಕ ದಲಿತ ಉದ್ಯಮಿದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸ್



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕೈಗಾರಿಕೋದ್ಯಮಿಗಳ ಕುಂದುಕೊರತೆ ಸಭೆಯಲ್ಲಿ ಕರ್ನಾಟಕ ದಲಿತ ಉದ್ಯಮಿದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸ್ ಮಾತನಾಡಿದರು.

ಕೆಐಎಡಿಬಿ ಸಂಬಂಧ ಹೆಚ್ಚು ಅಹವಾಲು ಸಲ್ಲಿಕೆ

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ 20 ಹಾಗೂ ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತೆ 32 ಲಿಖಿತ ಅಹವಾಲು ಸಲ್ಲಿಕೆಯಾದವು. ಈ ಪೈಕಿ ಕೆಐಎಡಿಬಿ ಮೂಲಕ ಆಗದ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ಅಹವಾಲು ಸಲ್ಲಿಕೆಯಾದವು. ಕೈಗಾರಿಕಾ ನಿವೇಶನ ಮಂಜೂರಾಗಿದ್ದರೂ ಹಂಚಿಕೆ ಮಾಡದಿರುವುದು, ಮೂಲ ಸೌಲಭ್ಯ ಇಲ್ಲದ ಭೂಮಿ ನೀಡಿರುವುದು ಹಾಗೂ ಮೂಲ ಸೌಲಭ್ಯ ಕಲ್ಪಿಸದೇ ಯೋಜನೆ ಅನುಷ್ಠಾನಗೊಳಿಸಿಲ್ಲವೆಂದು ಉದ್ಯಮಿಗಳಿಗೆ ಅಧಿಕಾರಿಗಳು ನೋಟಿಸ್ ನೀಡಿರುವುದು ಸೇರಿದಂತೆ ವಿವಿಧ ರೀತಿಯ ಅಹವಾಲುಗಳನ್ನು ಸಲ್ಲಿಸಲಾಯಿತು.

ಮೈಸೂರು,ಜು.18(ಪಿಎಂ)– ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ದಿಮೆದಾರರಿಗೆ ಸರ್ಕಾರದ ಸವಲತ್ತುಗಳನ್ನು ಕಲ್ಪಿಸುವುದು ಸಮರ್ಪಕ ರೀತಿಯಲ್ಲಿ ಆಗುತ್ತಿಲ್ಲ. ಇದಕ್ಕೆ ಅಧಿಕಾರಿಗಳೇ ನೇರ ಕಾರಣ ಎಂದು ಕರ್ನಾಟಕ ದಲಿತ ಉದ್ಯಮಿದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉದ್ಯಮಿದಾರರ ಸಂಘದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಮೈಸೂರು ಜಿಲ್ಲೆಯ ಹಾಲಿ ಮತ್ತು ಭಾವಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕೈಗಾರಿಕೋದ್ಯಮಿಗಳ ಕುಂದುಕೊರತೆ ಸಭೆಯಲ್ಲಿ ಅವರು ಮಾತನಾಡಿದರು.

2009ರಲ್ಲಿ ನಿವೇಶನ ಮತ್ತು ಮಳಿಗೆ ಹಂಚಿಕೆಯಲ್ಲಿ ಮೀಸಲಾತಿ ಜಾರಿಗೊಂಡಿತು. ಅಂತೆಯೇ ಎಸ್‌ಸಿ–ಎಸ್‌ಟಿ ಮೀಸಲು ನಿವೇಶನಗಳನ್ನು ಇತರರಿಗೆ ಹಂಚಬಾರದು ಎಂಬ ನಿಯಮ ವಿಧಿಸಲಾಯಿತು. ಆದರೆ ಇದನ್ನು ಉಲ್ಲಂಘಿಸಿ ರಾಜ್ಯದ ಸುಮಾರು 22 ಕೈಗಾರಿಕೆ ಪ್ರದೇಶಗಳಲ್ಲಿ ಒಟ್ಟಾರೆ 391 ಎಕರೆಯಲ್ಲಿ ನಿವೇಶನಗಳನ್ನು ಅನ್ಯರಿಗೆ ಹಂಚಲಾಗಿದೆ. ಹೆಚ್ಚಾಗಿ ಬೆಂಗಳೂರು ಹಾಗೂ ಕೋಲಾರ ಸುತ್ತಮುತ್ತ ಈ ರೀತಿ ಹಂಚಿಕೆ ಮಾಡಲಾಗಿದೆ ಎಂದು ದೂರಿದರು. ಕಳೆದ ನಾಲ್ಕೈದು ವರ್ಷಗಳಿಂದ ಇದು ಆಗುತ್ತಲೇ ಇದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ 2022ರಲ್ಲಿ ಈ ಬಗ್ಗೆ ಕ್ರಮ ಜರುಗಿಸಿ, ಪರಿಹರಿಸಿ ಎಂದು ಅವರು ನಿರ್ದೇಶನ ಕೊಟ್ಟಿದ್ದರು. ಆದರೂ ಯಾವುದೇ ಪ್ರಯೋಜನ ಆಗಲಿಲ್ಲ. ಇದೀಗ ಹಾಲಿ ಸಚಿವ ಎಂ.ಬಿ.ಪಾಟೀಲ ಅವರಿಗೆ ಈ ಸಂಬಂಧ ಮನವಿ ಸಲ್ಲಿಸಿದ್ದು, ಬದಲಿ ಜಾಗ ಕಲ್ಪಿಸಿಕೊಡಲು ಅವರು ಒಪ್ಪಿದ್ದಾರೆ. ಎಲ್ಲಿ ಜಮೀನು ಕೊಡಬೇಕಿತ್ತೋ ಅದರ ಅಕ್ಕಪಕ್ಕದಲ್ಲೇ ಕೊಡಬೇಕೆಂದು ಒತ್ತಾಯಿಸಿದ್ದು, 391 ಎಕರೆ ಜಮೀನನ್ನು ಅನ್ಯರಿಗೆ ಕೊಟ್ಟವರನ್ನು ಸೇವೆಯಿಂದ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು.

ಪರಿಶಿಷ್ಟ ಉದ್ಯಮಿಗಳು ತಮಗೆ ಆದ ಅನ್ಯಾಯ–ತೊಂದರೆ ಸಂಬಂಧ ದಾಖಲೆ ಸಮೇತ ದೂರು ನೀಡಬೇಕು. ನಾವು ಸರಿ ಇದ್ದು ತಪ್ಪು ಮಾಡುವವರನ್ನು ಪ್ರಶ್ನೆ ಮಾಡಬೇಕು. ರಾಜ್ಯ ಸರ್ಕಾರ ಕಳೆದ ವರ್ಷ ಬಜೆಟ್‌ನಲ್ಲಿ ಇಡೀ ಕೈಗಾರಿಕಾ ವಲಯಕ್ಕೆ 400 ಕೋಟಿ ಅನುದಾನ ನೀಡಿದೆ. ಆದರೆ ಕನಿಷ್ಠ 650 ಕೋಟಿ ನೀಡಬೇಕು. ಜೊತೆಗೆ 2016–17ರಿಂದ ಕೆಐಎಡಿಬಿಗೆ ಸರ್ಕಾರ ಕೊಡಬೇಕಿರುವ ಲ್ಯಾಂಡ್ ಸಬ್ಸಿಡಿ 800 ಕೋಟಿ ಬಾಕಿ ಇದ್ದು, ಇದರ ಬಿಡುಗಡೆಗೂ ಶೀಘ್ರವೇ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಪತ್ರ ವ್ಯವಹಾರ ಮುಖ್ಯ: ಪತ್ರ ವ್ಯವಹಾರದ ಮೂಲಕ ಸಮಸ್ಯೆ ಬಗೆಹರಿಸದ ಬಗ್ಗೆ ದಾಖಲೆ ಸೃಷ್ಟಿಸುವುದನ್ನು ಪರಿಶಿಷ್ಟ ಉದ್ಯಮಿಗಳು ರೂಢಿಸಿಕೊಳ್ಳಬೇಕು. ಯಾವುದೇ ಇಲಾಖೆ ಅಥವಾ ಪ್ರಾಧಿಕಾರವಾಗಲಿ, ಪ್ರತಿದಿನ ಒಂದು ಪೋಸ್ಟ್ ಕಾರ್ಡ್ ಕಳುಹಿಸಬಹುದು. ಇಲ್ಲವೇ ವಾರಕ್ಕೊಂದು ರಿಜಿಸ್ಟರ್ ಪೋಸ್ಟ್ ಕಳುಹಿಸಬಹುದು. ಅದೂ ಸಾಧ್ಯವಾಗದಿದ್ದರೆ ಸಂಬಂಧಿಸಿದ ಕಚೇರಿಗೆ ಖುದ್ದು ಭೇಟಿ ನೀಡಿ ಅರ್ಜಿ ಸಲ್ಲಿಸಿ ಸ್ವೀಕೃತಿ ಪಡೆಯಬೇಕು. ಆಗ ಮಾತ್ರ ಅಧಿಕಾರಿಗಳು ಎಚ್ಚೆತ್ತುಕೊಳ್ಳಲು ಸಾಧ್ಯ ಎಂದು ಹೇಳಿದರು. ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉದ್ಯಮಿದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ವಿಜಯಶಂಕರ್, ನಿರ್ದೇಶಕರಾದ ಈಶ್ವರ್ ಚಕ್ಕಡಿ, ಆದರ್ಶ ಎಲ್ಲಪ್ಪ, ಉದ್ಯಮಿ ಜನಾರ್ಧನ್ ಮತ್ತಿತರರು ಹಾಜರಿದ್ದರು.

ಮುಡಾ ನಿವೇಶನ ಹಗರಣ ಸಿಬಿಐ ತನಿಖೆಗೆ ವಹಿಸದಿದ್ದರೆ ಎಂಜಿಪಿ, ಕ್ಲೀನ್ ಮೈಸೂರ್ ವತಿಯಿಂದ ಕೋರ್ಟಿನಲ್ಲಿ ಪಿಐಎಲ್ ದಾಖಲು

- ಪತ್ರಿಕಾಗೋಷ್ಠಿಯಲ್ಲಿ ಎಂಜಿಪಿ ಸಂಸ್ಥಾಪಕ ಭಾಮಿ ವಿ.ಶೆಣೈ ಎಚ್ಚರಿಕೆ
- ಮುಡಾದಲ್ಲಿ ನಡೆದಿರುವ ಎಲ್ಲಾ ಹಗರಣಗಳ ತನಿಖೆ ಆಗಬೇಕು
- ಸಿಎ ನಿವೇಶನಗಳ ವ್ಯಾಪಕ ದುರುಪಯೋಗ
- ಮುಡಾ ಪುನರ್ರಚನೆಗೂ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ ಭಾಮಿ ವಿ.ಶೆಣೈ ಮಾತನಾಡಿದರು.

ಮೈಸೂರು, ಜು.18(ಜಿಎ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಎಲ್ಲಾ ರೀತಿಯ ಅಕ್ರಮಗಳನ್ನೂ ಸಿಬಿಐ ತನಿಖೆಗೆ ವಹಿಸದಿದ್ದರೆ ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) ಹಾಗೂ ಕ್ಲೀನ್ ಮೈಸೂರು ಫೌಂಡೇಷನ್ ವತಿಯಿಂದ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ (ಪಿಐಎಲ್) ದಾಖಲಿಸುವ ಚಿಂತನೆ ನಡೆಸಲಾಗುವುದು ಎಂದು ಎಂಜಿಪಿ ಸಂಸ್ಥಾಪಕ ಭಾಮಿ ವಿ.ಶೆಣೈ ಎಚ್ಚರಿಸಿದರು.

ಮುಡಾ ಬಹುಕೋಟಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಜಿಪಿ ಹಾಗೂ ಕ್ಲೀನ್ ಮೈಸೂರು ಫೌಂಡೇಶನ್ ವತಿಯಿಂದ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 50:50ರ ಅನುಪಾತದ ನಿವೇಶನ ಹಂಚಿಕೆಯಲ್ಲಿನ ಅವ್ಯವಹಾರ ಮಾತ್ರವಲ್ಲದೆ, ಈವರೆಗಿನ ಎಲ್ಲಾ ರೀತಿಯ ಅಕ್ರಮಗಳ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳ ಹೆಸರು ತಳಕು ಹಾಕಿಕೊಂಡಿರುವ ಕಾರಣದಿಂದ ರಾಜ್ಯದಲ್ಲಿ ಸಾಕಷ್ಟು ಸದ್ದು ಮಾಡುತ್ತಿದೆ. ಆದರೆ ಈ ಹಿಂದೆಯೇ ಮುಡಾ ಹಗರಣದ ಬಗ್ಗೆ ಗ್ರಾಹಕರ ಪರಿಷತ್ ಧ್ವನಿ ಎತ್ತಿತ್ತು. ಒಂದು ಆರೋಪಕ್ಕೆ ಸಂಬಂಧಪಟ್ಟಂತೆ ಮಾತ್ರವಲ್ಲದೆ ಮುಡಾದಲ್ಲಿ ನಡೆದಿರುವ ಎಲ್ಲಾ ಅವ್ಯವಹಾರಗಳ ಬಗ್ಗೆಯೂ ಮಾತನಾಡಬೇಕಿದೆ ಎಂದರು. ಪ್ರಕರಣದ ತನಿಖೆಗಾಗಿ ಸರ್ಕಾರ ನಿವೃತ್ತ ನ್ಯಾಯಮೂರ್ತಿ ಪಿ.ಎಸ್.ದೇಸಾಯಿ ಅವರ ಏಕಸದಸ್ಯ ವಿಚಾರಣಾ ಆಯೋಗವನ್ನು ನೇಮಿಸಿದೆ. ಇದಕ್ಕೆ ಮುನ್ನ ಐಎಎಸ್ ಅಧಿಕಾರಿ ಆರ್.ವೆಂಕಟಾಚಲಪತಿ ನೇತೃತ್ವದ ತನಿಖಾ ಸಮಿತಿ ದಾಖಲೆಗಳನ್ನು ಪರಿಶೀಲಿಸಿದೆ. ಈ ಹಿಂದೆಯೂ ಟಿ.ಎಂ. ವಿಜಯ ಭಾಸ್ಕರ್ ಅವರ 1200 ಪುಟಗಳ ವರದಿ ಬಂದಿತ್ತು. ಆದರೆ ಆ ವರದಿ ಇನ್ನೂ ಬಹಿರಂಗವಾಗಿಲ್ಲ. ವರದಿ ಬಗ್ಗೆ ಮಾತನಾಡಿದ್ದಕ್ಕೆ ಜಿಲ್ಲಾಧಿಕಾರಿಯನ್ನೇ ವರ್ಗಾವಣೆ ಮಾಡಿದ್ದರು. ಸರ್ಕಾರ ಕೂಡಲೇ ವಿಜಯ ಭಾಸ್ಕರ್ ವರದಿ ಮತ್ತು ವಿಚಾರಣಾ ಸಮಿತಿಯ ವರದಿಯನ್ನು ಬಹಿರಂಗ ಮಾಡಬೇಕು ಎಂದು ಆಗ್ರಹಿಸಿದರು.

ಮುಡಾದಿಂದ ನೀಡಿರುವ ಸಿಎ ಸೈಟ್‌ಗಳು ದುರ್ಬಳಕೆಯಾಗುತ್ತಿದ್ದು, ಈ ಬಗ್ಗೆ ಮೈಸೂರು ಗ್ರಾಹಕ ಪರಿಷತ್ ಹಲವು ಬಾರಿ ಆಯುಕ್ತರ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಮಣಿವಣ್ಣನ್ ಅವರು ಜಿಲ್ಲಾಧಿಕಾರಿಯಾಗಿದ್ದಾಗ ಸುಮಾರು 200 ಸೈಟುಗಳನ್ನು ಸಿಎ ನಿವೇಶನಕ್ಕೆ ನಿಗದಿಪಡಿಸಲಾಗಿತ್ತು. ಅವುಗಳಲ್ಲಿ ಬಹಳಷ್ಟು ದುರ್ಬಳಕೆಯಾಗುತ್ತಿದ್ದು, ಅಲ್ಲಿ ವಾಣಿಜ್ಯ ಕಟ್ಟಡ, ಶಾಲೆ, ಅಂಗಡಿ, ಪೆಟ್ರೋಲ್ ಬಂಕ್‌ಗಳು ಕಾರ್ಯನಿರ್ವಹಿಸುತ್ತಿವೆ ಎಂದು ಆರೋಪಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಿಐಟಿಬಿ ಅಂದರೆ ಈಗಿನ ಮುಡಾ ಆರಂಭಿಸುವಾಗ ಜನೋಪಯೋಗಿ ಧ್ಯೇಯಗಳಿದ್ದವು. ಆದರೆ ಇಂದು ಮುಡಾ ಜನಸಾಮಾನ್ಯರಿಗೆ ವಸತಿ ಕಲ್ಪಿಸುವಲ್ಲಿ ವಿಫಲವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಹೊಸದಾಗಿ ನಿವೇಶನ ಹಂಚಿಕೆಯಾಗಿಲ್ಲ. ದೊಡ್ಡ ಸ್ಥಾನದಲ್ಲಿರುವವರಿಗೆ ಮಾತ್ರ ನಿವೇಶನ ನೀಡಲಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಎಲ್ಲದರಲ್ಲೂ ಅವ್ಯವಹಾರ ವಾಸನೆ: ಮುಡಾ ನಿವೃತ್ತ ಅಧಿಕಾರಿ ಬಿ.ಎಸ್.ನಟರಾಜ್ ಮಾತನಾಡಿ, 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ಹಗರಣದಲ್ಲಿ ಇತ್ತೀಚೆಗೆ 3800ಕ್ಕೂ ಹೆಚ್ಚು ಮಂಜೂರಾತಿ ಪತ್ರ ವಿತರಣೆಯಾಗಿದೆ. ಇಲಾಖೆ ಕಾರ್ಯದರ್ಶಿಗಳ ಅನುಮತಿ ಇಲ್ಲದೇ ಇದನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ಆದರೆ, ಆಯುಕ್ತರ ಆಪ್ತ ಸಹಾಯಕರೇ 2000 ಮಂಜೂರಾತಿ ಪತ್ರ ವಿತರಣೆ ಮಾಡಿದ್ದಾರೆ ಎಂಬ ಮಾಹಿತಿ ಇದೆ. ವಿಧಾನಸಭೆಯ ಕಲಾಪದಲ್ಲಿ ಶಾಸಕರೊಬ್ಬರು ಈವರೆಗೂ ಎಷ್ಟು ಮಂಜೂರಾತಿ ಪತ್ರ ವಿತರಣೆ ಮಾಡಿದ್ದೀರಾ ಎಂದು ಪ್ರಶ್ನಿಸಿದ್ದಕ್ಕೆ 1219 ಮಂಜೂರಾತಿ ಪತ್ರ ವಿತರಣೆ ಮಾಡಲಾಗಿದೆ ಎಂದು ನಗರಾಭಿವೃದ್ಧಿ ಸಚಿವರು ಉತ್ತರ ನೀಡಿರುವುದರಲ್ಲೂ ಅನುಮಾನವಿದೆ ಎಂದರು.

ಒಕ್ಕೊರಲ ಆಗ್ರಹ: ಮುಡಾ ಹಗರಣಗಳ ವಿಚಾರಣೆಯನ್ನು ಸಿಬಿಐಗೆ ವಹಿಸದಿದ್ದರೆ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ದಾಖಲಿಸಲು ಚಿಂತನೆ ನಡೆಸಲಾಗುವುದು. ವಿಜಯಭಾಸ್ಕರ್ ವರದಿ ಮತ್ತು 2023ರ ತಾಂತ್ರಿಕ ವರದಿಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿ, ಅವುಗಳ ಶಿಫಾರಸ್ಸು, ಸಲಹೆಗಳನ್ನು ಅನುಷ್ಠಾನಕ್ಕೆ ತರಬೇಕು. ನಾಗರಿಕ ಸೌಲಭ್ಯ(ಸಿಎ)ನಿವೇಶನಗಳನ್ನು ಸಹ ಪ್ರಕಟಿಸಬೇಕು. ಮುಡಾವನ್ನು ಪುನರ್ರಚಿಸಿ, ಬಡವರಿಗೆ ವಸತಿ ಸೌಕರ್ಯಕ್ಕೆ ಸಹಾಯವಾಗುವಂತೆ ರೂಪಿಸಬೇಕು. ಮೈಸೂರನ್ನು ಅಗ್ರಗಣ್ಯ ನಗರವನ್ನಾಗಿ ಅಭಿವೃದ್ಧಿಪಡಿಸುವ ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು. ರಾಜಕಾಲುವೆ ಮತ್ತು ಪೂರ್ಣಯ್ಯ ನಾಲೆಗಳ ಒತ್ತುವರಿ ತೆರವುಗೊಳಿಸಬೇಕು ಎಂಬುದು ಒಕ್ಕೊರಲ ಆಗ್ರಹವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್, ಭಾನು ಪ್ರಶಾಂತ್, ಶೋಭನಾ ಉಪಸ್ಥಿತರಿದ್ದರು.

ಶಿರಾಡಿಘಾಟ್‌ನಲ್ಲಿ ಕಾರಿನ ಮೇಲೆ ಗುಡ್ಡ ಕುಸಿತ: ಚಾಲಕ ಪಾರು, ಸಂಚಾರ ಸ್ಥಗಿತ



ಸಕಲೇಶಪುರ, ಜು.18–ಸತತ ಮಳೆಯಿಂದಾಗಿ ಶಿರಾಡಿ ಘಾಟ್ ರಸ್ತೆಯಲ್ಲಿ ಗುರುವಾರ ನಸುಕಿನ ಜಾವ ಏಕಾಏಕಿ ಮಣ್ಣು ಗುಡ್ಡ ಮಾರುತಿ ಓಮಿನಿ ಕಾರು ಮೇಲೆ ಬಿದ್ದು ಕಾರು ಮಣ್ಣಿನಲ್ಲಿ ಸಿಲುಕಿಕೊಂಡಿದೆ. ಬೇಲೂರು ತಾಲೂಕಿನ ಬಿಕ್ಕೋಡು ಮೂಲದ ಶರತ್ ಎಂಬವರು ಮಂಗಳೂರು ಕಡೆಯಿಂದ ಸಕಲೇಶಪುರ ಮಾರ್ಗವಾಗಿ ಬರುವ ಸಂದರ್ಭ ದೊಡ್ಡತಪ್ಪಲು ಸಮೀಪ ಗುಡ್ಡ ಕುಸಿದು ಕಾರಿನ ಮೇಲೆ ಬಿದ್ದಿದ್ದು ಕಾರು ಮಣ್ಣಿನ ರಾಶಿಯಲ್ಲಿ ಸಿಲುಕಿದೆ. ಈ ಸಂದರ್ಭದಲ್ಲಿ ಹೆದ್ದಾರಿ ಕಾಮಗಾರಿ ಗುತ್ತಿಗೆದಾರ ಕಂಪನಿಯ ಬಿಹಾರ ಮೂಲದ ಕಾರ್ಮಿಕರು ಅಖಿಲೇಶ್, ಶರತ್ ಅವರನ್ನು ವಾಹನದಿಂದ ಹೊರಗೆ ಕರೆತಂದು ಅವರ ಪ್ರಾಣ ಉಳಿಸಿದ್ದಾರೆ. ಅಖಿಲೇಶ್ ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದು, ಶರತ್ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಗೆ ದಾಖಲಾಗಿದ್ದಾರೆ. ಗುಡ್ಡ ಕುಸಿತದಿಂದ ಶಿರಾಡಿಘಾಟ್‌ನಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿದ್ದು, ಘಟನೆ ನಡೆದ ಸ್ಥಳದಿಂದ ಎರಡೂ ಕಡೆಗೆ 5–5 ಕಿ.ಮೀ. ಟ್ರಾಫಿಕ್ ಜಾಮ್ ಉಂಟಾಗಿತ್ತು. ಹೆದ್ದಾರಿ ಕಾಮಗಾರಿಯವರು ಮಣ್ಣು ತೆರವುಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದು, ಮಣ್ಣಿನ ಕುಸಿತ ನಡೆಯುತ್ತಲೇ ಇದೆ. ಸದ್ಯದ ಮಟ್ಟಿಗೆ ಏಕಮುಖ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಹಾಸನದ ಕಂದಲಿ ಗ್ರಾಮದ ಬಳಿಯೇ ಪೊಲೀಸರು ವಾಹನಗಳನ್ನು ತಡೆಯುತ್ತಿದ್ದಾರೆ. ಅತ್ತ ಚಾರ್ಮಾಡಿ ಘಾಟ್ ರಸ್ತೆಯಲ್ಲೂ ಪ್ರಯಾಣ ದುಸ್ತರವಾಗಿದ್ದು, ಹಾಸನ ಬಳಿಯೇ ವಾಹನ ನಿಲ್ಲಿಸಲು ಪೊಲೀಸರು ಸೂಚನೆ ನೀಡುತ್ತಿದ್ದಾರೆ.

ದೇಶ - ವಿದೇಶ

ಅಮೆರಿಕಾ ಅಧ್ಯಕ್ಷ ಜೋ ಬೈಡನ್‌ಗೆ ಕೊರೊನಾ



ವಾಷಿಂಟನ್: ಅಮೆರಿಕದಲ್ಲಿ ಈಗ ಚುನಾವಣೆ ಬಿಸಿ ಆರಂಭವಾಗಿದೆ. ಈ ವೇಳೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಕೊರೊನಾ ಸೋಂಕಿಗೆ ತುತ್ತಾಗಿದ್ದಾರೆ. ಲಾಸ್ ವೇಗಾಸ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗ ಅಧ್ಯಕ್ಷ ಜೋ ಬಿಡನ್ ಅವರಿಗೆ ಕೊರೊನಾ ಪಾಸಿಟಿವ್ ಕಂಡುಬಂದಿದೆ ಎಂದು ಶ್ವೇತಭವನ ತಿಳಿಸಿದೆ. ಮಾಹಿತಿ ಪ್ರಕಾರ ಅವರಿಗೆ ಕೊರೊನಾ ಲಸಿಕೆ ನೀಡಲಾಗಿದೆ. ಬೈಡನ್ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬಂದರೂ ಸಹ ಅವರು ತಮ್ಮ ಕೆಲಸಗಳಿಗೆ ಇದರ ಪರಿಣಾಮ ಬೀಳದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಅಧ್ಯಕ್ಷರ ಆರೋಗ್ಯದ ಕುರಿತಾದ ಅಪ್‌ಡೇಟ್‌ಗಳನ್ನು ಶ್ವೇತ ಭವನ ನೀಡುತ್ತಲೇ ಇದೆ. ಈಗಾಗಲೇ ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆಯ ಪ್ರಚಾರ ಬಿರುಸಿನಿಂದ ಸಾಗಿದೆ. ಜೋ ಬೈಡನ್ ಮತ್ತೊಮ್ಮೆ ಕಣಕ್ಕೆ ಇಳಿಯಲಿದ್ದು, ಈವರೆಗೆ ನಡೆದ ಎಲ್ಲಾ ಸಮೀಕ್ಷೆ ಗಳಲ್ಲಿ ಬೈಡಾನ್ ಅವರಿಗೆ ಹಿನ್ನಡೆ ಎನ್ನುವುದು ಕಾಣಿಸುತ್ತಿದೆ. ಇವರ ಪ್ರತಿ ಸ್ಪರ್ಧಿ ಡೊನಾಲ್ಡ್ ಟ್ರಂಪ್ ಅವರು ಗೆಲುವು ಸಾಧಿಸಬಹುದು ಎಂದು ಲೆಕ್ಕಾಚಾರ ಶುರುವಾಗಿದೆ.

ಹಳಿ ತಪ್ಪಿದ ಚಂಡೀಗಢ–ದಿಬ್ರುಗಢ ಎಕ್ಸ್‌ಪ್ರೆಸ್: ನಾಲ್ವರು ಪ್ರಯಾಣಿಕರ ಸಾವು

ಲಖ್ನೋ: ಉತ್ತರ ಪ್ರದೇಶದ ಗೊಂಡಾದಲ್ಲಿ ಚಂಡೀಗಢ–ದಿಬ್ರುಗಢ ಎಕ್ಸ್‌ಪ್ರೆಸ್ ರೈಲಿನ ಹಲವು ಬೋಗಿಗಳು ಹಳಿತಪ್ಪಿದ ಪರಿಣಾಮ ಪ್ರಯಾಣಿಕರು ಸಾವನ್ನಪ್ಪಿದ್ದಾರೆ. ಉತ್ತರ ಪ್ರದೇಶದ ಗೊಂಡಾ ಮತ್ತು ಜಿಲಾಹಿ ನಡುವಿನ ಪಿಕೌರಾದಲ್ಲಿ ಈ ಘಟನೆ ನಡೆದಿದೆ. ಕಾರ್ಯಾಚರಣೆಗಾಗಿ ರಕ್ಷಣಾ ತಂಡ ಸ್ಥಳಕ್ಕೆ ಧಾವಿಸಿದೆ. ಕೆಲವು ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.



ಪುರಿ ಜಗನ್ನಾಥ ದೇವಸ್ಥಾನದ ಆಭರಣಗಳ ಸ್ಥಳಾಂತರಕ್ಕೆ ಚಾಲನೆ

ಪುರಿ: ಒಡಿಶಾದ ಪುರಿಯಲ್ಲಿರುವ 12ನೇ ಶತಮಾನದ, ಹೆಸರಾಂತ ಜಗನ್ನಾಥ ದೇವಸ್ಥಾನದ ಖಜಾನೆ 'ರತ್ನ ಭಂಡಾರ'ವನ್ನು, ಅಲ್ಲಿರುವ ಆಭರಣಗಳ ಸ್ಥಳಾಂತರಕ್ಕಾಗಿ ಗುರುವಾರ ತೆರೆಯಲಾಯಿತು. ಆಭರಣಗಳನ್ನು ದೇಗುಲದ ಆವರಣದಲ್ಲಿಯೇ ತಾತ್ಕಾಲಿಕವಾಗಿ ನಿರ್ಮಿಸಿರುವ ಭದ್ರತಾ ಕೊಠಡಿಗೆ ಸ್ಥಳಾಂತರಿಸಲಾಗುತ್ತದೆ. ಜಗನ್ನಾಥ ದೇವರಿಗೆ ಬೆಳಿಗ್ಗೆ 9ಕ್ಕೆ ವಿಶೇಷ ಪೂಜೆ ಬಳಿಕ, ಒಡಿಶಾ ಸರ್ಕಾರ ರಚಿಸಿರುವ ಮೇಲುಸ್ತುವಾರಿ ಸಮಿತಿಯ ಸದಸ್ಯರು ರತ್ನ ಭಂಡಾರ ತೆರೆಯುವ ಕಾರ್ಯಕ್ಕೆ ಚಾಲನೆ ನೀಡಿದರು. 46 ವರ್ಷಗಳ ಬಳಿಕ ರತ್ನ ಭಂಡಾರವನ್ನು ಜುಲೈ 14ರಂದು ಮೊದಲ ಬಾರಿಗೆ ತೆರೆಯಲಾಗಿತ್ತು.



ವಿಡಿಯೋ ಮಾಡುವ ವೇಳೆ ಜಲಪಾತದ ಕಮರಿಗೆ ಬಿದ್ದು ರೀಲ್ಸ್ ಸ್ಟಾರ್ ಅನ್ವಿ ಸಾವು

ಮುಂಬೈ: ರೀಲ್ಸ್ ಮೂಲಕ ಖ್ಯಾತಿ ಗಳಿಸಿದ್ದ ಮುಂಬೈ ಮೂಲದ ಚಾರ್ಟರ್ಡ್ ಅಕೌಂಟೆಂಟ್ ಅನ್ವಿ ಕಾಮ್ದಾರ್ ಅವರು ಮಹಾರಾಷ್ಟ್ರದ ರಾಯಗಢ ಜಿಲ್ಲೆಯಲ್ಲಿ ವಿಡಿಯೋ ಮಾಡುವಾಗ ಜಲಪಾತದ ಕಮರಿಗೆ ಬಿದ್ದು ಸಾವನ್ನಪ್ಪಿದ್ದಾರೆ.



27 ವರ್ಷದ ರೀಲ್ಸ್ ಸ್ಟಾರ್ ಅನ್ವಿ ಅವರು ತಮ್ಮ ಏಳು ಸ್ನೇಹಿತರೊಂದಿಗೆ ಪ್ರವಾಸಕ್ಕೆಂದು ಪಕ್ಕದ ರಾಯಗಡ ಜಿಲ್ಲೆಯ ಮಂಗಾಂವ್‌ನ ಪ್ರಸಿದ್ಧ ಕುಂಭೆ ಜಲಪಾತಕ್ಕೆ ತೆರಳಿದ್ದರು. ಜಲಪಾತದ ಬಳಿ ವಿಡಿಯೋ ಮಾಡುತ್ತಿದ್ದ ವೇಳೆ 300 ಅಡಿ ಆಳದ ಕಮರಿಗೆ ಬಿದ್ದಿದ್ದಾರೆ. ಮಂಗಾಂವ್ ಪೊಲೀಸ್ ಠಾಣೆಯ ಅಧಿಕಾರಿ ಪ್ರಕಾರ, ಮುಂಬೈನ ಮುಲುಂಡ್ ಪ್ರದೇಶದ ನಿವಾಸಿ ಕಾಮ್ದಾರ್ ಮಳೆಯ ನಡುವೆ ತಮ್ಮ ಸ್ನೇಹಿತರೊಂದಿಗೆ ಸುಂದರವಾದ ಜಲಪಾತಕ್ಕೆ ಬಂದಿದ್ದರು ಮತ್ತು ಸುತ್ತಮುತ್ತಲಿನ ರಮಣೀಯ ದೃಶ್ಯಗಳನ್ನು ವಿಡಿಯೋ ಮಾಡುತ್ತಿದ್ದಾಗ ಕಾಲು ಜಾರಿ ಕಮರಿಗೆ ಬಿದ್ದಿದ್ದಾರೆ ಎಂದು ಅವರು ಹೇಳಿದ್ದಾರೆ.

ಚೀನಾದ ಶಾಪಿಂಗ್ ಮಾಲ್‌ನಲ್ಲಿ ಭಾರೀ ಬೆಂಕಿ, 16 ಮಂದಿ ಸಜೀವ ದಹನ

ಬೀಜಿಂಗ್: ಚೀನಾದ ನೈಋತ್ಯ ನಗರವಾದ ಜಿಗಾಂಗ್‌ನಲ್ಲಿರುವ ಶಾಪಿಂಗ್ ಮಾಲ್‌ನಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡಿದ್ದು, 16 ಜನರು ಸಾವನ್ನಪ್ಪಿದ್ದಾರೆ. ಚೀನಾದ ಸರ್ಕಾರಿ ಮಾಧ್ಯಮಗಳ ಪ್ರಕಾರ, ಸಿಚುವಾನ್ ಪ್ರಾಂತ್ಯದ ಜಿಗಾಂಗ್ ನಗರದಲ್ಲಿ 14 ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಇದರಿಂದಾಗಿ ಹಲವರು ಕಟ್ಟಡದೊಳಗೆ ಸಿಲುಕಿಕೊಂಡಿದ್ದಾರೆ. ಬೆಂಕಿಯ ಬಗ್ಗೆ ಮಾಹಿತಿ ಬಂದ ತಕ್ಷಣ, 300 ತುರ್ತು ಸಿಬ್ಬಂದಿ ಮತ್ತು ಹತ್ತಾರು ಅಗ್ನಿಶಾಮಕ ವಾಹನಗಳನ್ನು ಸ್ಥಳಕ್ಕೆ ಕಳುಹಿಸಲಾಗಿದೆ. ತುರ್ತು ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿ ಸುಮಾರು 30 ಜನರನ್ನು ಕಟ್ಟಡದ ಬೆಂಕಿಯಿಂದ ರಕ್ಷಿಸಿದ್ದಾರೆ.



ಮಾರಿಷಸ್‌ನಲ್ಲಿ ಭಾರತದ ಮೊದಲ ಸಾಗರೋತ್ತರ ಜನೌಷಧಿ ಕೇಂದ್ರ ಉದ್ಘಾಟಿಸಿದ ಸಚಿವ ಜೈಶಂಕರ್



ಪೋರ್ಟ್ ಲೂಯಿಸ್: ಮಾರಿಷಸ್‌ನಲ್ಲಿ ಭಾರತದ ಮೊದಲ ಸಾಗರೋತ್ತರ ಜನೌಷಧಿ ಕೇಂದ್ರವನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಗುರುವಾರ ಉದ್ಘಾಟಿಸಿದರು. ಎರಡು ದಿನಗಳ ಮಾರಿಷಸ್ ಪ್ರವಾಸದಲ್ಲಿರುವ ಅವರು, ಮಾರಿಷಸ್ ಪ್ರಧಾನಿ ಪ್ರವಿಂದಕುಮಾರ್ ಜುಗ್ನಾಥ್ ಅವರೊಂದಿಗೆ ಜಂಟಿಯಾಗಿ ಜನೌಷಧಿ ಕೇಂದ್ರವನ್ನು ಉದ್ಘಾಟಿಸಿದರು. ಇದು ಉಭಯ ದೇಶಗಳ ನಡುವಿನ ನಿಕಟ ಸಹಕಾರಕ್ಕೆ (ವಿಶೇಷವಾಗಿ ಆರೋಗ್ಯದ ಕ್ಷೇತ್ರ) ಸಾಕ್ಷಿಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಸಮಾಜಘಾತುಕರೊಂದಿಗೆ ಸಂಪರ್ಕ ಸಂಶಯ: ಸಿಸಿಬಿ ಹೆಡ್ ಕಾನ್‌ಸ್ಟೇಬಲ್ ಅಮಾನತು

ಮೈಸೂರು, ಜು.18–ಕಳ್ಳರು ಸೇರಿದಂತೆ ಸಮಾಜಘಾತುಕ ಶಕ್ತಿಗಳೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂಬ ಸಂಶಯದ ಮೇರೆಗೆ ಮೈಸೂರಿನ ಸಿಸಿಬಿ ಹೆಡ್ ಕಾನ್ಸ್‌ಟೇಬಲ್ ಸಲೀಂ ಅವರನ್ನು ಅಮಾನತು ಮಾಡಿ ಮೈಸೂರು ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.



ಕಳೆದ ಸುಮಾರು ಒಂದೂವರೆ ವರ್ಷದಿಂದ ಸಿಸಿಬಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಡ್ ಕಾನ್‌ಸ್ಟೆಬಲ್ ಸಲೀಂ, ಕಳ್ಳರು ಹಾಗೂ ಕೆಲ ಸಮಾಜಘಾತುಕರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಾರೆ ಎಂಬ ಸಂಶಯವಿದೆ. ಇವರು ಕರ್ತವ್ಯದಲ್ಲಿ ಮುಂದುವರೆದರೆ ಪೊಲೀಸ್ ಇಲಾಖೆಯ ರಹಸ್ಯ ಮಾಹಿತಿಗಳು ಸೋರಿಕೆಯಾಗುವ ಸಾಧ್ಯವಿದೆ ಎಂಬ ಸಾರಾಂಶದೊಂದಿಗೆ ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಅವರು ನೀಡಿದ ವರದಿ ಹಾಗೂ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾನ್ಹವಿ ಅವರ ಶಿಫಾರಸ್ಸಿನೊಂದಿಗೆ ವಿಚಾರಣೆ ಕಾಯ್ದಿರಿಸಿ ಸಲೀಂ ಅವರನ್ನು ಅಮಾನತುಪಡಿಸಿ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.

ತಂತ್ರಜ್ಞಾನ ಅಳವಡಿಕೆಯಿಂದ ಮಾತ್ರವೇ ವಿಶ್ವ ಆರ್ಥಿಕತೆಯಲ್ಲಿ ಭಾರತದ ಪ್ರಗತಿ ಸಾಧ್ಯ

ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗಂಜನ್ ಕೃಷ್ಣ ಅಭಿಮತ

ಮೈಸೂರು,ಜು.18(ಬಿಎಲ್‌ಯು)– ಗರಿಷ್ಠ ಉತ್ಪಾದನೆ ಜೊತೆಗೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳದ ಹೊರತು ಭಾರತ ವಿಶ್ವದ ಆರ್ಥಿಕತೆಯಲ್ಲಿ ಈಗ ಇರುವ 5ರಿಂದ 3ನೇ ಸ್ಥಾನದ ಗುರಿ ಮುಟ್ಟಲು ಸಾಧ್ಯವಿಲ್ಲ ಎಂದು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗಂಜನ್ ಕೃಷ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಭಾರತೀಯ ಕೈಗಾರಿಕೆಗಳ ಒಕ್ಕೂಟ (ಸಿಐಐ) ಹಾಗೂ ಮೈಕ್ರೋ ಸ್ಮಾಲ್ ಅಂಡ್ ಮೀಡಿಯಂ ಎಂಟರ್ ಪ್ರೈಸಸ್ ಸಂಯುಕ್ತವಾಗಿ ಆಯೋಜಿಸಿದ್ದ ಇಂಟಿಗ್ರೇಟ್–24 ಖರೀದಿದಾರರು–ಮಾರಾಟಗಾರರ ಸಭೆ ಹಾಗೂ ಕೈಗಾರಿಕಾ ಪ್ರದರ್ಶನ ಮತ್ತು ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳದ ಹೊರತು ಜಾಗತಿಕ ಸ್ಪರ್ಧೆಯನ್ನು ಎದುರಿಸಲು ಭಾರತಕ್ಕೆ ಸಾಧ್ಯವಿಲ್ಲ ಎಂದರು.

ಭಾರತ ದೇಶದೊಳಗಿನ ಸ್ಪರ್ಧೆಗೆ ಮಾತ್ರ ಸೀಮಿತವಾಗದೆ ಜಾಗತಿಕವಾಗಿ ಸ್ಪರ್ಧೆ ಎದುರಿಸಬೇಕು. ಜಾಗತಿಕ ಕಂಪನಿಗಳ ಜೊತೆಗೆ ಪೈಪೋಟಿ ನೀಡಲು ಶಕ್ತಿಯುತವಾಗಿ ಬೆಳೆಯಬೇಕು. ಇದಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಭಾರತ ಮತ್ತಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಇದರಿಂದ ಭಾರತ ವಿಶ್ವದ ಆರ್ಥಿಕತೆಯಲ್ಲಿ ಈಗಿರುವ 5ನೇ ಸ್ಥಾನದಿಂದ 3ನೇ ಸ್ಥಾನಕ್ಕೇರಲು ಸಾಧ್ಯವಾಗುತ್ತದೆ ಎಂದರು.



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಗುರುವಾರ ಭಾರತೀಯ ಕೈಗಾರಿಕೆಗಳ ಒಕ್ಕೂಟ (ಸಿಐಐ) ಹಾಗೂ ಮೈಕ್ರೋ ಸ್ಮಾಲ್ ಅಂಡ್ ಮೀಡಿಯಂ ಎಂಟರ್ ಪ್ರೈಸಸ್ ಸಂಯುಕ್ತವಾಗಿ ಆಯೋಜಿಸಿದ್ದ ಇಂಟಿಗ್ರೇಟ್–24 ಖರೀದಿದಾರರು–ಮಾರಾಟಗಾರರ ಸಭೆ ಹಾಗೂ ಕೈಗಾರಿಕಾ ಪ್ರದರ್ಶನ ಮತ್ತು ಸಮ್ಮೇಳನದಲ್ಲಿ ಸಿಐಐ ಕರ್ನಾಟಕದ ಮಾಜಿ ಅಧ್ಯಕ್ಷ ಅರ್ಜುನ್ ರಂಗ ಮಾತನಾಡಿದರು.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ (ಎಂಎಸ್‌ಎಂಇ)ದಲ್ಲೂ ಭಾರತ ಪ್ರಗತಿ ಸಾಧಿಸಬೇಕು. ಎಂಎಸ್‌ಎಂಇಗೆ ಸೀಮಿತವಾಗಿ ಕಾರ್ಯ ನಿರ್ವಹಿಸದೆ, ಅಭಿವೃದ್ಧಿ ಪಥದಲ್ಲಿ ಒಂದೊಂದು ಹಂತವನ್ನು ಹತ್ತುತ್ತಾ ಹೋಗಬೇಕು. ಸೂಕ್ಷ್ಮ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳಾಗಿ ಮೇಲ್ದರ್ಜೆಗೇರಬೇಕು, ಸಣ್ಣ ಕೈಗಾರಿಕೆಗಳು ಮಧ್ಯಮ ಕೈಗಾರಿಕೆಗಳಾಗಿ ರೂಪುಗೊಳ್ಳಬೇಕು, ಮಧ್ಯಮ ಕೈಗಾರಿಕೆಗಳು ಬೃಹತ್ ಕೈಗಾರಿಕೆಗಳಾಗಿ ಉನ್ನತ ಸ್ಥಾನಕ್ಕೇರಬೇಕು. ಇದು ಭಾರತದ ಅಭಿವೃದ್ಧಿಗೆ ಬೆನ್ನೆಲುಬಾಗಲಿದೆ ಎಂದು ಹೇಳಿದರು.

ಹೀಗೆ ಉದ್ಯಮಗಳು ಹಲವು ಹಂತಗಳಲ್ಲಿ ಮೇಲ್ದರ್ಜೆಗೇರಿದಾಗ ಭಾರತದ ಕೈಗಾರಿಕಾ ವಲಯ ಪ್ರಗತಿ ಸಾಧಿಸುತ್ತದೆ. ಇದರಿಂದ ಆರ್ಥಿಕತೆಯಲ್ಲಿ ಭಾರತ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಗುಂಜನ್ ಕೃಷ್ಣ ಪುನರುಚ್ಚರಿಸಿದರು.

ಕರ್ನಾಟಕದಲ್ಲಿ ಇತ್ತೀಚೆಗೆ ಕೈಗಾರಿಕಾ ಪಾರ್ಕ್‌ಗಳು ಹೆಚ್ಚಾಗಿ ಸ್ಥಾಪನೆಯಾಗುತ್ತಿವೆ. ಕೈಗಾರಿಕಾ ಪಾರ್ಕ್ ಉತ್ತೇಜಿಸಲು ಹಾಗೂ ಅವುಗಳ ಅಭಿವೃದ್ಧಿಗೆ ಸರ್ಕಾರ ಹಲವು ಕ್ರಮ ಕೈಗೊಂಡಿದೆ. ಕೈಗಾರಿಕಾ ಪಾರ್ಕ್‌ನಲ್ಲಿ ಬರುವ ಆದಾಯದಲ್ಲಿ ಶೇಕಡ 70 ರಷ್ಟನ್ನು ಅಲ್ಲಿನ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ. ಉಳಿದ ಶೇಕಡ 30ರಷ್ಟು ಆದಾಯವನ್ನು ಆಯಾ ಕೈಗಾರಿಕಾ ಪಾರ್ಕ್ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ತೆರಿಗೆ ಕಡಿಮೆ ಮಾಡುವ ಬಗ್ಗೆ ಪ್ರತಿಕ್ರಿಯೆ ನೀಡಿದ ಗುಂಜನ್ ಕೃಷ್ಣ, ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯೊಂದಿಗಿನ ಕೆಲ ಕಾನೂನು ಪ್ರಕ್ರಿಯೆಗಳಿವೆ. ಇದನ್ನು ಪೂರ್ಣಗೊಳಿಸಿ ಈ ಬಗ್ಗೆ ಗಮನ ಹರಿಸಲಾಗುವುದು ಎಂದು ಭರವಸೆ ನೀಡಿದರು.

ಮೈಸೂರಿನ ಕೈಗಾರಿಕಾ ವಲಯದ ಅಭಿವೃದ್ಧಿಗೂ ಸರ್ಕಾರ ಒತ್ತು ನೀಡಿದೆ. ಈ ಹಿನ್ನೆಲೆ ಮೈಸೂರಿನಲ್ಲಿ ಎಲೆಕ್ಟ್ರಾನಿಕ್ ಉತ್ಪಾದನಾ ಕ್ಲಸ್ಟರ್ ಸ್ಥಾಪನೆ ಮಾಡಲಾಗಿದೆ ಎಂದು ಗಂಜನ್ ಕೃಷ್ಣ ತಿಳಿಸಿದರು.

ಈ ವೇಳೆ ಮಾತನಾಡಿದ ಸಿಐಐ ಕರ್ನಾಟಕದ ಮಾಜಿ ಅಧ್ಯಕ್ಷ ಅರ್ಜುನ್ ರಂಗ, ನಮ್ಮ ಸಂಸ್ಥೆಯು ಎಂಎಸ್‌ಎಂಇಗೆ ಹೆಚ್ಚಿನ ಉತ್ತೇಜನ ನೀಡುತ್ತಿದ್ದು, ಸಾವಿರಾರು ಜನರಿಗೆ ಉದ್ಯೋಗ ನೀಡಿದೆ ಎಂದರು.

ಸಿಐಐ ಕರ್ನಾಟಕದ ಎಂಎಸ್‌ಎಂಇ ಘಟಕದ ಸಂಚಾಲಕ ಸ್ಯಾಮ್ ಚೆರ್ರಿಯನ್, ಸಿಐಐ ಕರ್ನಾಟಕ ರಾಜ್ಯ ಕೌನ್ಸಿಲ್‌ನ ಅಧ್ಯಕ್ಷ ಎನ್.ವೇಣು, ಸಿಐಐ ರಾಷ್ಟ್ರೀಯ ಎಂಎಸ್‌ಎಂಇ ಕೌನ್ಸಿಲ್ ಸಹ ಅಧ್ಯಕ್ಷ ಎಂ.ಪೊನ್ನುಸ್ವಾಮಿ, ಸಿಐಐ ಕರ್ನಾಟಕದ ನಿರ್ದೇಶಕಿ ರಾಧಿಕಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಕೃಷ್ಣ ಗಾನಸಭಾ ವತಿಯಿಂದ ಶ್ರೀ ಜಯಚಾಮರಾಜ ಒಡೆಯರ್ ಜಯಂತಿ ಆಚರಣೆ



ಶ್ರೀ ಕೃಷ್ಣ ಗಾನಸಭಾ ವತಿಯಿಂದ ಶ್ರೀ ಜಯಚಾಮರಾಜ ಒಡೆಯರ್ ಅವರ 105ನೇ ಜಯಂತಿ ಆಚರಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ಮತ್ತಿತರರಿದ್ದರು.

ಮೈಸೂರು, ಜು.18(ಎಂಕೆ)– ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಆಳ್ವಾರ್ ಕಲಾ ಭವನದಲ್ಲಿ ಶ್ರೀ ಕೃಷ್ಣ ಗಾನಸಭಾ ವತಿಯಿಂದ ಶ್ರೀ ಜಯಚಾಮರಾಜ ಒಡೆಯರ್ ಅವರ 105ನೇ ಜಯಂತಿ ಆಚರಿಸಲಾಯಿತು.

ಶ್ರೀ ಜಯಚಾಮರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಸಂಗೀತ, ಸಾಹಿತ್ಯ, ಕಲೆ–ಸಂಸ್ಕೃತಿಗೆ ಮಹತ್ತರ ಕೊಡುಗೆ ನೀಡಿರುವ ಜಯಚಾಮರಾಜ ಒಡೆಯರ್ ಅವರು ಸದಾ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಅವಕಾಶ ಮಾಡಿಕೊಟ್ಟು ಪ್ರಜೆಗಳಿಗೆ ಸಂಪೂರ್ಣ ಆಡಳಿತದ ಜವಾಬ್ದಾರಿ ಒಪ್ಪಿಸಿದವರು ಎಂದು ಸ್ಮರಿಸಿದರು.

ದೇಶಿಯ ಮತ್ತು ವಿದೇಶಿಯ ಸಂಸ್ಕೃತಿಯ ಅನುಭವ ಪಡೆದಿದ್ದ ಅವರು, ಸ್ವತಃ ಸಂಗೀತಗಾರರು ಆಗಿದ್ದರು. ಸುಭದ್ರವಾದ ಆಡಳಿತ ಪರಂಪರೆಯನ್ನು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ವಿಸ್ತರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಎಲ್ಲರಿಗೂ ಶಿಕ್ಷಣ ದೊರೆಯಬೇಕೆನ್ನುವ ನಿಟ್ಟಿನಲ್ಲಿ ಗ್ರಂಥಾಲಯ ಸ್ಥಾಪಿಸಿದವರು. ಅವರ ಕಾಲದಲ್ಲಿ 350 ಮಹತ್ತರ ಕೃತಿಗಳು ಹೊರಬಂದವು. ವೇದ–ಪುರಾಣಗಳಲ್ಲದೆ ಋಗ್ವೇದದ 35 ಸಂಪುಟಗಳನ್ನು ಮುದ್ರಿಸುವ ಮೂಲಕ ಕಡಿಮೆ ಬೆಲೆಗೆ ಸಾರ್ವಜನಿಕರಿಗೆ ಸಿಗುವಂತೆ ಮಾಡಿದ್ದರು ಎಂದು ನೆನೆದರು.

ಪ್ರಜಾಪ್ರಭುತ್ವ ಆಳ್ವಿಕೆ ಜಾರಿಗೆ ಬರುವ ಮುನ್ನವೇ ತಮ್ಮ ಆಡಳಿತವನ್ನು ಪ್ರಜೆಗಳಿಗೆ ಒಪ್ಪಿಸಿದ್ದ ಜಯಚಾಮರಾಜ ಒಡೆಯರ್ ಅವರನ್ನು ರಾಜ್ಯ ಸರ್ಕಾರವೇ 1960ರವರೆಗೆ ರಾಜ ಪ್ರಭುವಾಗಿ ಗುರ್ತಿಸಿ ಗೌರವ ಸಲ್ಲಿಸಿತ್ತು. ನೂರಾರು ಸಂಗೀತ ವಿದ್ವಾಂಸರಿಗೆ ಆಶ್ರಯ ನೀಡಿ ಪ್ರೋತ್ಸಾಹಿಸುವ ಮೂಲಕ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅರ್ಥಪೂರ್ಣ ಕೆಲಸ ಮಾಡಿದವರು. ಆದ್ದರಿಂದಾಗಿ ಅವರನ್ನು ರಾಜ್ಯದ ಜನತೆ ಎಂದಿಗೂ ಮರೆಯುವುದಿಲ್ಲ. ಮಹಾರಾಜರಿಗೆ ಕೈ ಮುಗಿಯುವುದೇ ದೇವರ ದರ್ಶನ ಎನ್ನುವ ಮನೋಭಾವ ಪ್ರಜೆಗಳಲ್ಲಿತ್ತು ಎಂದರೆ ಅವರಲ್ಲಿ ಪ್ರಜಾ ಸೇವೆ, ಪ್ರಜಾ ಕಳಕಳಿ, ಪ್ರಜೆಗಳಿಗೆ ಎಷ್ಟು ಗೌರವ ಸ್ಥಾನ ನೀಡಿದ್ದರು ಎಂಬುದು ಅರಿವಾಗುತ್ತದೆ ಎಂದರು. ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ಉಪಸ್ಥಿತರಿದ್ದರು.

ಸಂಗೀತ ಕಾರ್ಯಕ್ರಮ: ಬಳಿಕ ವಿದುಷಿ ಅದಿತಿ ಪ್ರಹ್ಲಾದ್ ಅವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಿತು. ಮೃದಂಗ ವಾದನದಲ್ಲಿ ವಿದ್ವಾನ್ ನಂದನ್ ಕಶ್ಯಪ್, ಪಿಟೀಲು ವಾದನದಲ್ಲಿ ವಿದ್ವಾನ್ ಕೇಶವ ಎಂ.ಕುಮಾರ್, ಘಟಂನಲ್ಲಿ ವಿದ್ವಾನ್ ಎಂ.ಜೆ.ಕಿರಣ್‌ಕುಮಾರ್ ಉತ್ತಮ ಸಹಕಾರ ನೀಡಿದರು.

ಜಯಚಾಮರಾಜ ಒಡೆಯರ್ ಕೃತಿಗಳನ್ನಾಧರಿಸಿದ ಕರ್ನಾಟಕ ಶಾಸ್ತ್ರೀಯ ಗಾಯನ

ಮಂತ್ರಮುಗ್ಧರಾದ ಶ್ರೋತೃ ವರ್ಗ



ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಗುರುವಾರ ವಿದ್ವಾನ್ ಎಸ್.ಆರ್.ವಿನಯ್ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿಕೊಟ್ಟರು.

ಮೈಸೂರು,ಜು.18(ಪಿಎಂ)– ಶ್ರೀ ಜಯಚಾಮರಾಜ ಒಡೆಯರ್ ಅವರ ಕೃತಿಗಳನ್ನಾಧರಿಸಿದ ಕರ್ನಾಟಕ ಶಾಸ್ತ್ರೀಯ ಗಾಯನವನ್ನು ಸುಶ್ರಾವ್ಯವಾಗಿ ಸಾದರಪಡಿಸಿದ ವಿದ್ವಾನ್ ಎಸ್.ಆರ್.ವಿನಯ್, ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿದರು.

ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಶ್ರುತಿಮಂಜರಿ ಪ್ರತಿಷ್ಠಾನ ಮತ್ತು ರೋಟರಿ ಪಶ್ಚಿಮ ಮೈಸೂರು ಜಂಟಿ ಆಶ್ರಯದಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಜಯಂತಿ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ಅವರ ಸಂಸ್ಮರಣಾ ದಿನಾಚರಣೆಯಲ್ಲಿ ಸಂಗೀತ ಕಛೇರಿ ನಡೆಸಿಕೊಡುವ ಮೂಲಕ ಅಮರ ಸಂಗೀತದ ರಸಧಾರೆ ಹರಿಸಿದರು.

ಜಯಚಾಮರಾಜ ಒಡೆಯರ್ ಅವರ 7 ಕೃತಿಗಳ ಕರ್ನಾಟಕ ಶಾಸ್ತ್ರೀಯ ಗಾಯನದ ಮೂಲಕ ಸಭಿಕರು ಸುನಾದದಲ್ಲಿ ತೇಲುವಂತೆ ಮಾಡಿದರು. ಜಯಚಾಮರಾಜ ಒಡೆಯರ್ ಸಂಸ್ಕೃತದಲ್ಲಿ ರಚಿಸಿರುವ 'ಶ್ರೀ ಮಹಾಗಣಪತಿಂ ಭಜೇಹಂ ಶಿವಾತ್ಮಜಂ ಸನ್ಮುಖ ಅಗ್ರಜಮ್' ಗಾಯನ ಪ್ರಸ್ತುತದೊಂದಿಗೆ ತಮ್ಮ ಸಂಗೀತ ಕಛೇರಿ ಆರಂಭಿಸಿದ ಎಸ್.ಆರ್.ವಿನಯ್, ಕಾರ್ಯಕ್ರಮದ ಕೊನೆಯವರೆಗೂ ಸಭಿಕರ ಮನರಂಜಿಸುವಲ್ಲಿ ಯಶಸ್ವಿಯಾದರು.

ಪಕ್ಕವಾದ್ಯದಲ್ಲಿ ಇವರಿಗೆ ವಿದುಷಿ ಸಿ.ವಿ.ಶ್ರುತಿ (ಪಿಟೀಲು), ವಿದ್ವಾನ್ ಸುನಾದ ಕೃಷ್ಣ (ಮೃದಂಗ) ಹಾಗೂ ಷಣ್ಮುಖ (ತಂಬೂರಿ) ಸಹಕಾರ ನೀಡಿದರು. ಇದಕ್ಕೂ ಮುನ್ನ ಜಯಚಾಮರಾಜ ಒಡೆಯರ್ ಅವರ ಫೋಟೋಗೆ ರೋಟರಿ ಪಶ್ಚಿಮದ ಅಧ್ಯಕ್ಷ ಎಂ.ಎಲ್.ನಾಗೇಶ್ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಶ್ರುತಿಮಂಜರಿ ಪ್ರತಿಷ್ಠಾನದ ಟ್ರಸ್ಟಿ ಎಂ.ಕೆ.ಸೀತಾರಾಮ್, ಗಾಯಕಿ ಚೈತ್ರಿಕಾ ಮತ್ತಿತರರು ಹಾಜರಿದ್ದರು.

ಸಣ್ಣಪುಟ್ಟ ಅಪರಾಧಕ್ಕೆ ಜೈಲು ಸೇರಬೇಕಾದವರಿಗೆ ಇನ್ನು ಮುಂದೆ ಸಮುದಾಯ ಸೇವೆಯೇ ಶಿಕ್ಷೆ!

- ಹೊಸ ಕಾನೂನುಗಳ ಬಗ್ಗೆ ಕಾನೂನು ಅಧ್ಯಾಪಕಿ ಡಾ.ಎ.ಆರ್.ಪ್ರಕೃತಿ ವಿಶ್ಲೇಷಣೆ
- ಹೊಸ ಕ್ರಿಮಿನಲ್ ಕಾನೂನಲ್ಲಿ ಆರು ಅಪರಾಧಗಳಲ್ಲಿ ಶಿಕ್ಷೆಗೆ ಬದಲು ಸೇವಾವಕಾಶ

ಮೈಸೂರು, ಜು.18(ಎಂಕೆ)– 'ಸಮುದಾಯ ಸೇವೆ' ಎಂಬ ಹೊಸ ಪರಿಕಲ್ಪನೆ ಅಳವಡಿಕೆ ಮೂಲಕ ಸಮಾಜದಲ್ಲಿ ಸುಧಾರಣೆ, ಕಾನೂನಿನ ಮೇಲೆ ಭಯ ಮತ್ತು ಗೌರವ ಮೂಡಿಸುವ ನಿಟ್ಟಿನಲ್ಲಿ ಹೊಸ ಕ್ರಿಮಿನಲ್ ಕಾನೂನುಗಳಲ್ಲಿ ಕೆಲ ಬದಲಾವಣೆಗಳನ್ನು ಮಾಡಲಾಗಿದೆ ಎಂದು ವಕೀಲೆ ಹಾಗೂ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಎ.ಆರ್.ಪ್ರಕೃತಿ ತಿಳಿಸಿದರು.

ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್‌ನ ಶ್ಯಾಗಲ್ ಹೌಸ್‌ನಲ್ಲಿ ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ (ಪಿಯುಸಿಎಲ್)ದ ವತಿಯಿಂದ ಆಯೋಜಿಸಿದ್ದ 'ಹೊಸ ಅಪರಾಧಿಕ ಕಾನೂನುಗಳ ನೋಟ–2024' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಹೊಸ ಕ್ರಿಮಿನಲ್ ಕಾನೂನುಗಳಲ್ಲಿ ಪ್ರಮುಖ 6 ಅಪರಾಧಗಳಿಗೆ ಶಿಕ್ಷೆ ವಿಧಿಸುವ ಬದಲು ಸಮುದಾಯ ಸೇವೆ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಆರೋಪಿ ಹಾಗೂ ಸಮಾಜದಲ್ಲಿ ಸುಧಾರಣೆ ತರುವ ಉದ್ದೇಶ ಸಮುದಾಯ ಸೇವೆ ಎಂಬ ಹೊಸ ಪರಿಕಲ್ಪನೆಯನ್ನು ಅಳವಡಿಸಲಾಗಿದೆ ಎಂದರು.

ಜೈಲಿಗೆ ಕಳುಹಿಸುವ ಬದಲು ಸಮುದಾಯ ಸೇವೆಯನ್ನೇ ಶಿಕ್ಷೆಯ ರೂಪದಲ್ಲಿ ನೀಡುವುದಾಗಿದೆ. ಉದಾಹರಣೆಗೆ ಸಂಚಾರ ನಿಯಮ ಉಲ್ಲಂಘನೆ ಮಾಡಿದ ವ್ಯಕ್ತಿಯೊರ್ವ, ಎಲ್ಲೆಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿರುತ್ತಾನೋ ಅಷ್ಟೂ ದೂರದ ರಸ್ತೆಯನ್ನು ಆತ ನಿಂದಲೇ ಸ್ವಚ್ಛಗೊಳಿಸುವುದಾಗಿದೆ. ಈ ರೀತಿಯ 'ಸಮುದಾಯ ಸೇವೆ' ಮಾಡಿಸುವ ಮೂಲಕ ಖರ್ಚಿಲ್ಲದೆಯೇ ಸಮಾಜದಲ್ಲಿ ಸುಧಾರಣೆ ಜೊತೆಗೆ ಕಾನೂನು ಅರಿವು ಮೂಡಿಸಲು ಸಹಕಾರಿಯಾಗಲಿದೆ.



'ಹೊಸ ಅಪರಾಧಿಕ ಕಾನೂನುಗಳ ನೋಟ–2024' ಕುರಿತು ವಕೀಲೆ ಹಾಗೂ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಎ.ಆರ್.ಪ್ರಕೃತಿ ವಿಶೇಷ ಉಪನ್ಯಾಸ ನೀಡಿದರು. ಪಿಯುಸಿಎಲ್ ಜಿಲ್ಲಾಧ್ಯಕ್ಷ ಪ್ರೊ.ಕೆ.ಕಾಳಚನ್ನೇಗೌಡ, ಪ್ರಗತಿಪರ ಚಿಂತಕ ನಾ.ದಿವಾಕರ್, ಪುರುಷೋತ್ತಮ್ ಉಪಸ್ಥಿತರಿದ್ದರು

> **ಸೆರೆವಾಸ ಮತ್ತು ದಂಡದ ಮೊತ್ತ ಹೆಚ್ಚಳ...**
>
> ಅಪರಾಧಗಳ ನಿಯಂತ್ರಣ ಮತ್ತು ಅಪರಾಧಿಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹೊಸ ಕ್ರಿಮಿನಲ್ ಕಾನೂನುಗಳಲ್ಲಿನ ಪ್ರಮುಖ 41 ಸೆಕ್ಷನ್‌ಗಳಲ್ಲಿನ ಸೆರೆವಾಸದ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಲೈಂಗಿಕ ಅಪರಾಧಗಳಿಗೆ ಸಂಬಂಧಪಟ್ಟಂತೆ, ಮಕ್ಕಳ ಮೇಲಿನ ಅತ್ಯಾಚಾರಕ್ಕೆ ಸಂಬಂಧಪಟ್ಟಂತೆ ಮರಣದಂಡನೆಯವರೆಗೂ ಶಿಕ್ಷೆಯನ್ನು ವಿಧಿಸುವ ಸಾಧ್ಯತೆ ಇರಲಿದೆ. ಸಮಾಜದಲ್ಲಿ ಅಪರಾಧಗಳ ಪ್ರಮಾಣ ಕಡಿಮೆಯಾಗದಿರುವುದಕ್ಕೆ ಶಿಕ್ಷೆಯ ಪ್ರಮಾಣವೂ ಕಾರಣವಾಗಿರುವ ಹಿನ್ನಲೆಯಲ್ಲಿ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಇದರ ಮುಖ್ಯ ಉದ್ದೇಶ ಕಾನೂನಿನ ಮೇಲೆ ಭಯ ಉಂಟುಮಾಡುವ ಜೊತೆಗೆ ಅಪರಾಧಿಯ ಮನೋಭಾವನೆಯಲ್ಲೂ ಸುಧಾರಣೆ ತರುವುದಾಗಿದೆ. ಹಾಗೆಯೇ ದಂಡದ ಮೊತ್ತವನ್ನು ಹೆಚ್ಚಿಸಲಾಗಿದ್ದು, ಆರ್ಥಿಕ ವಂಚನೆ ಪ್ರಕಣಗಳಲ್ಲಿ ಕೋಟಿಗಟ್ಟಲೆ ದಂಡ ವಿಧಿಸುವ ಸಾಧ್ಯತೆ ಇರಲಿದೆ.
>
> - ಡಾ.ಎ.ಆರ್.ಪ್ರಕೃತಿ, ವಕೀಲೆ ಹಾಗೂ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ

ಸಣ್ಣ–ಪುಟ್ಟ ಅಪರಾಧ ಮಾಡಿದವರನ್ನೆಲ್ಲಾ ಜೈಲಿಗೆ ಹಾಕಿದರೆ ಆಗುವ ಪ್ರಯೋಜನವಾದರೂ ಏನು. ಅದರ ಬದಲು 'ಸಮುದಾಯ ಸೇವೆ'ಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದರೆ ಸಮಾಜಕ್ಕೆ ಸೇವೆ ಮಾಡಿದಂತಾಗಿದೆ. ಆದ್ದರಿಂದ 'ಸಮುದಾಯ ಸೇವೆ' ಪರಿಕಲ್ಪನೆಯನ್ನು ಭಾರತೀಯ ನ್ಯಾಯ ಸಂಹಿತಾ(BNS)ದಲ್ಲಿ ಸೇರಿಸಲಾಗಿದೆ. 'ಘೋಷಣೆಗೆ ಪ್ರತಿಕ್ರಿಯೆಯಾಗಿ ಕಾಣಿಸಿಕೊಳ್ಳದಿರುವುದು', 'ಆತ್ಮಹತ್ಯೆಗೆ ಪ್ರಯತ್ನಿಸುವುದು', ಕುಡಿದ ವ್ಯಕ್ತಿಯಿಂದ ಸಾರ್ವಜನಿಕವಾಗಿ ದುರ್ನಡತೆ, ಮಾನಹಾನಿ ಹಾಗೂ ಸಾರ್ವಜನಿಕ ಸೇವಕನ ಕಾನೂನು ಬದ್ಧ ಅಧಿಕಾರವನ್ನು ಬಲವಂತಪಡಿಸಲು ಅಥವಾ ನಿರ್ಬಂಧಿಸಲು ಯತ್ನಿಸುವ ಪ್ರಕರಣಗಳಲ್ಲಿ ಭಾಗಿಯಾದವರಿಗೆ ಶಿಕ್ಷೆ ಬದಲು 'ಸಮುದಾಯ ಸೇವೆ'ಗೆ ನಿಯೋಜಿಸುವ ಹೊಸ ಪರಿಕಲ್ಪನೆಯನ್ನು ಪರಿಚಯಿಸಿದ್ದರೂ ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತರಬೇಕು ಎಂಬುದನ್ನು ಮುಂದಿನ ದಿನಗಳಲ್ಲಿ ಅಧಿಸೂಚನೆ ಹೊರಡಿಸಬೇಕಿದೆ ಎಂದು ಹೇಳಿದರು.

ಹಾಗೆಯೇ ಐಪಿಸಿ ಸೆಕ್ಷನ್ 301ರಡಿ ದಾಖಲಾಗುತ್ತಿದ್ದ ಕೊಲೆ ಪ್ರಕರಣವನ್ನು ಬಿಎನ್‌ಎಸ್ ನಲ್ಲಿ ಸೆಕ್ಷನ್ 101ರಡಿ ದಾಖಲಿಸಲಾಗುತ್ತದೆ. ವಂಚನೆ ಪ್ರಕರಣದಲ್ಲಿ ಐಪಿಸಿ ಸೆಕ್ಷನ್ 415 ರಿಂದ 420ರವರೆಗಿನ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗುತ್ತಿತ್ತು. ಈಗ 316ನೇ ಕಲಂನಡಿ ಪ್ರಕರಣ ದಾಖಲಿಸಲಾಗುತ್ತದೆ. ಹಾಗೆಯೇ ಕಾನೂನು ಬಾಹಿರವಾಗಿ ಅಕ್ರಮ ಕೂಟಗಳು ನಡೆದಲ್ಲಿ 187ನೇ ಕಲಂನಡಿ ಪ್ರಕರಣ ದಾಖಲಾಗುತ್ತದೆ. ಹಾಗೆಯೇ ಮಾನಹಾನಿಗೆ ಸಂಬಂಧಪಟ್ಟಂತೆ 354ನೇ ಕಲಂ, ಗ್ಯಾಂಗ್ ರೇಪ್‌ಗೆ ಸಂಬಂಧಪಟ್ಟಂತೆ ಸೆಕ್ಷನ್ 63, 64 ಮತ್ತು 70ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತದೆ ಎಂದು ತಿಳಿಸಿದರು.

ಸಮಯ ನಿಗಧಿ: ಅಪರಾಧ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲು ಈ ಮೊದಲು ನಿಗಧಿತ ಸಮಯ ಎಂಬುದಿರಲಿಲ್ಲ. ಆದ್ದರಿಂದ 35 ಸೆಕ್ಷನ್‌ಗಳಿಗೆ ಶಿಕ್ಷೆ ವಿಧಿಸಲು ಸಮಯ ನಿಗಧಿ ಮಾಡಲಾಗಿದೆ. ವೈದ್ಯಕೀಯ ಪರೀಕ್ಷೆಯ ರಿಪೋರ್ಟ್ ಅನ್ನು 7 ದಿನಗಳೊಳಗೆ ಕೊಡಬೇಕು. ಆ ರಿಪೋರ್ಟ್‌ಗೆ ಸಂಬಂಧಿಸಿದಂತೆ ತನಿಖೆ ಮುಂದಿ ರುವುದು, ನಂತರ ಶಿಕ್ಷೆ ಪ್ರಕಟಿಸುವುದಕ್ಕೆ ಸಮಯ ನಿಗಧಿ ಮಾಡಲಾಗಿದೆ. ಇದರಿಂದ ನ್ಯಾಯ ಬೇಗ ಸಿಗಲಿದೆ ಎಂಬ ಮನೋಭಾವನೆ ಮೂಡಲಿದೆ ಹಾಗೆಯೇ ಭಾರತೀಯ ಸಾಕ್ಷಿ ಅಧಿನಿಯಮ್ (BSA)'ನಲ್ಲಿ 170 ಸೆಕ್ಷನ್‌ಗಳಿದ್ದು, ಮೊದಲು ಅಪರಾಧಿ ಸಿಕ್ಕ ಬಳಿಕ ಮುಂದಿನ ತನಿಖೆ ನಡೆಸಬೇಕಾಗಿತ್ತು. ಆದರೆ ಹೊಸ ಬಿಎಸ್‌ಎ ಕಾನೂನಿನ ಪ್ರಕಾರ ಆರೋಪಿ ಪರಾರಿಯಾಗಿದ್ದರೂ ತನಿಖೆ ನಡೆಯುತ್ತಿರಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ ಎಂದು ವಿವರಿಸಿದರು.

ಪ್ರತ್ಯೇಕ ಚಾಪ್ಟರ್: ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ಅಪರಾಧ ಕೃತ್ಯಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಚಾಪ್ಟರ್ ಮಾಡಲಾಗಿದೆ. ಮಾನವ ಕಳ್ಳಸಾಗಣಿಕೆ, ವರದಕ್ಷಿಣೆ ಕಿರುಕುಳ ನೀಡಿ ಕೊಲೆ ಮಾಡುವುದು, ಬಾಲ ಕಾರ್ಮಿಕರನ್ನು ಬಳಸಿಕೊಂಡರೆ, 18 ವರ್ಷದೊಳಗಿನ ಮಕ್ಕಳನ್ನು ಪುಸಲಾಯಿಸಿಕೊಂಡು ವೇಶ್ಯಾವಾಟಿಕೆಗೆ ತೊಡಗಿಸಿದರೆ 14 ವರ್ಷಗಳು ಸೆರೆವಾಸ ಶಿಕ್ಷೆ ನೀಡುವ ಸಾಧ್ಯತೆ ಇರಲಿದೆ. ಇಲ್ಲಿ ಹೆಣ್ಣು ಮಕ್ಕಳು ಎನ್ನುವ ಬದಲು ಲಿಂಗ ಸಮಾನತೆ ಆಧಾರದ ಮೇಲೆ ಮಕ್ಕಳು ಎಂದು ಪದ ಬಳಕೆ ಮಾಡಲಾಗಿದೆ ಎಂದು ತಿಳಿಸಿದರು. ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ(ಪಿಯುಸಿಎಲ್)ದ ಜಿಲ್ಲಾಧ್ಯಕ್ಷ ಪ್ರೊ.ಕೆ.ಕಾಳಚನ್ನೇಗೌಡ, ಪ್ರಗತಿಪರ ಚಿಂತಕ ನಾ.ದಿವಾಕರ್, ಪುರುಷೋತ್ತಮ್ ಮತ್ತಿತರಿದ್ದರು.

ಕೊಡಗಲ್ಲಿ ಮುಂದುವರೆದ ವರುಣನ ಆರ್ಭಟ

● ಬೋರ್ಗರೆಯುತ್ತಿರುವ ಜಲಪಾತಗಳು ● ಜನಜೀವನ ಅಸ್ತವ್ಯಸ್ತ



ಜಲಾವೃತ್ತಗೊಂಡ ರಸ್ತೆಯಲ್ಲಿ ವಾಹನಗಳು ಸಂಚರಿಸಲು ಹರಸಾಹಸ ಪಡುತ್ತಿರುವುದು.

ಮಡಿಕೇರಿ, ಜು.18–ಕೊಡಗು ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಭಾಗಮಂಡಲ ತ್ರಿವೇಣಿ ಸಂಗಮ ತುಂಬಿ ಹರಿಯುತ್ತಿದೆ. ಜಿಲ್ಲೆಯ ಅಬ್ಬಿ, ಇರ್ಪು, ಮಲ್ಲಳ್ಳಿ, ಚೇಲಾವರ ಸೇರಿದಂತೆ ಹಲವು ಜಲಪಾತಗಳು ಬೋರ್ಗರೆಯುತ್ತಿವೆ. ನದಿ, ತೊರೆ, ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿದ್ದು, ಗುರುವಾರ ಕಾವೇರಿ ನದಿ ಪಾತ್ರದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ.

ವ್ಯಾಪಕ ಮಳೆಗೆ ಜಿಲ್ಲೆಯ ವಿವಿಧೆಡೆ ಬರೆ ಕುಸಿತ, ಮನೆಗಳಿಗೆ ಹಾನಿ ಉಂಟಾಗಿದ್ದು, ರಸ್ತೆಯ ಅಲ್ಲಲ್ಲಿ ನೀರು ನಿಂತು ಓಡಾಟಕ್ಕೆ ಅಡೆತಡೆ ಉಂಟಾಗಿದೆ. ಮನೆಗಳಿಗೆ ಹಾನಿಯಾದ ಕೆಲ ಕುಟುಂಬಗಳನ್ನು ಸ್ಥಳಾಂತರಿಸಲಾಗಿದ್ದು, ಪಡಿತರ ವಿತರಣೆ ಕಾರ್ಯ ನಡೆದಿದೆ.

ಕಾವೇರಿ ನದಿ ಪಾತ್ರದಲ್ಲಿ ನೀರಿನ ಪ್ರಮಾಣ

ಇಂದು ಶಾಲೆಗಳಿಗೆ ರಜೆ

ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲಾ ಮತ್ತು ಪದವಿ ಪೂರ್ವ ಕಾಲೇಜಿಗೆ ಶುಕ್ರವಾರ (ಜು.19) ರಜೆ ಘೋಷಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಹೆಚ್ಚಾಗಿರುವುದರಿಂದ ಕರಡಿಗೋಡು, ಸಿದ್ದಾಪುರ, ನೆಲ್ಯಹುದಿಕೇರಿ ಮತ್ತಿತರ ನದಿ ಭಾಗದಲ್ಲಿ ವಾಸಿಸುವ ಕುಟುಂಬಗಳ ಸ್ಥಳಾಂತರಕ್ಕೆ ಜಿಲ್ಲಾಡಳಿತ ಕ್ರಮವಹಿಸಿದೆ. ಆಯಾಯ ತಾಲೂಕಿನ ತಹಸೀಲ್ದಾರ್‌ಗಳು ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ.

ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿಗೆ ತೆರಳುವ ರಸ್ತೆ ಕುಸಿಯುವ ಆತಂಕದ ಹಿನ್ನೆಲೆಯಲ್ಲಿ ಬಂದ್ ಮಾಡಲಾಗಿದೆ. ತಾಲೂಕಿನ ಕಗ್ಗೋಡ್ಲು ಬಳಿಯ ತೊರೆ ಉಕ್ಕಿ ಪಕ್ಕದ ಅಂಗಡಿ ಸಹಿತ ಮನೆಗೆ ನೀರು ನುಗ್ಗಿ ಹಾನಿಯಾಗಿದೆ. ತಲಕಾವೇರಿ ಮತ್ತು ಭಾಗಮಂಡಲ ವ್ಯಾಪ್ತಿ ಭಾರೀ ಮಳೆಯಿಂದ ಭಗಂಡೇಶ್ವರ ದೇವಾಲಯದ ಆವರಣಕ್ಕೆ ನೀರು ನುಗ್ಗಿ, ದೇವಾಲಯದ ಎರಡು ಮೆಟ್ಟಿಲುಗಳವರೆಗೆ ಪ್ರವಾಹ ಆವರಿಸಿದೆ. ಇನ್ನು ತ್ರಿವೇಣಿ ಸಂಗಮ ಮುಳುಗಡೆಯಾಗಿ ಮಡಿಕೇರಿ–ಭಾಗಮಂಡಲ, ಭಾಗಮಂಡಲ–ಅಯ್ಯಂಗೇರಿ ರಸ್ತೆ ಸಂಪರ್ಕ ಕಡಿತವಾಗಿದೆ. ಸಿದ್ದಾಪುರ ಸಮೀಪದ ನೆಲ್ಯಹುದಿಕೇರಿ, ಕಕ್ಕಟಕಾಡು ವ್ಯಾಪ್ತಿಯಲ್ಲಿ ಕಾವೇರಿ ನದಿ ಪ್ರವಾಹ ಆವರಿಸಿ 9 ಮನೆಗಳಿಗೆ ನೀರು ನುಗ್ಗಿದೆ. ನಾಪೋಕ್ಲು–ಚೆರಿಯಪರಂಬು–ಬೊಳಿಬಾಣೆ ರಸ್ತೆ ಸಂಪರ್ಕ ಕಳೆದ 2 ದಿನಗಳಿಂದ ಸಂಪೂರ್ಣವಾಗಿ ಬಂದ್ ಆಗಿದ್ದು, ಅಲ್ಲಿನ ನಿವಾಸಿಗಳು ಪರ್ಯಾಯ ಮಾರ್ಗದ ಮೂಲಕ ಸಂಚರಿಸುತ್ತಿದ್ದಾರೆ.

ವಿರಾಜಪೇಟೆಯಿಂದ ಗೋಣಿಕೊಪ್ಪ ಕಡೆಗೆ ತೆರಳುವ ರಸ್ತೆಯ ರಾಜಕಾಲುವೆ ತುಂಬಿ ಹರಿದ ಪರಿಣಾಮ ಕೆಲ ಅಂಗಡಿಗಳಿಗೆ ನೀರು ನುಗ್ಗಿದೆ. ವಾಹನಗಳು ಕೂಡ ನೀರಿನಲ್ಲಿ ಸಂಚರಿಸಲು ಹರಸಾಹಸ ಪಡಬೇಕಾಗಿದೆ. ವಿರಾಜಪೇಟೆಯ ಮತದ ರಸ್ತೆ ಹಾಗೂ ಕದನೂರು ಬಳಿಯ ಕಾವೇರಿ ನದಿ ನೀರು ತಗ್ಗು ಪ್ರದೇಶಗಳಿಗೆ ಹರಿದು ಸಂಚಾರಕ್ಕೆ ತೊಡಕುಂಟಾಗಿದೆ.

ದಕ್ಷಿಣ ಕೊಡಗಿನ ಕುಟ್ಟ, ಹರಿಹರ, ಇರ್ಪು ಗ್ರಾಮಗಳಲ್ಲಿ ಧಾರಾಕಾರ ಮಳೆ ಸುರಿದ ಪರಿಣಾಮ ಲಕ್ಷ್ಮಣ ತೀರ್ಥ ನದಿಯಲ್ಲೂ ಪ್ರವಾಹ ಏರ್ಪಟ್ಟಿದೆ. ನಿಟ್ಟೂರು ಗ್ರಾಮದಲ್ಲಿ ರಸ್ತೆಯ ಎರಡೂ ಭಾಗದ ಭತ್ತದ ಗದ್ದೆಗಳು ಜಲಾವೃತವಾಗಿವೆ. ಮಳೆ ಮುಂದುವರೆದಲ್ಲಿ ಬಾಳೆಲೆ ನಿಟ್ಟೂರು ರಸ್ತೆ ಸಂಪರ್ಕವೂ ಕಡಿತಗೊಳಲಿದೆ. ನದಿ–ತೊರೆಗಳ ಪ್ರವಾಹದಿಂದ ಕಾಫಿ, ಅಡಕೆ, ಬಾಳೆ ತೋಟಗಳು ಜಲಾವೃತವಾಗಿವೆ.

ಶೌಚಾಲಯ ಗುಂಡಿಗೆ ಬಿದ್ದ ಕಾಡಾನೆ ರಕ್ಷಣೆ



ಶೌಚಾಲಯ ಇಂಗು ಗುಂಡಿಗೆ ಬಿದ್ದು ನರಳಾಡಿದ ಕಾಡಾನೆ.

ಗೋಣಿಕೊಪ್ಪ, ಜು.18–ವಿರಾಜಪೇಟೆ ತಾಲೂಕಿನ ಕೊಳ್ತೋಡು–ಕೆ.ಬೈಗೋಡು ಗ್ರಾಮದ ಕಾಫಿ ತೋಟದ ಶೌಚಾಲಯ ಇಂಗು ಗುಂಡಿಗೆ ಬಿದ್ದು ಒದ್ದಾಡುತ್ತಿದ್ದ ಕಾಡಾನೆಯನ್ನು ರಕ್ಷಿಸಿ ಕಾಡಿಗಟ್ಟಲಾಯಿತು.

ಗುರುವಾರ ಮುಂಜಾನೆ 3 ಗಂಟೆಯಲ್ಲಿ ಕಾಡಿನಿಂದ ಆಹಾರ ಅರಸಿ ಬಂದಿದ್ದ ಸುಮಾರು 5 ವರ್ಷದ ಗಂಡಾನೆ ಕೆಬೈಗೋಡು ಗ್ರಾಮದ ಹೆಚ್.ಎ. ಗಣೇಶ್ ಅವರ ತೋಟದ ಮನೆಯ ಹಿಂಭಾಗದ ಶೌಚಾಲಯ ಇಂಗು ಗುಂಡಿಗೆ ಬಿದ್ದಿದೆ. ಆನೆ ಘೀಳಿಡುವುದನ್ನು ಗಮನಿಸಿದ ತೋಟದ ಮಾಲೀಕ ಗಣೇಶ್, ವಿರಾಜಪೇಟೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ನಂತರ ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ, ಆನೆಯನ್ನು ಮೇಲೆತ್ತಿದರು. ಬಳಿಕ ಸಮೀಪದ ಅಯ್ಯಪ್ಪದೇವರ ಕಾಡಿಗೆ ಓಡಿಸಲಾಯಿತು.

ವಿರಾಜಪೇಟೆ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನೆಹರು, ವಲಯ ಅರಣ್ಯಾಧಿಕಾರಿ ಕೆ.ಎಂ. ದೇವಯ್ಯ, ಉಪವಲಯ ಅರಣ್ಯಾಧಿಕಾರಿ ಡಿ.ಪಿ. ಸಂಜೀತ್, ಗಸ್ತು ಅರಣ್ಯ ಪಾಲಕ ಸಿ.ಅರುಣ್, ಆರ್‌ಆರ್‌ಟಿ ತಂಡದ ಸಿಬ್ಬಂದಿಯಾದ ಸಚಿನ್, ವಿನೋದ್, ಅಚ್ಚಯ್ಯ, ಹರೀಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ವಿರಾಜಪೇಟೆಯಲ್ಲಿ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ



ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಸಭೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಜು.18–ಪಟ್ಟಣದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಮಹಾಸಭೆ, ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಆಯ್ಕೆಯಾದ ಅಜ್ಜಿನಿಕಂಡ ಮಹೇಶ್ ನಾಚಯ್ಯ ಅವರನ್ನು ಸನ್ಮಾನಿಸಲಾಯಿತು. ತಾಲೂಕು ಸಂಘದಿಂದ ಅತ್ಯುತ್ತಮ ಕ್ರೀಡಾ ವರದಿಗೆ ಎ.ಎನ್.ವಾಸು, ಕೃಷಿ ವರದಿಗೆ ಪಿ.ವಿ.ಅಂತೋಣಿ, ಮಾನವೀಯ ವರದಿಗೆ ರವಿ ಕುಮಾರ್, ಅರಣ್ಯ ಮತ್ತು ವನ್ಯಜೀವಿ ವರದಿಗೆ ಆರ್.ಸುಬ್ರಮಣಿ ಹಾಗೂ ಶೈಕ್ಷಣಿಕ ವರದಿಗೆ ರಜಿತಾ ಕಾರ್ಯಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಹೇಮಂತ್ ಶೆಟ್ಟಿ, ಈಶಾನ್ವಿ, ಹಿಮಾನಿ, ರಕ್ಷನ್, ಜೀಷ್ಮಾ, ಜಶ್ಮಿತಾ ಹಾಗೂ ಸಮೃದ್ಧಿ ಅವರನ್ನು ಸನ್ಮಾನಿಸಲಾಯಿತು.

ತಹಸೀಲ್ದಾರ್ ರಾಮಚಂದ್ರ ಮಾತನಾಡಿ, ಅಂಕುಡೊಂಕುಗಳನ್ನು ತಿದ್ದುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಪತ್ರಕರ್ತರ ಪಾತ್ರ ಮಹತ್ವವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಿದ್ದಾಪುರ ಗುಹ್ಯ ಅಗಸ್ತ್ಯೇಶ್ವರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೆಂಕಟೇಶ್ ಮಾತನಾಡಿ, ಶಾಲಾ ಕೊಠಡಿಗಳಲ್ಲಿ ದೇಶದ ಭವಿಷ್ಯ ರೂಪುಗೊಳ್ಳಲಿದೆ. ಹೀಗಾಗಿ ಮಕ್ಕಳನ್ನು ಅರ್ಥೈಸಿಕೊಂಡು ಉತ್ತಮ ಶಿಕ್ಷಣ ನೀಡಬೇಕು. ಇದರಿಂದ ಸಮಾಜದಲ್ಲಿ ಋಣಾತ್ಮಕ ಅಂಶಗಳು ಕಡಿಮೆಯಾಗುತ್ತದೆ. ಪತ್ರಕರ್ತರು ಸಮರ್ಥವಾಗಿ ಕರ್ತವ್ಯ ನಿಭಾಯಿಸಿದರೆ ಉತ್ತಮ ಸಮಾಜ ರೂಪುಗೊಳ್ಳಲಿದೆ ಎಂದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಮಾತನಾಡಿ, ವೈಯಕ್ತಿಕ ವಿಚಾರಗಳನ್ನು ಬದಿಗೊತ್ತಿ ವಸ್ತುನಿಷ್ಠ ಹಾಗೂ ಸಮಾಜದ ಹಿತದೃಷ್ಟಿಯಿಂದ ವರದಿ ಮಾಡಬೇಕು ಎಂದರು.

ಸಂಘದ ಜಿಲ್ಲಾಧ್ಯಕ್ಷೆ ಸವಿತಾ ರೈ ಮಾತನಾಡಿ, ಸತ್ಯವನ್ನು ಹೇಳುವ ಧೈರ್ಯ ಪತ್ರಿಕಾರಂಗದಲ್ಲಿ ಬಿಟ್ಟು ಬೇರೆಯಾವುದೇ ಕ್ಷೇತ್ರದಲ್ಲಿ ಸಿಗುವುದಿಲ್ಲ ಎಂದು ಮೆಚ್ಚಿಗೆ ವ್ಯಕ್ತಪಡಿಸಿದರು.

ತಾಲೂಕು ಅಧ್ಯಕ್ಷ ರಜಿತ್ ಕುಮಾರ್ ಗುಹ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ರಾಜ್ಯ ಘಟಕದ ಸದಸ್ಯ ಮಂಜುನಾಥ್, ತಾಲೂಕು ಪ್ರಧಾನ ಕಾರ್ಯದರ್ಶಿ ಮುಸ್ತಾಫ, ಖಜಾಂಚಿ ಡಾ.ಹೇಮಂತ್ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ಪಾರ್ಥ ಚಿಣ್ಣಪ್ಪ, ನಿರ್ದೇಶಕರಾದ ಡಿ.ಮಂಜುನಾಥ್, ರಜಿತಾ ಕಾರ್ಯಪ್ಪ, ಕಿಶೋರ್ ಶೆಟ್ಟಿ, ರವಿ ಕುಮಾರ್, ಕೋಲತಂಡ ರಘು ಮಾಚಯ್ಯ ಹಾಗೂ ಸಂತೋಷ್ ರೈ ಮತ್ತಿತರರು ಉಪಸ್ಥಿತರಿದ್ದರು.

2 ಮನೆ ಕುಸಿತ, 51 ವಿದ್ಯುತ್ ಕಂಬಗಳಿಗೆ ಹಾನಿ

ಮಡಿಕೇರಿ, ಜು.18– ಕೊಡಗು ಜಿಲ್ಲೆಯಲ್ಲಿ ಅಪಾರ ಮಳೆ ಹಾನಿ ಸಂಭವಿಸಿದ್ದು, ಕಳೆದ 24 ಗಂಟೆ ಅವಧಿಯಲ್ಲಿ ಸುರಿದ ಮಳೆಗೆ 2 ಮನೆಗಳು ಸಂಪೂರ್ಣ ಕುಸಿದಿವೆ. 4 ಮನೆಗಳಿಗೆ ತೀವ್ರ ಹಾನಿ ಹಾಗೂ 16 ಮನೆಗಳು ಜಖಂಗೊಂಡಿವೆ. ಜಿಲ್ಲೆಯ ವಿವಿಧೆಡೆ 51 ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ಇದರಿಂದ ಸೆಸ್ಕ್‌ಗೆ 5 ಲಕ್ಷ ರೂ. ನಷ್ಟ ಉಂಟಾಗಿದೆ.

ಹಾರಂಗಿ ಜಲಾಶಯ: ಹಾರಂಗಿ ಜಲಾಶಯ ಪ್ರದೇಶಗಳಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ಜಲಾಶಯದ ಒಳಹರಿವಿನಲ್ಲಿ ಮತ್ತಷ್ಟು ಏರಿಕೆಯಾಗಿದೆ. ಗುರುವಾರ ಜಲಾಶಯಕ್ಕೆ 17,416 ಕ್ಯುಸೆಕ್ ಒಳಹರಿವು ಬರುತ್ತಿದ್ದು, 10 ಸಾವಿರ ಕ್ಯುಸೆಕ್ ಹೊರ ಬಿಡಲಾಗುತ್ತಿದೆ. 2859 ಅಡಿಗಳಷ್ಟು ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ 2853.35 ಅಡಿ ನೀರು ಸಂಗ್ರಹವಾಗಿದೆ.

ಜಿಲ್ಲೆಯ ಮಳೆ ವಿವರ: ಗುರುವಾರ ಬೆಳಗ್ಗೆ 8.30 ಗಂಟೆಗೆ ಕೊನೆಗೊಂಡಂತೆ ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ವ್ಯಾಪ್ತಿಯಲ್ಲಿ ದಾಖಲೆಯ 174 ಮಿ.ಮೀ. ಮಳೆಯಾಗಿದ್ದು, ಮಡಿಕೇರಿ ತಾಲೂಕಿನ ಭಾಗಮಂಡಲ ವ್ಯಾಪ್ತಿಯಲ್ಲಿ 125 ಮಿ.ಮೀ., ಸಂಪಾಜೆ 84.5, ಕೊಡ್ಲಿಪೇಟೆ 88.6, ಶ್ರೀಮಂಗಲ 97.8, ಹುದಿಕೇರಿಯಲ್ಲಿ 87.6 ಮಿ.ಮೀ ಮಳೆ ಸುರಿದಿದ್ದು, ಜಿಲ್ಲೆಯಲ್ಲಿ ಸರಾಸರಿ 74.62 ಮಿ.ಮೀ ಮಳೆಯಾಗಿದೆ.

ಜು.22ರವರೆಗೆ ವಾಹನಗಳ ಸಂಚಾರ ನಿಷೇಧ



ಕರ್ತೋಜಿ ಬಳಿ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ.

ಮಡಿಕೇರಿ, ಜು.18–ತಾಲೂಕು ವ್ಯಾಪ್ತಿ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಕರ್ತೋಜಿ ಬಳಿ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹಾನಿಯಾಗಿರುವುದರಿಂದ ಜು.22ರ ವರೆಗೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಕರ್ತೋಜಿ ಬಳಿ ಹೆದ್ದಾರಿಯ ಬಲ ಬದಿಯಲ್ಲಿ ಗುಡ್ಡ ಕುಸಿಯುವ ಸಾಧ್ಯತೆಗಳಿದ್ದು, ಜೊತೆಗೆ ಹವಾಮಾನ ಇಲಾಖೆ ಮತ್ತೆ 4 ದಿನ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಕಾರಣ ಮುಂಜಾಗ್ರತಾ ಕ್ರಮವಾಗಿ ಗುರುವಾರದಿಂದ ಜು.22ರವರೆಗೆ ಸಂಪಾಜೆಯಿಂದ–ಕರ್ತೋಜಿವರೆಗೆ ಎಲ್ಲಾ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಈ ಅವಧಿಯಲ್ಲಿ ತುರ್ತು ಸೇವೆ ಮತ್ತು ಪ್ರಕೃತಿ ವಿಕೋಪ ಸಂಬಂಧಿತ ಕಾರ್ಯಗಳಿಗೆ ತೆರಳುವ ವಾಹನಗಳಿಗೆ ಮಾತ್ರ ಸಂಚರಿಸಬಹುದು. ಜಿಲ್ಲೆಯ ಮೂಲಕ ಮೈಸೂರು, ಬೆಂಗಳೂರು ಕಡೆಗೆ ಹೋಗುವ ವಾಹನಗಳು ಚಾರ್ಮುಡಿ ಘಾಟ್–ಕೊಟ್ಟಿಗೆಹಾರ ಮಾರ್ಗವಾಗಿ ಸಂಚರಿಸುವಂತೆ ಸೂಚಿಸಲಾಗಿದೆ.

ಜು.27ರಂದು ಕುವೆಂಪುನಗರದ ಕೊಡವ ನಿವಾಸಿಗಳ ಸಂಘದ ವಾರ್ಷಿಕ ಸಭೆ

ಮೈಸೂರು, ಜು.18–ಕುವೆಂಪುನಗರದ ಕೊಡವ ನಿವಾಸಿಗಳ ಸಂಘದ 23ನೇ ವಾರ್ಷಿಕ ಸಭೆ ಮತ್ತು ವಾರ್ಷಿಕೋತ್ಸವ ಜು.27ರಂದು ಬೆಳಗ್ಗೆ 10.30ಕ್ಕೆ ವಿಜಯನಗರ 1ನೇ ಹಂತದ ಕೊಡವ ಸಮಾಜದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸಭಾಂಗಣದಲ್ಲಿ ನಡೆಯಲಿದೆ.

ಸಂಘದ ಅಧ್ಯಕ್ಷ ವಾಟೇರಿರ ಬಿ.ಮೇದಪ್ಪ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಶೈಕ್ಷಣಿಕ ಸಾಧನೆಯ ವಿದ್ಯಾರ್ಥಿಗಳು ಮತ್ತು ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಗುವುದು.ಬಳಿಕ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸಂಘದ ಆಡಳಿತ ಮಂಡಳಿ ಮನವಿ ಮಾಡಿದೆ.

ಮೊದಲ ಬಾರಿಗೆ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಸಂಸದ ಭೇಟಿ

ಸುನೀಲ್ ಬೋಸ್‌ಗೆ ಪಕ್ಷದ ಮುಖಂಡರು, ಕಾರ್ಯಕರ್ತರಿಂದ ಸನ್ಮಾನ



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸಂಸದ ಸುನೀಲ್ ಬೋಸ್ ಅವರನ್ನು ಕಾರ್ಯಕರ್ತರು ಸನ್ಮಾನಿಸಿದರು.

ಚಾಮರಾಜನಗರ, ಜು.18–ಚಾಮರಾಜನಗರ ಲೋಕಸಭೆ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರದಿಂದ ಹೆಚ್ಚಿನ ಅನುದಾನ ತರುವುದಾಗಿ ಸಂಸದ ಸುನೀಲ್ ಬೋಸ್ ಹೇಳಿದರು.

ಸಂಸದರಾಗಿ ಆಯ್ಕೆಯಾದ ಬಳಿಕ ಮೊದಲ ಬಾರಿಗೆ ಗುರುವಾರ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿ ಆಗಮಿಸಿ ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಮ್ಮ ತಂದೆಯವರಿಗೆ ಚಾಮರಾಜನಗರ ಕ್ಷೇತ್ರದ ಒಡನಾಟವಿದ್ದು, ಈ ಭಾಗದ ಹೆಚ್ಚು ಜನರ ಪರಿಚಯವಿದೆ. ಪಕ್ಷದ ಶಾಸಕರು, ಮುಖಂಡರ ಸಲಹೆ ಪಡೆದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಕ್ರಿಯಾಶೀಲ ರಾಜಕಾರಣಿಯಾಗಿದ್ದ ದಿ.ಆರ್.ಧ್ರುವನಾರಾಯಣ್ ಅವರ ಆಡಳಿತ ಶೈಲಿಯನ್ನು ಅನುಸರಣೆ ಮಾಡಿ, ಜನಪರ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದು. ನನ್ನನ್ನು 1.88 ಲಕ್ಷ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಚಾಮರಾಜನಗರ ಕಾಂಗ್ರೆಸ್ ಭದ್ರಕೋಟೆ ಎಂಬುದನ್ನು ಜನತೆ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಜಿಲ್ಲೆಯ ಹಲವಾರು ಸಮಸ್ಯೆಗಳು, ಅವುಗಳ ಪರಿಹಾರಕ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸಂಸದರ ಗಮನಕ್ಕೆ ತಂದರು. ಕಾಡಾ ಅಧ್ಯಕ್ಷ ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹಾದೇವು, ಆರ್.ಮಹಾದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ಜಿಲ್ಲಾ ಮಹಿಳಾ ಅಧ್ಯಕ್ಷೆ ಲತಾ ರಾಜಶೇಖರ ಜತ್ತಿ, ಎಸ್ಸಿ ಘಟಕ ಜಿಲ್ಲಾಧ್ಯಕ್ಷ ನಲ್ಲೂರು ಸೋಮೇಶ್ವರ್, ಓಬಿಸಿ ರಾಜ್ಯ ಕಾರ್ಯದರ್ಶಿ ಸಿ.ಎ. ಮಹದೇವಶೆಟ್ಟಿ, ಎಪಿಎಂಸಿ ಅಧ್ಯಕ್ಷ ಸೋಮೇಶ್, ಜಿಪಂ ಮಾಜಿ ಸದಸ್ಯರಾದ ಶಿವಕುಮಾರ್, ಕಾವೇರಿ, ನಗರಸಭೆ ಸದಸ್ಯೆ ಚಿನ್ನಮ್ಮ, ಗ್ರಾಪಂ ಅಧ್ಯಕ್ಷರು, ಸದಸ್ಯರು, ಕಾರ್ಯಕರ್ತರು ಹಾಜರಿದ್ದರು.

ಕನ್ನಡಿಗರ ಉದ್ಯೋಗ ಮೀಸಲಾತಿ ವಿಧೇಯಕ ವಾಪಸ್

ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ



ಚಾಮರಾಜನಗರದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜು.18–ರಾಜ್ಯ ಸರ್ಕಾರ ಕನ್ನಡಿಗರ ಉದ್ಯೋಗ ಮೀಸಲಾತಿ ಹಿಂಪಡೆದಿರುವ ಕ್ರಮ ವಿರೋಧಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗದಲ್ಲಿ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ ಹಾಗೂ ವಿಪಕ್ಷಗಳ ವಿರುದ್ಧ ಘೋಷಣೆ ಕೂಗಿದರು.

ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಕುರಿತು ಸಚಿವ ಸಂಪುಟದಲ್ಲಿ ತೀರ್ಮಾನಿಸಿ, ನಂತರ ಹಿಂಪಡೆದಿರುವುದು ಖಂಡನೀಯ. ಇದೊಂದು ಗೋಸುಂಬೆ ಸರ್ಕಾರ, ಕನ್ನಡ ವಿರೋಧಿ ಸರ್ಕಾರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

3 ದಶಕಗಗಳಿಂದಲೂ ಕನ್ನಡಿಗರಿಗೆ ಉದ್ಯೋಗದಲ್ಲಿ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕೆಂದು ಹೋರಾಟ ಮಾಡಲಾಗುತ್ತಿದೆ ಆದರೆ, ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕನ್ನಡಿಗರ ಮೀಸಲಾತಿಗೆ ತೀರ್ಮಾನಿಸಿ ಬಳಿಕ ಹಿಂಪಡೆದಿದೆ ಎಂದು ಕಿಡಿಕಾರಿದರು. ವಿರೋಧ ಪಕ್ಷಗಳು ಈ ಕುರಿತು ಹೋರಾಟ ನಡೆಸುತ್ತಿಲ್ಲ. ಕೂಡಲೇ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಘೋಷಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸೇನಾ ಪಡೆಯ ಶಾ.ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ. ರಾಜ್ ಗೋಪಾಲ್, ಚಾ.ರಾ.ಕುಮಾರ್, ನಿಜಧ್ವನಿ ಗೋವಿಂದರಾಜು, ಮಹೇಶ್ ಗೌಡ, ಲಿಂಗರಾಜು, ಗು.ಪುರುಷೋತ್ತಮ್, ದೊಡ್ಡರಾಯಪೇಟೆ ಮಲ್ಲಣ್ಣ, ಆಟೋ ನಾಗೇಶ ಭಾಗವಹಿಸಿದ್ದರು.

ಇಂದು ಅಮಚವಾಡಿಯಲ್ಲಿ ಕಾನೂನು ಅರಿವು

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕಾನೂನು ಅರಿವು ಕಾರ್ಯಕ್ರಮವನ್ನು ಜು.19ರಂದು ಬೆಳಗ್ಗೆ 10.30ಕ್ಕೆ ಅಮಚವಾಡಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ವಕೀಲರ ಸಂಘದ ನಿಕಟ ಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಾಂಶುಪಾಲ ಶಿವನಂಜಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ವಕೀಲೆ ವಿದ್ಯಾಲತಾ, ಜಿಲ್ಲಾ ಬಾಲ ನ್ಯಾಯ ಮಂಡಳಿ ಸದಸ್ಯ ಟಿ.ಜೆ.ಸುರೇಶ್, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಹಾಯಕ ಗ್ರಂಥ ಪಾಲಕ ಶಿವಕುಮಾರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಚಾಮರಾಜೇಶ್ವರ ಆಷಾಢ ರಥೋತ್ಸವ



ಚಾಮರಾಜೇಶ್ವರ ರಥಕ್ಕೆ ಬಟ್ಟೆಗಳ ಧ್ವಜ ಅಲಂಕಾರ ಮಾಡಿರುವುದು.

ಚಾಮರಾಜನಗರ, ಜು.18–ಆಷಾಢ ಮಾಸದಲ್ಲಿ ನವದಂಪತಿಗಳನ್ನು ಒಂದೆಡೆ ಸೇರಿಸುವ ಪ್ರಸಿದ್ಧ ಚಾಮರಾಜೇಶ್ವರ ರಥೋತ್ಸವ ಜು.20ರಂದು ನಡೆಯಲಿದ್ದು, ಜಾತ್ರೆಗೆ ಎಲ್ಲಾ ಸಿದ್ಧತೆ ಪೂರ್ಣಗೊಳಿಸಲಾಗಿದೆ.

ಶನಿವಾರ ಮಧ್ಯಾಹ್ನ 12.07 ರಿಂದ 12.30 ರೊಳಗೆ ಸಲ್ಲುವ ಶುಭ ಅಭಿಜನ್ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ದೊರೆಯಲಿದ್ದು, ಇದಕ್ಕಾಗಿ ಮುಜರಾಯಿ ಇಲಾಖೆ, ಜಿಲ್ಲಾ, ತಾಲೂಕು ಆಡಳಿತ ಹಾಗೂ ದೇವಸ್ಥಾನದ ಆಡಳಿತ ಮಂಡಳಿಯಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಆಷಾಢ ಮಾಸದ ವಿಶೇಷ: ಆಷಾಢ ಮಾಸದಲ್ಲಿ ಶುಭ ಕಾರ್ಯ ನಡೆಯುವುದಿಲ್ಲ. ಆದರೆ, ಚಾಮರಾಜೇಶ್ವರಸ್ವಾಮಿ ರಥೋತ್ಸವ ನಡೆಯುವುದು ಮಾತ್ರ ವಿಶೇಷ. ಹೀಗಾಗಿ ಆಷಾಢ ಜಾತ್ರೆ ಎಂದೇ ಪ್ರಸಿದ್ಧಿ ಪಡೆದಿದೆ.

ಪುರಾಣ ಪ್ರಸಿದ್ಧವಾಗಿರುವ ಚಾಮರಾಜೇಶ್ವರ ರಥೋತ್ಸವ ಹಿಂದೆ ವೈಭವವಾಗಿ ನೆರವೇರಿ, ತೆಪ್ಪೋತ್ಸವವೂ ನಡೆಯುತ್ತಿತ್ತು. ಆದರೆ, 1836ರಲ್ಲಿ ಮೊದಲ ಬಾರಿಗೆ ಆಷಾಢ ಶುದ್ಧ ಹುಣ್ಣಿಮೆಯ ಸೋಮವಾರದಂದು ರಥೋತ್ಸವ ನಡೆಯಿತು. ರಥವನ್ನು ಅರೇಪುರದ ಬಸವರಾಜೇ ಅರಸು ಮಾಡಿಸಿದ್ದರು. 1970ರಲ್ಲಿ ತೇರಿನ ಚಕ್ರ ಬದಲಾಯಿಸಲಾಗಿತ್ತು. ಹಿಂದೆ ತೇರು ಕಟ್ಟುವ ಕಾರ್ಯಕ್ಕೆ 15 ದಿನ ಹಿಡಿಯುತಿತ್ತು. ಒಟ್ಟು 56 ಕಂಬ, 84 ಅಡ್ಡಪಟ್ಟಿಗಳಿಂದ ತೇರು ಕಟ್ಟಿದ ನಂತರ, ಧ್ವಜ ಅಲಂಕಾರ ಬಟ್ಟೆಗಳಿಂದ ಸಿಂಗಾರ ಮಾಡಲಾಗುತ್ತಿತ್ತು. 2017ರ ಫೆಬ್ರವರಿಯಲ್ಲಿ ಮಾನಸಿಕ ಅಸ್ವಸ್ಥನೊಬ್ಬ ರಥಕ್ಕೆ ಬೆಂಕಿ ಹಾಕಿದ್ದರಿಂದ ಅದು ಸುಟ್ಟು ಹೋಗಿತ್ತು. ಬಳಿಕ 5 ವರ್ಷ ರಥೋತ್ಸವ ಸ್ಥಗಿತಗೊಂಡಿತ್ತು. ನಂತರ 2022ರಿಂದ ಮತ್ತೆ ರಥೋತ್ಸವ ಆರಂಭವಾಗಿದೆ.

ನವಜೋಡಿಗಳ ಜಾತ್ರೆ: ಚಾಮರಾಜೇಶ್ವರನ ಆಷಾಢ ಜಾತ್ರೆ ನವಜೋಡಿಗಳನ್ನು ಒಂದುಗೂಡಿಸುತ್ತದೆ. ಜಾತ್ರೆಗೆ ಜಿಲ್ಲೆಯ ನವಜೋಡಿಗಳಲ್ಲದೆ, ಹೊರಗಿನ ಜಿಲ್ಲೆಯ ನವದಂಪತಿಗಳು ಆಗಮಿಸಿ ರಥಕ್ಕೆ ಹಣ್ಣು–ದವನ ಎಸೆಯುವ ಮೂಲಕ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸುವಂತೆ ಪ್ರಾರ್ಥಿಸುತ್ತಾರೆ. ಅಲ್ಲದೆ, ರೈತರು ಸಹ ಉತ್ತಮ ಮಳೆ ಬೆಳೆಗಾಗಿ ದೇವರ ಮೊರೆ ಹೋಗುತ್ತಾರೆ.

ರಥಗಳ ವೈಭವ: ಚಾಮರಾಜೇಶ್ವರಸ್ವಾಮಿ ದೊಡ್ಡ ರಥದ ಮುಂದೆ ಗಣಪತಿ ರಥ, ಸುಬ್ರಹ್ಮಣ್ಯಸ್ವಾಮಿ ಚಿಕ್ಕರಥ, ಚಂಡಿಕೇಶ್ವರ ಚಿಕ್ಕರಥ, ಮಹಾರಾಜರ ಉತ್ಸವ ಮೂರ್ತಿ ಸಾಗುತ್ತವೆ. ದೊಡ್ಡರಥದ ಹಿಂದೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಚಿಕ್ಕರಥ ಸಾಗುತ್ತದೆ. ಇದು ಜಾತ್ರೆಯ ಮತ್ತೊಂದು ವಿಶೇಷವಾಗಿದೆ.

ಬಿಗಿ ಪೊಲೀಸ್ ಬಂದೋಬಸ್ತ್: ರಥೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ರಥೋತ್ಸಕ್ಕೆ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆಹ್ವಾನಿಸಲಾಗಿದ್ದು, ಅವರು ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ ಎನ್ನಲಾಗುತ್ತಿದೆ.

ಮಸಣಾಪುರದಲ್ಲಿ ಒತ್ತುವರಿ ಜಾಗ ಸರ್ವೇ



ಮಸಣಾಪುರದಲ್ಲಿ ಖಾಸಗಿ ವ್ಯಕ್ತಿ ಒತ್ತುವರಿ ಮಾಡಿಕೊಂಡಿದ್ದ ಜಾಗವನ್ನು ಅಧಿಕಾರಿಗಳು ಸರ್ವೇ ಕಾರ್ಯ ನಡೆಸಿದರು.

ಯಳಂದೂರು, ಜು.18–ಸಮೀಪದ ಮಸಣಾಪುರ ಗ್ರಾಮದಲ್ಲಿ ಖಾಸಗಿ ವ್ಯಕ್ತಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಗುರುವಾರ ಕಾವೇರಿ ನೀರಾವರಿ ನಿಗಮ, ಕಂದಾಯ ಹಾಗೂ ಸರ್ವೇ ಇಲಾಖೆಯ ಅಧಿಕಾರಿಗಳು ಗ್ರಾಮಸ್ಥರ ಸಮ್ಮುಖದಲ್ಲಿ ಸರ್ವೇ ಕಾರ್ಯ ನಡೆಸಿದರು.

ಗ್ರಾಮದ ಕಾವೇರಿ ನೀರಾವರಿ ನಿಗಮದ 27 ಗುಂಟೆ ಜಾಗವನ್ನು ಖಾಸಗಿ ವ್ಯಕ್ತಿಯೊಬ್ಬರು ಒತ್ತುವರಿ ಮಾಡಿ, ಉಳುಮೆ ಮಾಡುತ್ತಿದ್ದಾರೆ ಎಂದು ದೂರಿದ್ದ ಗ್ರಾಮದ ಉಪ್ಪಾರ ಹಾಗೂ ನಾಯಕ ಜನಾಂಗದವರು, ಈ ಜಾಗವನ್ನು ನಮ್ಮ ಜನಾಂಗದ ಸ್ಮಶಾನಕ್ಕೆ ನೀಡುವಂತೆ ಸಂಬಂಧಪಟ್ಟ ಇಲಾಖೆಗೆ ಮನವಿ ಸಲ್ಲಿಸಿದ್ದರು. ಅಲ್ಲದೆ, ಈ ಸಂಬಂಧ ಜು.6 ರಂದು ಪ್ರತಿಭಟನೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಒತ್ತುವರಿಯನ್ನು ಸರ್ವೇ ಮಾಡಿದರು.

ಕಾವೇರಿ ನೀರಾವರಿ ನಿಗಮದ ಎಇಇ ವಿಶ್ವನಾರಾಯಣ ಮಾತನಾಡಿ, ಈ 27 ಗುಂಟೆ ಜಾಗ ನೀರಾವರಿ ಇಲಾಖೆಗೆ ಒಳಪಟ್ಟಿದೆ. ಈಗ ನಾವು ಸರ್ವೇ ಮಾಡಿದ್ದು, ಈ ಜಾಗವನ್ನು ಹದ್ದು ಬಸ್ತು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸ್ಮಶಾನಕ್ಕೆ ಮನವಿ: ಗ್ರಾಮದ ಕಾಲುವೆ ಬಳಿಯ ಜಾಗವನ್ನು ಹಿಂದೆ ನಮ್ಮ ಜನಾಂಗದ ಸ್ಮಶಾನಕ್ಕೆ ನೀಡಲಾಗಿತ್ತು ಕಾಲುವೆ ಪಕ್ಕದ ಕಾವೇರಿ ನೀರಾವರಿ ನಿಗಮದ ಜಮೀನಿನಲ್ಲಿ ಉಪ್ಪಾರ ಹಾಗೂ ನಾಯಕ ಜನಾಂಗದವರು ಅಂತ್ಯಸಂಸ್ಕಾರ ಮಾಡುತ್ತಿದ್ದಾರೆ. ಆದರೆ, ಖಾಸಗಿ ವ್ಯಕ್ತಿಯೊಬ್ಬರು ಈ ಜಾಗಕ್ಕೆ ಬೇಲಿ ಹಾಕಿ ಉಳುಮೆ ಮಾಡುತ್ತಿದ್ದಾರೆ. ಹೀಗಾಗಿ ನಾವು ಇದನ್ನು ವಿರೋಧಿಸಿದ್ದೆವು. ಆದ್ದರಿಂದ ಈ ಜಾಗವನ್ನು ಉಪ್ಪಾರ ಹಾಗೂ ನಾಯಕ ಜನಾಂಗದ ಸ್ಮಶಾನಕ್ಕೆ ನೀಡಬೇಕು ಎಂದು ಮುಖಂಡ ಮಾದೇಶ್ ಮನವಿ ಮಾಡಿದರು.

ಸರ್ವೇ ಅಧಿಕಾರಿ ವಿನಯ್‌ಕುಮಾರ್, ಭೂಮಾಪನಾ ಇಲಾಖೆಯ ತಾಲೂಕು ಅಧಿಕಾರಿ ರಮೇಶ್ ಗ್ರಾಮಲೆಕ್ಕಿಗ ಲೋಕೇಶ್ ನಾಯಕ, ರಾಜೇಂದ್ರ, ಮಹದೇವು, ರಂಗಸ್ವಾಮಿ ನಾಯಕ, ಅಂಕನಾಯಕ, ವೆಂಕಟರಂಗಸ್ವಾಮಿ, ಶ್ರೀನಿವಾಸ, ಅಂಕಶೆಟ್ಟಿ, ಮಾದೇಶ್, ಕೃಷ್ಣ ಹಾಜರಿದ್ದರು.

ಟಿಪ್ಪರ್ ತಡೆದು ಗುಂಬಳ್ಳಿ ಗ್ರಾಮಸ್ಥರ ಪ್ರತಿಭಟನೆ

ಯಳಂದೂರು, ಜು.18– ಟಿಪ್ಪರ್‌ಗಳ ಓಡಾಟದಿಂದ ಗ್ರಾಮದ ಸರ್ಕಲ್‌ನ ರಸ್ತೆ ಹಾಳಾಗಿ, ಮಳೆ ನೀರು ನಿಲ್ಲುತ್ತಿದೆ ಎಂದು ತಾಲೂಕಿನ ಗುಂಬಳ್ಳಿ ಗ್ರಾಮಸ್ಥರು ಟಿಪ್ಪರ್‌ಗಳನ್ನು ತಡೆದು ಪ್ರತಿಭಟನೆ ನಡೆಸಿದರು.


ಮೂರು ತಿಂಗಳಿಂದಲ್ಲೂ ಇಲ್ಲಿನ ಕ್ವಾರಿಯಿಂದ ಟಿಪ್ಪರ್‌ಗಳಲ್ಲಿ ಕೊಳ್ಳೇಗಾಲ ತಾಲೂಕಿನ ಉತ್ತಂಬಳ್ಳಿ ಗ್ರಾಮದ ಫ್ಲೈಓವರ್ ಹಾಗೂ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಕಲ್ಲು–ಮಣ್ಣುಗಳನ್ನು ಸಾಗಿಸಲಾಗುತ್ತಿದೆ. ಇದರಿಂದ ಪ್ರಸಿದ್ಧ ಯಾತ್ರ ಸ್ಥಳ ಬಿಳಿಗಿರಿರಂಗನಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಗ್ರಾಮದ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿತ್ಯ ಅಧಿಕ ಭಾರ ಹೊತ್ತ ಹತ್ತಾರು ಲಾರಿಗಳು ಸಂಚರಿಸುತ್ತವೆ. ಇದರಿಂದ ರಸ್ತೆ ಹಾಳಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಗ್ರಾಮದ ಮಾಧು, ನಿಂಗರಾಜು, ಹರೀಶ, ಮಲ್ಲಿಕಾರ್ಜುನ, ರಂಗಯ್ಯ, ರಂಗಸ್ವಾಮಿ ಭಾಗವಹಿಸಿದ್ದರು.



ಗುಂಬಳ್ಳಿಯಲ್ಲಿ ಗ್ರಾಮಸ್ಥರು ಟಿಪ್ಪರ್ ತಡೆದು ಪ್ರತಿಭಟನೆ ನಡೆಸಿದರು.



'ಬೈಲಾ ಬೈಲಾ' ಹಾಡಿಗೆ ಹೆಜ್ಜೆ ಹಾಕಿದ ದಿವ್ಯಾ ಸುರೇಶ್

'ಬಿಚ್ಚುಗತ್ತಿ' ಸಿನಿಮಾ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ್ದ ನಟ ರಾಜವರ್ಧನ್ ಇದೀಗ 'ಹಿರಣ್ಯ'ನಾಗಿ ತೆರೆ ಮೇಲೆ ಬರುತ್ತಿದ್ದಾರೆ. ಜುಲೈ 19ರಂದು ಈ ಸಿನಿಮಾ ಬಿಡುಗಡೆಯಾಗುತ್ತಿದ್ದು, ಚಿತ್ರದ ಹಾಡೊಂದಕ್ಕೆ 'ಬಿಗ್‌ಬಾಸ್' ಖ್ಯಾತಿಯ ದಿವ್ಯಾ ಸುರೇಶ್ ಹೆಜ್ಜೆ ಹಾಕಿದ್ದಾರೆ. 'ಬೈಲಾ ಬೈಲಾ' ಎಂಬ ಹಾಡಿಗೆ ದಿವ್ಯಾ ಸುರೇಶ್ ಹೆಜ್ಜೆ ಹಾಕಿದ್ದು, ಈ ಹಾಡನ್ನು ನಿರ್ದೇಶಕ ಪ್ರವೀಣ್ ಅವ್ಯುಕ್ತ್ ಬರೆದಿದ್ದಾರೆ. ಹಾಡಿಗೆ ಶಮಿತಾ ಮಲ್ನಾಡ್ ಧ್ವನಿಯಾಗಿದ್ದು, ಜೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ಕಿರುಚಿತ್ರಗಳನ್ನು ನಿರ್ದೇಶಿಸಿದ್ದ ಪ್ರವೀಣ್ ಈ ಸಿನಿಮಾ ಮೂಲಕ ನಿರ್ದೇಶಕನಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಸಿನಿಮಾದಲ್ಲಿ ರಾಜವರ್ಧನ್‌ಗೆ ನಾಯಕಿಯಾಗಿ ರಿಹಾನಾ ಜೋಡಿಯಾಗಿದ್ದು, ಈ ಸಿನಿಮಾದ ಮೂಲಕ ರಿಹಾನಾ ಚಂದನವನಕ್ಕೆ ಪರಿಚಯವಾಗುತ್ತಿದ್ದಾರೆ. ಆಕ್ಷನ್-ಥ್ರಿಲ್ಲರ್ ಜೊತೆಗೆ ಭಾವನಾತ್ಮಕ ಕಥಾಹಂದರ ಹೊಂದಿರುವ 'ಹಿರಣ್ಯ' ಸಿನಿಮಾದಲ್ಲಿ ದಿವ್ಯಾ ಸುರೇಶ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹುಲಿ ಕಾರ್ತಿಕ್, ಅರವಿಂದ ರಾವ್, ದಿಲೀಪ್ ಶೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. 'ವೇದಾಸ್ ಇನ್ಫಿನಿಟಿ ಪಿಕ್ಚರ್' ಬ್ಯಾನರ್‌ನಲ್ಲಿ ವಿಘ್ನೇಶ್ವರ ಯು. ಹಾಗೂ ವಿಜಯ್ ಕುಮಾರ್ ಬಿ. ವಿ. ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.



ಸುದೀಪ್ ನಟನೆಯ ಮ್ಯಾಕ್ಸ್ ಟೀಸರ್ ರಿಲೀಸ್

'ಬಾ ಬಾ ಬ್ಲ್ಯಾಕ್ ಶೀಪ್' ರೈಮ್‌ಗೆ ಹೊಸ ಟಚ್!

ಕಿಚ್ಚ ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾದ ಟೀಸರ್ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಬಿಡುಗಡೆ ಆಗಿದೆ. 'ಬಾ ಬಾ ಬ್ಲ್ಯಾಕ್‌ಶೀಪ್' ಎನ್ನುತ್ತಾ ಖಡಕ್ ಧ್ವನಿಯಲ್ಲಿ ಟೀಸರ್ ಅನ್ನು ಅಭಿಮಾನಿಗಳ ಮುಂದೆ ಪ್ರಸ್ತುತ ಪಡಿಸಿದ್ದಾರೆ ಕಿಚ್ಚ ಸುದೀಪ್. ಟೀಸರ್‌ನಲ್ಲಿ ಸುದೀಪ್ ಖಡಕ್ ಆಗಿ ಕಾಣಿಸಿಕೊಂಡಿದ್ದಾರೆ.

ಟೀಸರ್‌ನಲ್ಲಿ ಬಹಳ ಗುಟ್ಟನ್ನೇನು ಬಿಟ್ಟುಕೊಟ್ಟಿಲ್ಲ ನಿರ್ದೇಶಕರು. ಜನಪ್ರಿಯ 'ಬಾ ಬಾ ಬ್ಲ್ಯಾಕ್‌ಶೀಪ್' ಇಂಗ್ಲೀಷ್ ಪದ್ಯದ ಸಾಹಿತ್ಯವನ್ನು ಬದಲು ಮಾಡಿ ಟೀಸರ್‌ನಲ್ಲಿ ಬಳಸಿಕೊಂಡಿದ್ದು, ಅದರ ಮೂಲಕವೇ ಕೆಲವು ಸುಳಿವುಗಳನ್ನಷ್ಟೆ ನೀಡಲಾಗಿದೆ. "ಬಾ ಬಾ ಬ್ಲ್ಯಾಕ್‌ಶೀಪ್, ಹ್ಯಾವ್ ಯೂ ಎನಿ ಕ್ಲೂ ಎಂದು ನಟ ಟೀಸರ್‌ನಲ್ಲಿ ಹೇಳುತ್ತಾರೆ.

ತೆಲುಗಿನ ನಟ ಸುನಿಲ್ ಅನ್ನು ವಿಲನ್ ಆಗಿ ತೋರಿಸಲಾಗಿದೆ. ಅವರ ದೃಶ್ಯ ಟೀಸರ್‌ನಲ್ಲಿ ಕಾಣಿಸಿಕೊಳ್ಳುವ ಸಮಯಕ್ಕೆ ಸರಿಯಾಗಿ ಸುದೀಪ್ ಹಿನ್ನೆಲೆಯಲ್ಲಿ ಹೇಳುವ ಪದ್ಯದ 'ಸ್ಕೌಂಡ್ರಲ್' ಸಾಲನ್ನು ಜೋಡಿಸಲಾಗಿದೆ. ಟೀಸರ್‌ನಲ್ಲಿ ವರಲಕ್ಷ್ಮಿ ಶರತ್‌ಕುಮಾರ್ ಪಾತ್ರವನ್ನೂ ತುಸು ಹೈಲೈಟ್ ಮಾಡಲಾಗಿದ್ದು, ವರಲಕ್ಷ್ಮಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಂತಿದೆ.

ಪ್ಯಾನ್-ಇಂಡಿಯಾ ಚಲನಚಿತ್ರವೆಂದು ಬಿಂಬಿಸಲಾದ ಮ್ಯಾಕ್ಸ್, ಅದರ ಪ್ರಾರಂಭದಿಂದಲೂ ಅಪಾರ ಉತ್ಸಾಹವನ್ನು ಉಂಟುಮಾಡಿದೆ. ಕಿಚ್ಚ ಸುದೀಪ್ ಅವರ 2022 ರ ಚಲನಚಿತ್ರ ವಿಕ್ರಾಂತ್ ರೋಣದ ನಂತರ ಮತ್ತೊಂದು ಸಿನಿಮಾಗಾಗಿ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ. ಆಗಸ್ಟ್ 15 ರಂದು ಚಿತ್ರವು ವಿಶ್ವಾದ್ಯಂತ ಥಿಯೇಟರ್‌ಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ, ಆದರೆ ನಿರ್ದೇಶಕರು ಇನ್ನೂ ಬಿಡುಗಡೆಯ ದಿನಾಂಕವನ್ನು ಖಚಿತಪಡಿಸಿಲ್ಲ.

'ಮ್ಯಾಕ್ಸ್' ಸುದೀಪ್ ನಟನೆಯ 46ನೇ ಸಿನಿಮಾವಾಗಿದ್ದು, ವಿಜಯ್ ಕಾರ್ತಿಕೇಯ ನಿರ್ದೇಶನದ ಈ ಆಕ್ಷನ್ ಥ್ರಿಲ್ಲರ್ ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ತೆರೆಕಾಣುತ್ತಿದೆ. ಸುದೀಪ್ ಜೊತೆಗೆ 'ಪುಷ್ಪ' ಖ್ಯಾತಿಯ ಸುನೀಲ್, ವರಲಕ್ಷ್ಮೀ ಶರತ್‌ಕುಮಾರ್, ಸಂಯುಕ್ತ ಹೊರನಾಡು, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ ಮುಂತಾದವರ ಪಾತ್ರದ ತುಣುಕುಗಳನ್ನು ಟೀಸರ್ ಹೊಂದಿದೆ. ಮ್ಯಾಕ್ಸ್ ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ.

ಪ್ಯಾನ್ ಇಂಡಿಯಾ ಅಂತ ಹೋದರೆ ಗಡ್ಡ ಬೆಳೆಯಬಹುದಷ್ಟೆ



ಹಂಸಲೇಖ

ಕನ್ನಡ ನಿರ್ಮಾಪಕರು ಪ್ಯಾನ್ ಇಂಡಿಯಾ ಚಿತ್ರಗಳತ್ತ ಆಕರ್ಷಿತರಾಗುತ್ತಿರುವುದು, ಕನ್ನಡದ ಹೀರೋಗಳು ಸಣ್ಣ ಚಿತ್ರಗಳನ್ನು ಬಿಟ್ಟು, ದೊಡ್ಡ ಬಜೆಟ್‌ನ ಪ್ಯಾನ್ ಇಂಡಿಯಾ ಚಿತ್ರಗಳನ್ನು ಮಾಡೋಕೆ ಹೊರಟಿರುವ ಬಗ್ಗೆ ಸಾಕಷ್ಟು ಟೀಕೆ-ಟಿಪ್ಪಣಿಗಳು ವ್ಯಕ್ತವಾಗುತ್ತಿವೆ. ಹಿರಿಯ ಸಂಗೀತ ನಿರ್ದೇಶಕ ಹಂಸಲೇಖ ಅವರು ಈ ಕುರಿತು ಮಾತನಾಡಿದ್ದಾರೆ.

ಕನ್ನಡದ ಹೀರೋಗಳು ಹನಿಮೂನ್‌ಗೆ ಹೋದಂತೆ ಬೇರೆ ಭಾಷೆಗಳಿಗೆ ಹೋಗಿ ಬರಬಹುದೇ ಹೊರತು ಅಲ್ಲಿರುವುದಕ್ಕೆ ಸಾಧ್ಯವೇ ಇಲ್ಲ, ಹಾಗಾಗಿ ಕನ್ನಡದಲ್ಲೇ ಹೆಚ್ಚು ಚಿತ್ರಗಳನ್ನು ಮಾಡಿ ಎಂದು ಅವರು ಹೀರೋಗಳಿಗೆ ಸಲಹೆ ನೀಡಿದ್ದಾರೆ. ಪ್ಯಾನ್ ಇಂಡಿಯಾ ಎಂಬ ಹುಚ್ಚು ಕನ್ನಡದ ಸ್ಟಾರ್‌ಗಳಿಗೆ ಬಂದು ಕನ್ನಡದ ಬೇರುಗಳು ಕಟ್ ಆಗಿದೆ. ಇವರೆಲ್ಲಾ ಭಾರತದಾದ್ಯಂತ ಖ್ಯಾತ ನಾಯಕರಾಗುತ್ತಾರೆ ಅನ್ನೋದು ಒಂದು ಭ್ರಮೆ. ದಕ್ಷಿಣದಲ್ಲಿ ಯಾರಾದರೂ ಸುಂದರ ನಾಯಕಿಯರಿದ್ದರೆ, ಉತ್ತರ ಭಾರತದಲ್ಲಿ 20 ವರ್ಷ ಬದುಕಬಹುದೇ ಹೊರತು, ಯಶ್, ರಜನಿಕಾಂತ್, ಕಮಲ್‌ಹಾಸನ್, ಮೋಹನ್‌ಲಾಲ್, ಮಮ್ಮೂಟಿ ಆಗಲಿ ಮುಂಬೈನಲ್ಲಿ ಎರಡುವರ್ಷ ಇರೋಕೆ ಆಗಲ್ಲ. ವಾಪಸ್ಸು ಬಂದುಬಿಡ್ತಾರೆ. ನಮ್ಮ ಹೀರೋಗಳು ಹನಿಮೂನ್ ಥರ ಅಲ್ಲಿಗೆ ಹೋಗಿ ಪ್ಯಾನ್ ಇಂಡಿಯಾ ಎಲ್ಲಾ ಸುತ್ತಾಡಿಕೊಂಡು ಬರಬಹುದು. ಅದೆಲ್ಲಿ ಸುತ್ತಿದರೂ ಕೊನೆಗವರು ಕನ್ನಡಕ್ಕೆ ಬರಲೇಬೇಕು ಎಂದು ಸೌತ್ ಸ್ಟಾರ್‌ಗಳಿಗೆ ಚಾಟಿ ಬೀಸಿದರು.

ಕನ್ನಡ ಚಿತ್ರರಂಗವನ್ನು ಬೇರೆ ಯಾವ ಭಾಷೆಯ ಚಿತ್ರರಂಗದ ಜೊತೆಗೂ ಹೋಲಿಸಲಿಕ್ಕೆ ಸಾಧ್ಯವಿಲ್ಲ ಎಂದಿರುವ ಅವರು, ನಮ್ಮಲ್ಲಿ ಎಷ್ಟೊಂದು ಪ್ರಾದೇಶಿಕ ಭಾಷೆಗಳಿವೆ, ಎಷ್ಟೊಂದು ಪ್ರಾದೇಶಿಕ ಚಿತ್ರರಂಗಗಳಿವೆ. ಅದರಲ್ಲಿ ಕೇಳೋದಕ್ಕೆ ಬಹಳ ಅರ್ಥಗರ್ಭಿತವಾದ ಶೀರ್ಷಿಕೆ ಎಂದರೆ ಅದು ಸ್ಯಾಂಡಲ್‌ವುಡ್, ಅದನ್ನು ನಾವು ಅಚ್ಚಕನ್ನಡದಲ್ಲಿ ಚಂದನವನ ಅಂತ ಕರೆಯುತ್ತೇವೆ. ಸ್ಯಾಂಡಲ್‌ವುಡ್‌ನ್ನು ಬೇರೆ ಯಾವುದಾದರೂ ವುಡ್ ಜೊತೆಗೆ ಹೋಲಿಸುವುದಕ್ಕೆ ಸಾಧ್ಯವಾ ? ಬಾಲಿವುಡ್, ಕಾಲಿವುಡ್ ಅಂತ ಏನೇನೋ ಇದೆ. ಅದ್ಯಾವುದೂ ನಮ್ಮ ಜೊತೆಗೆ ಹೋಲಿಕೆ ಮಾಡೋದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ಸ್ಯಾಂಡಲ್‌ವುಡ್ ಅಂದರೆ ಅದೊಂದು ಪರಿಮಳ.

ಸಿನಿಪದಬಂಧ-535



ಉಮ್ಮತ್ತೂರು ಇಂದುಶೇಖರ್
ಮೊ.9880820462

1		2		3	■	4	■	■	5	6
	■		■	7					■	
8			■		■		■	■	■	
	■		■		■	9		10		
■	11				■		■		■	■
■	■		■	■	12	■	13			
■	14					■		■	■	■
15	■		■	■		■		■	16	■
	■		■	17						18
19			■	■		■		■	■	
	■	■	20			■	■	21		

ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.ಎಂದೂ ಮರೆಯಲಾಗದ ಈ ಚಿತ್ರವೇ ಅವಿಸ್ಮರಣೀಯ! 5
5.ಅರಿಷಡ್ವರ್ಗಗಳಲ್ಲೊಂದು ಪ್ರೇಮದೊಂದಿಗಿದೆ 2
7.ರಾಜ್ ಕುಮಾರ್ ಹುಟ್ಟಿನಲ್ಲಿ ಅಡಗಿರುವ ಗೌಪ್ಯತೆ 5
8.ಶಾಮಣ್ಣನೊಂದಿಗೆ ಬಂದವನು ಇಲ್ಲಿ ಅಸ್ತವ್ಯಸ್ತಗೊಂಡಿದ್ದಾನೆ 3
9.ಹನ್ನೆರಡು ಸೂತ್ರಗಳನ್ನೊಳಗೊಂಡ "ಕುಟುಂಬ" 5
11.ಬಬ್ರುವಾಹನ ಚಿತ್ರದ ಹಾಡೊಂದರಲ್ಲಿ ಕೊಬ್ಬಿದ ಹೆಣ್ಣಿದ್ದಾಳೆ 4
13.ಪುನೀತ್ ಕಾಲಿಟ್ಟ ಸೈಡು ಬಿಡೋಲೇ..... 4
14.ವಿಷ್ಣುವರ್ಧನ್ – ಗೀತಾ ಅಭಿನಯಕ್ಕೆ ವಿ. ಸೋಮಶೇಖರ್ ನಿರ್ದೇಶಕ 5
17." _ _ _   _ _ _ _ ಚಂದಿರನು ನಗುತಾನ..
ಚೆಂದದ ಕೂಸೆಂದು ಆಸೆಯಲಿ ಬೆಸೆವಾನ..... " 7
19.ಶಿವಣ್ಣನ ಮೇಷ ಬಳಗದ ಪ್ರಾಣಿ 3
20.ಶ್ರೀನಾಥ್ ಆಡಿದ ಬೇಟೆ 3
21.'ಕಿಂಗ್' ಶಂಕರ್ ನಾಗ್‌ನ ಸಮರ ಕಲೆ 3

ಮೇಲಿನಿಂದ ಕೆಳಕ್ಕೆ

1.ಕಿಶೋರ್ ಸರ್ಜಾ ನಿರ್ದೇಶನದಲ್ಲಿ ಮಗಳ ಗಂಡನನ್ನು ಪ್ರೀತಿಯಿಂದ ಕರೆಯಿರಿ 4
2.ದಶರಥನ ಪುತ್ರನ ನಾಡಿನೊಳಗೆ ಅಸುರರೇ ತುಂಬಿದ್ದಾರೆ 10
3.ಬೆಳ್ಳಿ ಬೆಟ್ಟಕ್ಕೆ ಹೀಗೊಂದು ಹೆಸರು 5
4.ಹುಲಿಯ ಹಾಲಿನ ಮೇವು ಚಿತ್ರದ ಕಥಾ ಲೇಖಕ 5
6.ತ್ರಿಮೂರ್ತಿಗಳಲ್ಲೊಬ್ಬನಿಗೆ ದಿನೇಶ್ ಬಾಬು ನಿರ್ದೇಶನವಿದೆ 4
10.ರಾಜ್ ಕುಮಾರ್ ಸವಾಲ್ ಹಾಕಿದ "ಐಶ್ವರ್ಯ" 3
12.ಸುದೀಪ್ ಕಲ್ಲಿನ ಕೋಟೆ ನೆನಪಿಸುವ ಪರಾಕ್ರಮಿ ನಾಯಕ 6
13.ಶ್ರೀನಾಥ್ ಏನೂ ಅರಿಯದ ಮನುಷ್ಯ 5
15.ದಮನಕನೊಂದಿಗೆ ಬಂದವನು 4
16.ಪ್ರಜ್ವಲ್ ದೇವರಾಜ್ ಅಭಿನಯದಲ್ಲಿ ಪ್ರಾಣವಿದೆ 2
18.'ಸಂಸಾರ'ದಲ್ಲಿ ಎದ್ದ ಗದ್ದಲ 3

ಸಿನಿ ಪದಬಂಧ 534ರ ಉತ್ತರ


ಪ್ರೇ	ಮ	ಮ	ತ್ಸ	ರ	■	ಮ	■	■	ಬ	ರ
ಮ	■	ದು	■	ಹ	ರಿ	ಹ	ರ	ನ್	■	ಘು
ಮ	ದು	ವೆ	■	ಸ್ಯ	■	ಡಿ	■	■	■	ವೀ
ಯಿ	■	ಮಾ	■	ರಾ	■	ಮ	ರಿ	ಟ್ರೈ	ಗ	ರ್
■	ನ	ಡು	ರಾ	ತ್ರಿ	■	ನೆ	■	ರ್	■	■
■	■	ತ	■	■	ಪ್ರೇ	■	ನಾ	ಗ	ಕ	ನ್ಯೆ
■	ಕು	ಮಾ	ರ	ರಾ	ಮ	■	ಗಾ	■	■	■
ಕು	■	ಷೆ	■	■	ಪ್ರೇ	■	ಭ	■	ಕ್ಲಾ	■
ಳ್ಳ	■	ನೋ	■	ರಾ	ಮ	ಪ	ರ	ಶು	ರಾ	ಮ
ಕು	ರು	ಡು	■	■	ಪ್ರೇ	■	ಣ	■	■	ರ್ಡ
ಳ್ಳಿ	■	■	ಸಂ	ಗ	ಮ	■	■	ಮ	ದ	ರ್

ವಿಜೇತರು: ವರ್ಷ ಕಾಶ್ಯಪ್, ನಂ. 286, ಎನ್.ಎನ್.ಜೋಯಿಸ್ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಭಯ ಹುಟ್ಟಿಸುವ 'ಹಗ್ಗ'

ಹಾರರ್ ಟೀಸರ್ ಬಿಡುಗಡೆ



ಕನ್ನಡದಲ್ಲಿ ಈಗ ಹಾರರ್ ಚಿತ್ರಗಳು ಕಮ್ಮಿಯಾದಂತಿವೆ. ಬಹಳ ದಿನಗಳ ನಂತರ ಹಾರರ್ ಜಾನರ್ ಚಿತ್ರವೊಂದು ತೆರೆಗೆ ಬರುತ್ತಿದೆ. ಅದರ ಹೆಸರು ಹಗ್ಗ. ಅವಿನಾಶ್ ಎನ್. ಅವರ ನಿರ್ದೇಶನದ ಹಾಗೂ ಅನು ಪ್ರಭಾಕರ್, ಹರ್ಷಿಕಾ ಪೂಣಚ್ಚ, ವೇಣು ನಟಿಸಿರುವ ಹಗ್ಗ ಚಿತ್ರದ ಟೀಸರನ್ನು ನಿರ್ದೇಶಕ ಆರ್. ಚಂದ್ರು ಅವರು ಇತ್ತೀಚೆಗೆ ಬಿಡುಗಡೆ ಮಾಡಿದರು. ದಯಾಳ್ ಪದ್ಮನಾಭನ್, ಕೆ.ಮಂಜು ಅತಿಥಿಗಳಾಗಿ ಭಾಗವಹಿಸಿದ್ದರು.

ಚಿತ್ರದ ಕುರಿತು ಮಾತನಾಡಿದ ನಿರ್ದೇಶಕ ಅವಿನಾಶ್, ಮೂಲತಃ ನಾನೊಬ್ಬ ಎಂಜಿನಿಯರ್. ಸಿನಿಮಾ ನಿರ್ದೇಶನ ನನ್ನ ಕನಸು. ಆ ಕನಸು "ಹಗ್ಗ" ಚಿತ್ರದ ಮೂಲಕ ಈಡೇರಿದೆ. ಹಗ್ಗವೇ ನಮ್ಮ ಚಿತ್ರದ ನಾಯಕ. ಇದು ಹಾರರ್ ಜಾನರ್ ಚಿತ್ರವಾದರೂ, ಒಂದು ಬಹು ಮುಖ್ಯವಾದ ಸಂದೇಶ ಸಹ ಇದೆ ಎಂದರು. ಕಥೆಗಾರ ಹಾಗೂ ನಿರ್ಮಾಪಕರೂ ಆದ ರಾಜ್ ಭಾರದ್ವಾಜ್ ಮಾತನಾಡುತ್ತ, ಚಿತ್ರದಲ್ಲಿ ಹಗ್ಗವನ್ನೇ ಪ್ರಮುಖವಾಗಿಟ್ಟುಕೊಂಡು ಹಾರರ್ ಕಥೆ ಬರೆದಿದ್ದೇನೆ. ಈಗಾಗಲೇ ಮೋಷನ್ ಪೋಸ್ಟರ್ ಮೂಲಕ ಹಗ್ಗ ಜನರ ಮನಸಿಗೆ ಹತ್ತಿರವಾಗಿದೆ. ಚಿತ್ರವನ್ನು ಆಗಸ್ಟ್‌ನಲ್ಲಿ ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು.

ನಟಿ ಅನು ಪ್ರಭಾಕರ್ ಮಾತನಾಡುತ್ತ, ನಿರ್ದೇಶಕ ಅವಿನಾಶ್ ಚಿತ್ರದ ಕುರಿತು ಹೇಳಿದರು, ನನ್ನ ಪಾತ್ರವನ್ನು ಬೆಳೆಸಿರುವ ರೀತಿ ನನಗೆ ತುಂಬಾ ಇಷ್ಟವಾಯಿತು. ಚಿತ್ರದಲ್ಲಿ ನನ್ನನ್ನು ಸೂಪರ್ ಹೀರೋ ಥರ ತೋರಿಸಿದ್ದಾರೆ. ಪಾತ್ರದ ಬಗ್ಗೆ ಹೆಚ್ಚು ಹೇಳುವ ಹಾಗಿಲ್ಲ ಎಂದು ಹೇಳಿದರು.

ನಟಿ ಹರ್ಷಿಕಾ ಪೂಣಚ್ಚ ಮಾತನಾಡುತ್ತ, ಈ ಚಿತ್ರದಲ್ಲಿ ನಾನೊಬ್ಬ ಪತ್ರಕರ್ತೆಯಾಗಿ ಕಾಣಿಸಿಕೊಂಡಿದ್ದೇನೆ. ಯಾವುದೋ ಒಂದು ವಿಷಯದ ಅನ್ವೇಷಣೆಗಾಗಿ ಒಂದು ಹಳ್ಳಿಗೆ ಹೋಗುತ್ತೇನೆ. ಅಲ್ಲೇನು ನಡೆಯುತ್ತದೆ ಎನ್ನುವುದೇ ಕುತೂಹಲ. ಚಿತ್ರದಲ್ಲಿ ಜೀಪ್ ಕೂಡ ಡ್ರೈವ್ ಮಾಡಿದ್ದೇನೆ ಎಂದು ಹೇಳಿದರು. ನಾಯಕ ವೇಣು ಮಾತನಾಡಿ, ಇದು ನನ್ನ ಮೊದಲ ಚಿತ್ರ ಹಳ್ಳಿಯಲ್ಲಿ ಬರುವಂಥ ಕ್ಯಾರೆಕ್ಟರ್ ಎಂದು ಹೇಳಿದರು. ನಟ ತಬಲಾನಾಣಿ ಕೂಡ ತಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡಿದರು.

ನಿರ್ಮಾಪಕ ರಾಜ್ ಭಾರದ್ವಾಜ್ ಅವರೆ ಹಗ್ಗ ಚಿತ್ರಕ್ಕೆ ಕಥೆ, ಬರೆದಿದ್ದು, ಅವಿನಾಶ್ ಹಾಗೂ ಮನೋಹರ್ ಅವರ ಚಿತ್ರಕಥೆ, ಮನೋಹರ್ ಎಸ್.ಪಿ. ಅವರ ಸಂಭಾಷಣೆ, ಮ್ಯಾಥ್ಯೂಸ್ ಮನು ಅವರ ಸಂಗೀತ ನಿರ್ದೇಶನ, ಸಿನಿಟೆಕ್ ಸೂರಿ ಅವರ ಛಾಯಾಗ್ರಹಣ ಚಿತ್ರಕ್ಕಿದೆ. ಅವಿನಾಶ್, ಭವಾನಿಪ್ರಕಾಶ್, ಸುಧಾ ಬೆಳವಾಡಿ, ಪ್ರಿಯಹೆಗ್ಡೆ, ಮೈಕೋಮಂಜು, ಸಂಜುಬಸಯ್ಯ, ಸದಾನಂದ ಕಾಳಿ ಚಿತ್ರದ ಇತರೆ ತಾರಾಬಳಗದಲ್ಲಿದ್ದಾರೆ.

ಊಟಿ-ಮೈಸೂರು ರಸ್ತೆಗೂ ನುಗ್ಗಿದ ನೀರು, ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಕಪಿಲಾ ನದಿ

ನಂಜನಗೂಡು ದೇವಾಲಯದ ಮುಡಿಕಟ್ಟೆ, ಪರಶುರಾಮ ದೇವಸ್ಥಾನ ಮುಳುಗಡೆ

• ಮನೆಗಳು ಜಲಾವೃತ, ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೂ ನುಗ್ಗಿದ ನೀರು • ಸ್ಮಶಾನಗಳು ಮುಳುಗಡೆ, ಸ್ನಾನಘಟ್ಟವೂ ಜಲಾವೃತ



ಪರಶುರಾಮ ದೇವಾಲಯವು ಮುಳುಗಡೆಯಾಗಿರುವುದು.



ನಂಜನಗೂಡು, ಜು.18– ಕೇರಳದ ವೈನಾಡಿನಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಕಬಿನಿ ಜಲಾಶಯ ಸಂಪೂರ್ಣವಾಗಿ ಭರ್ತಿಗೊಂಡು ಭಾರಿ ಪ್ರಮಾಣದಲ್ಲಿ ನೀರು ಬಿಟ್ಟಿರುವುದರಿಂದ ನಂಜನಗೂಡು ತಾಲೂಕಿನಲ್ಲಿ ಕಪಿಲಾ ನದಿ ಮೈದುಂಬಿ ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿದೆ. ಊಟಿ–ಮೈಸೂರು ರಸ್ತೆಗೂ ನೀರು ನುಗ್ಗಿದ್ದು, ಸಂಚಾರ ಬಂದ್ ಆಗುವ ಆತಂಕ ಎದುರಾಗಿದೆ.

ಕಬಿನಿ ಜಲಾಶಯದಿಂದ 70 ಸಾವಿರ ಕ್ಕಿಂತಲೂ ಹೆಚ್ಚು ಕ್ಯುಸೆಕ್ ನೀರನ್ನು ನದಿಗೆ ಬಿಟ್ಟಿರುವುದರಿಂದ ನದಿ ಪಾತ್ರದ ಉದ್ದಕ್ಕೂ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಳ್ಳದಕೇರಿ ಬಡಾವಣೆಯಲ್ಲಿ 4 ಮನೆಗಳು ಜಲಾವೃತಗೊಂಡಿವೆ. ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಡಿಕಟ್ಟೆ, ಸ್ನಾನಘಟ್ಟ, ಪರಶುರಾಮ ದೇವಾಲಯ ಸಂಪೂರ್ಣವಾಗಿ ಮುಳುಗಡೆಯಾಗಿದೆ. ಅಯ್ಯಪ್ಪಸ್ವಾಮಿ ದೇವಾಲಯ, ಮಲ್ಲನಮೂಲೆ ಗುರು ಕಂಬಳೀಶ್ವರ ಮಠಕ್ಕೂ ನೀರು ತುಂಬಿಕೊಂಡಿದೆ. ಪವಾಡ ಪುರುಷ ಶ್ರೀಮಹದೇವ ತಾತಾ ಐಕ್ಯಸ್ಥಳ ಸಂಗಮ ಕ್ಷೇತ್ರ, ಸುತ್ತೂರು ಮಠದ ಸ್ನಾನಘಟ್ಟದ ಸೋಪಾನ ಕಟ್ಟೆಗಳು, ಸುತ್ತೂರು ಸೇತುವೆ ಸಂಪೂರ್ಣ ಮುಳುಗಡೆಗೊಂಡಿವೆ ಪಾರಂಪರಿಕ ಹದಿನಾರು ಕಾಲು ಮಂಟಪ ಸಂಪೂರ್ಣ ಮುಳುಗಡೆಯಾಗಿದ್ದು, ನದಿ ಪಾತ್ರದಲ್ಲಿ ಭಕ್ತರು ಪುಣ್ಯಸ್ನಾನ ಮಾಡಲು ನಿರ್ಬಂಧ ವಿಧಿಸಲಾಗಿದೆ.

ಸ್ನಾನಘಟ್ಟದ ಸುತ್ತ ಬ್ಯಾರಿಕೇಡ್ ಅಳವಡಿಸಿ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದ್ದು, ಧ್ವನಿವರ್ಧಕದ ಮೂಲಕ ನದಿ ಹತ್ತಿರ ತೆರಳದಂತೆ ಎಚ್ಚರಿಕೆ ನೀಡಲಾಗುತ್ತಿದೆ ಅಲ್ಲದೆ ನದಿ ಪಾತ್ರದಲ್ಲಿ ಯಾವುದೇ ಅನಾಹುತ ಆಗದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ರಕ್ಷಣಾ ಕಾರ್ಯ ಕೈಗೊಳ್ಳಲು ತಾಲೂಕು ಆಡಳಿತ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಸನ್ನದ್ಧವಾಗಿದೆ.

ನದಿ ಪಾತ್ರದ ಮುಳುಗಡೆ ಗ್ರಾಮಗಳಾದ ಕತ್ವಾಡಿಪುರ, ಕುಳ್ಳಂಕಯ್ಯನ ಹುಂಡಿ, ಹೆಜ್ಜಿಗೆ, ಬೊಕ್ಕಹಳ್ಳಿ, ಹಳ್ಳದಕೇರಿ, ಸರಸ್ವತಿ ಕಾಲೊನಿ ಸೇರಿದಂತೆ ಬಹುತೇಕ ಕಡೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ನದಿ ಪಾತ್ರದ ಅಚ್ಚುಕಟ್ಟು ಪ್ರದೇಶಗಳಲ್ಲಿ ರೈತರು ಕೃಷಿ ಕಾರ್ಯ ಕೈಗೊಳ್ಳದಂತೆ ಗ್ರಾಮ ಮಟ್ಟದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ನದಿ ತೀರದಲ್ಲಿ ಬೀಡುಬಿಟ್ಟಿದ್ದ ಮೀನುಗಾರರನ್ನು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚಿಸಲಾಗುತ್ತಿದೆ. ಪ್ರವಾಹ ಇನ್ನೂ ಹೆಚ್ಚಾದರೆ ಮುಳುಗಡೆಯಾಗುವ ಪ್ರದೇಶಗಳ ನಿವಾಸಿಗಳಿಗೆ ನೆರವಾಗಲು ತಾಲೂಕು ಆಡಳಿತ ನಗರದ ಗಿರಿಜಾ ಕಲ್ಯಾಣ ಮಂಟಪದಲ್ಲಿ ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ನಡೆಸಿದೆ.

ರಾಷ್ಟ್ರೀಯ ಹೆದ್ದಾರಿಗೂ ನದಿ ನೀರು: ಕಪಿಲಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಕಾರಣ ಮಲ್ಲನಮೂಲೆ ಮಠದ ಬಳಿ ಊಟಿ– ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ನೀರು ಚಾಚಿಕೊಂಡಿರುವ ಕಾರಣ ನದಿ ಹರಿವಿನ ಪ್ರಮಾಣದಲ್ಲಿ ಇನ್ನೂ ಹೆಚ್ಚಾದಲ್ಲಿ ಮೈಸೂರು–ಊಟಿ ರಸ್ತೆ ಬಂದ್ ಆಗುವ ಆತಂಕ ಎದುರಾಗಿದೆ.




ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೂ ನುಗ್ಗಿರುವ ನೀರು.

ಸ್ಮಶಾನಗಳು ಸಂಪೂರ್ಣ ಜಲಾವೃತ ನಂಜನಗೂಡಿನ ಲಿಂಗಾಭಟ್ಟರ ಗುಡಿ ಬಳಿಯ ಮುಸ್ಲಿಂ ಸ್ಮಶಾನ, ವೀರಶೈವರ ಸ್ಮಶಾನ, ಪರಶುರಾಮ ದೇವಾಲಯದ ಬಳಿಯ ಸ್ಮಶಾನ, ರಾಜಾಜಿ ಕಾಲೋನಿ, ಶ್ರೀರಾಂಪುರ, ಶಂಕರಪುರದ ಸ್ಮಶಾನಗಳಿಗೆ ನೀರು ನುಗ್ಗಿದ್ದರಿಂದಾಗಿ ಶವ ಸಂಸ್ಕಾರಕ್ಕೆ ಪರದಾಡುವಂತಾಗಿದೆ.

ಕುಡಿಯುವ ನೀರಿಗೆ ಹಾಹಾಕಾರ: ಕಪಿಲಾನದಿಯ ಪ್ರವಾಹದ ನೆರೆಯಿಂದ ದೇಬೂರು, ಗೋಳೂರು, ಕಣೆನೂರು ಗ್ರಾಮದ ನೀರೆತ್ತುವ ಘಟಕಗಳು ಜಲಾವೃತಗೊಂಡಿವೆ. ಇದರಿಂದಾಗಿ ನಗರದಾದ್ಯಂತ ಕುಡಿಯುವ ನೀರಿನ ಪೂರೈಕೆಯನ್ನು ಸ್ಥಗಿತಗೊಳಿಸಿದ್ದು ಜನತೆ ಕುಡಿಯುವ ನೀರಿಗಾಗಿ ಪರಿತಪಿಸುವಂತಾಗಿದೆ.

ಹನಗೋಡು ಸುತ್ತ ಭಾರಿ ಮಳೆ; ತತ್ತರಿಸಿದ ಜನರು

ವಾಹನ ಸವಾರರ ಪರದಾಟ, ಶಾಲಾ–ಕಾಲೇಜಿಗೆ ಹೋಗಲು ಹರಸಾಹಸ, ಹೊಲಗಳಲ್ಲಿ ನೀರು ನಿಂತು ಕೆರೆಯಂತಹ ಸ್ಥಿತಿ, ಜಾನುವಾರುಗಳಿಗೆ ಮೇವಿಗೂ ಕಷ್ಟ



ಪಿರಿಯಾಪಟ್ಟಣ ಹಾಗೂ ಹನಗೋಡು ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಸೇತುವೆಯು ಸಂಪೂರ್ಣ ಮುಳುಗಿರುವುದು.



ಕಚ್ಚುವಿನಹಳ್ಳಿ ಲೋಕೇಶ್‌ರವರಿಗೆ ಸೇರಿದ ಶುಂಠಿ ಬೆಳೆಯೂ ಸಂಪೂರ್ಣ ಮುಳುಗಿ ಹೋಗಿರುವುದು.

ಹನಗೋಡು, ಜು.18– ಕಳೆದೊಂದು ವಾರದಿಂದ ಹನಗೋಡು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಬೀಳುತ್ತಿರುವ ಭಾರಿ ಮಳೆಗೆ ಜನ ತತ್ತರಿಸಿ ಹೋಗಿದ್ದಾರೆ. ಗುರುವಾರ ಬೆಳಿಗ್ಗೆ ಶುರುವಾದ ಜಿಟಿ ಜಿಟಿ ಮಳೆ ಮಧ್ಯಾಹ್ನದವರೆಗೂ ಒಂದೇ ಸಮನೆ ಸುರಿದ ಪರಿಣಾಮ ಹೆಬ್ಬಾಳ ಗ್ರಾಮದಲ್ಲಿ ರಸ್ತೆಯ ಮೇಲೆ ತುಂಬಿ ಹರಿಯುತ್ತಿದ್ದು, ಹನಗೋಡಿನ ಹಾಗೂ ಪಿರಿಯಾಪಟ್ಟಣ ಸಂಪರ್ಕ ಕಲ್ಪಿಸುವ ಸೇತುವೆಯ ಮೇಲೆ ನೀರು ತುಂಬಿ ಹರಿಯುತ್ತಿದೆ. ವಾಹನ ಸವಾರರು ಪರದಾಡುವಂತಾಗಿದೆ.

ದಿನವಿಡೀ ಸುರಿಯುತ್ತಿರುವ ಮಳೆಯಿಂದಾಗಿ ಜನರ ಓಡಾಟಕ್ಕೆ, ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ತೆರಳಲು ಪರದಾಡುವಂತಾಗಿದೆ. ಜನರು ಹೇಳುವಂತಿಲ್ಲಾ. ಬೀದಿ ಬದಿ ವ್ಯಾಪಾರಿಗಳ ಗೋಳು ಹೇಳಲಾಗದು. ಜಾನುವಾರುಗಳ ಮೇವಿಗಾಗಿ ಪರದಾಡುತ್ತಿವೆ. ಮಳೆ ಹೀಗೆ ಮುಂದುವರಿದರೆ ತಂಬಾಕು, ಶುಂಠಿ ಮತ್ತಿತರ ಬೆಳೆ ನಷ್ಟವಾಗುವ ಸಂಭವವಿದೆ.

ವಾರದಿಂದ ಬೀಳುತ್ತಿರುವ ಜಡಿ ಮಳೆಯಿಂದಾಗಿ ಜನ ಜೀವನ ಅಸ್ತವ್ಯಸ್ತಗೊಂಡಿದೆ. ಲಕ್ಷ್ಮಣತೀರ್ಥ ನದಿ ಉಕ್ಕಿ ಹರಿಯುತ್ತಿದೆ. ಕೊಡಗಿನಲ್ಲಿ ಬೀಳುತ್ತಿರುವ ಭಾರಿ ಮಳೆಯಿಂದಾಗಿ ಲಕ್ಷ್ಮಣತೀರ್ಥ ನದಿ ಉಕ್ಕಿ ಹರಿಯುತ್ತಿದ್ದು, ಹನಗೋಡು ಅಣೆಕಟ್ಟಿನ ಮೇಲೆ 4 ಸಾವಿರ ಕ್ಯೂಸೆಕ್ಸ್ ನೀರು ಹರಿಯುತ್ತಿದ್ದು, ಮನೋಹರ ದೃಶ್ಯ ಸೃಷ್ಟಿಸಿದೆ.

ಮಳೆ ಇಲ್ಲದೆ ಪರಿತಪಿಸುತ್ತಿದ್ದ ತಂಬಾಕು ಬೆಳೆಗಾರರು ಆರಂಭದಲ್ಲಿ ಬಿದ್ದ ಮಳೆಯಿಂದ ಸಂತಸಗೊಂಡಿದ್ದರು. ಆದರೆ ಇದೀಗ ಹೆಚ್ಚು ಮಳೆಯಾಗುತ್ತಿರುವುದರಿಂದಾಗಿ ಸುರಿದ ಮಳೆಗೆ ಜಮೀನುಗಳಲ್ಲಿ ಕೆರೆ ಸೃಷ್ಟಿಸಿದೆ. ನೂರಾರು ಎಕರೆ ಪ್ರದೇಶದಲ್ಲಿ ನಾಟಿ ಮಾಡಿದ್ದ ತಂಬಾಕು, ಅಲ್ಲಲ್ಲಿ ಶುಂಠಿ ಬೆಳೆಗೂ ಹಾನಿಯಾಗಿದೆ.

ಮನೆಯಿಂದ ಹೊರ ಬರಲಾಗದ ಸ್ಥಿತಿ ನಿರ್ಮಾಣವಾಗಿದೆ. ದ್ವಿಚಕ್ರ ವಾಹನ ಸವಾರರ ಪಾಡು

ಕಚ್ಚುವಿನಹಳ್ಳಿ ಲೋಕೇಶ್‌ರವರಿಗೆ ಸೇರಿದ ಶುಂಠಿ, ಚಂದ್ರಶೇಖರ್ ಅವರಿಗೆ ಸೇರಿದ ಜೋಳ ಹಾಗೂ ಹನಗೋಡು ಭಾಗದ ಅನೇಕ ರೈತರ ಬೆಳೆದ ಬೆಳೆಯೂ ಸಂಪೂರ್ಣ ಮುಳುಗಿ ಹೋಗಿದ್ದು ನೀರು ಹೊರಗಡೆ ಹಾಕಲು ಹರಸಾಹಸ ಪಡುವಂತಾಗಿದೆ.

ಹಾನಿ ಪ್ರದೇಶಕ್ಕೆ ಅಧಿಕಾರಿಗಳು ಭೇಟಿ: ತಹಸೀಲ್ದಾರ್ ಮಂಜುನಾಥ್ ಹಾನಿಗೊಳಗಾಗಿದ್ದ ಪ್ರದೇಶಕ್ಕೆ ಭೇಟಿ ನೀಡಿ, ಸಿಂಡೇನಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ನೀರು ತುಂಬಿಹೋಗಿದನ್ನು ಕಂಡು ಶೀಘ್ರವೇ ನೀರನ್ನು ಹೊರಗಡೆ ಹಾಕಲು ಅಧಿಕಾರಿಗಳಿಗೆ ಸೂಚನೆ ನೀಡಿದರು ನಂತರ ಬೆಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡಿದರು.

ಪಿರಿಯಾಪಟ್ಟಣದಲ್ಲಿ ಧಾರಾಕಾರ ಮಳೆ; ಜನಜೀವನ ಅಸ್ತವ್ಯಸ್ತ

ತಂಬಾಕು, ಮೆಕ್ಕೆಜೋಳ ಉಳಿಸಲು ರೈತರ ಹರಸಾಹಸ, ಶಾಲೆಗೆ ಹೋಗಲು ಕಷ್ಟ

ಪಿರಿಯಾಪಟ್ಟಣ, ಜು.18– ತಾಲೂಕಿನಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ.

ತಾಲೂಕಿನಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿದ್ದು, ನದಿ, ತೊರೆಗಳು, ಕಟ್ಟೆಗಳು ತುಂಬಿ ತುಳುಕುತ್ತಿವೆ. ರೈತರು ಮೆಕ್ಕೆಜೋಳ, ತಂಬಾಕು ಮುಂತಾದ ಬೆಳೆಗಳನ್ನು ಬೆಳೆದಿದ್ದು, ನೀರು ತುಂಬಿ ನಿಂತಿದೆ. ತಂಬಾಕು ಮುರಿಯುವ ಕಾಲ ಬಂದಿರುವುದರಿಂದ ತಂಬಾಕು ಎಲೆಗಳನ್ನು ಮುರಿದು ಬೇಯಿಸಿ ಹದ ಮಾಡಲು ರೈತರು ಹರಸಾಹಸ ಪಡುತ್ತಿದ್ದಾರೆ. ಇತ್ತ ಮೆಕ್ಕೆಜೋಳಕ್ಕೆ ಸೈನಿಕ ಹುಳ ಕಾಟ ಹೆಚ್ಚಾಗಿದ್ದು, ಕೀಟನಾಶಕ ಸಿಂಪಡಿಸಲು ಆಗದೆ ರೈತರನ್ನು ಚಿಂತೆಗೀಡು ಮಾಡಿದೆ.

ಎಲ್ಲದರ ಮಧ್ಯೆ ಶಾಲಾ ವಿದ್ಯಾರ್ಥಿಗಳು ಮಳೆಯ ನಡುವೆ ನಡೆದು ಶಾಲೆಗೆ ಹೋಗಬೇಕಾಗಿದೆ. ಪೋಷಕರು ತಮ್ಮ ಮಕ್ಕಳನ್ನು ದ್ವಿಚಕ್ರ ವಾಹನ ಹಾಗೂ ಛತ್ರಿಗಳ ಹಿಡಿದು ಕರೆದುಕೊಂಡು ಹೋಗಿ ಬಿಡುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಇನ್ನು ಕೆಲ ದಿನಗಳ ಕಾಲ ಇದೇ ರೀತಿ ಮಳೆ ಬಂದರೆ ತಂಬಾಕು ಮತ್ತು ಮೆಕ್ಕೆಜೋಳ ಮಳೆಯಿಂದ ಭಾರಿ ಹಾನಿಯಾಗಲಿದೆ ಎಂದು ರೈತರು ಚಿಂತೆಗೀಡಾಗಿದ್ದಾರೆ. ಬಡ ಕೂಲಿ ಕಾರ್ಮಿಕರು, ಬಡ ಜನರು ಜೀವನವನ್ನು ಸಹ ನಡೆಸಲು ಕಷ್ಟಪಡುವಂತಾಗಿದೆ. ಕಳೆದ ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆ ವ್ಯಾಪಾರಸ್ಥರು, ತರಕಾರಿ ಮಾರಾಟಗಾರರ ಮೇಲೂ ಪರಿಣಾಮ ಬೀರಿದೆ. ಪಿರಿಯಾಪಟ್ಟಣ ತಹಶೀಲ್ದಾರ್ ಕುಂಜಿ ಅಹಮದ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ರವಿ ಪ್ರಸನ್ನ ಅವರು ಮಾತನಾಡಿ, ಇಂದು ಸಂಜೆ ಮಳೆಯ ವಾತಾವರಣ ನೋಡಿಕೊಂಡು ಶುಕ್ರವಾರ ಶಾಲೆ ಮಕ್ಕಳಿಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ರಜೆ ಘೋಷಿಸುವ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೆರೆಯಲ್ಲಿ ಸಿಲುಕಿಕೊಂಡಿದ್ದ ರೈತರು, ಎತ್ತುಗಳ ರಕ್ಷಣೆ



ಭಾರಿ ಪ್ರಮಾಣದಲ್ಲಿ ಕೆರೆಗೆ ನೀರು ಹರಿದು ಬಂದ ಕಾರಣ ತಂಬಾಕು ಎಲೆಗಳನ್ನು ತುಂಬಿಕೊಂಡು ಎತ್ತಿನಗಾಡಿಯಲ್ಲಿ ಬರುತ್ತಿದ್ದ ನಾಲ್ವರು ರೈತರು ನೀರಿನ ಹರಿವಿನಲ್ಲಿ ಸಿಲುಕಿಕೊಂಡಿದ್ದ ಘಟನೆ ತಾಲೂಕಿನ ಕೊಣಸೂರು ಗ್ರಾಮದಲ್ಲಿ ಇಂದು ಬೆಳಿಗ್ಗೆ ಸಂಭವಿಸಿದೆ.

ತಕ್ಷಣ ರೈತರನ್ನು ಮತ್ತು ಎತ್ತುಗಳನ್ನು ಸ್ಥಳೀಯರು ರಕ್ಷಿಸಿದ್ದಾರೆ. ಆದರೆ ಜಮೀನಿಗೆ ಹೋಗಲು ಬೇರೆ ಕಡೆ ಜಾಗವಿಲ್ಲದೆ ಕೆರೆಗೆ ನೀರು ಹರಿದು ಬರುವ ಜಾಗದಲ್ಲೇ ರೈತರು ಓಡಾಡಬೇಕು. ತಂಬಾಕು ಎಲೆಗಳನ್ನು ಮುರಿದು ಬೇಯಿಸದಿದ್ದರೆ ತಂಬಾಕು ಎಲೆ ಕರಗಿ ಹೋಗುತ್ತದೆ. ದಿನವೂ ರೈತರು ಈ ಹಳ್ಳದಲ್ಲೇ ಓಡಾಡುವುದರಿಂದ ರೈತರಿಗೆ ಬೇರೆ ಕಡೆ ರಸ್ತೆ ಮಾಡಿಕೊಡಬೇಕೆಂದು ತಾಲೂಕು ಆಡಳಿತವನ್ನು ತಾಲೂಕು ರೈತ ಸಂಘದ ಅಧ್ಯಕ್ಷ ಕೊಣಸೂರು ಆನಂದ್, ತಾಲೂಕು ಪಂಚಾಯತಿ ಮಾಜಿ ಉಪಾಧ್ಯಕ್ಷ ಯೋಗೇಶ್ ವೀರಪ್ಪ ಒತ್ತಾಯಿಸಿದ್ದಾರೆ.

ಸೇತುವೆ ಮುಳುಗಡೆ




ಕಬಿನಿ ಜಲಾಶಯ ನೀರಿನ ಮಟ್ಟ ಏರಿಕೆ ಆದ ಕಾರಣ ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಹೋಬಳಿ ನಂಜನಗೂಡು–ಹುಲ್ಲಳ್ಳಿ ರಸ್ತೆಯ ಹೊಮ್ಮರಗಳ್ಳಿ ಸೇತುವೆ ಮುಳುಗಡೆಯಾಗಿದೆ. ಸೇತುವೆ ಮುಳುಗಡೆಯಾಗಿರುವುದರಿಂದ ದಿನನಿತ್ಯ ಅದೇ ಮಾರ್ಗದಲ್ಲಿ ಚಲಿಸುವ ಅಕ್ಕಪಕ್ಕದ ಗ್ರಾಮದ ಶಾಲೆ ಮಕ್ಕಳು, ರೈತರಿಗೆ, ಸಾರ್ವಜನಿಕರಿಗೆ ತೊಂದರೆಯಾಗಿದೆ. ಸಾರಿಗೆ ಸಂಚಾರ ಅಸ್ತವ್ಯಸ್ತಗೊಂಡಿದೆ.

ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದಲ್ಲಿ ಆಷಾಢ ಪೂಜೆ



ಮೂಗೂರು, ಜು.18– ಇಲ್ಲಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ಆಷಾಢ ಮಾಸದ ವಿಶೇಷ ಪೂಜಾ ಸಂಭ್ರಮ ಶುಕ್ರವಾರ ನಡೆಯಲಿದೆ.

ಪ್ರತಿ ವರ್ಷದಂತೆ ಈ ಬಾರಿಯೂ ಆಷಾಢ ಮಾಸದ 2ನೇ ಶುಕ್ರವಾರ ವಿಶೇಷ ಪೂಜೆಗೆ ಅಪಾರ ಸಂಖ್ಯೆಯಲ್ಲಿ ಭಕ್ತರ ಆಗಮಿಸುವ ನಿರೀಕ್ಷೆಯಿದ್ದು, ಹಳೆಯ ಮೈಸೂರು ಭಾಗದ ಧಾರ್ಮಿಕ ಕ್ಷೇತ್ರದಲ್ಲೊಂದಾದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಆಷಾಢ ಮಾಸದ ಹೂವಿನ ಸೀರೆ ಅಲಂಕಾರ ಹಾಗೂ ಶ್ರೀ ದೇಶೇಶ್ವರ ಸ್ವಾಮಿ ದೇಗುಲದ ಶ್ರೀ ಪಾರ್ವತಿ ಅಮ್ಮನವರ ವಿಳ್ಳೆದೆಲೆ, ಸೀರೆ ಅಲಂಕಾರ ತನ್ನದೇ ಆದ ರೀತಿಯಲ್ಲಿ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ.



ವಿಜೃಂಭಣೆಯ ಆಷಾಢ ಮಾಸದ ಕಂಡಾಯ ಉತ್ಸವ

ತಿ.ನರಸೀಪುರ, ಜು.18– ಆಷಾಢ ಮಾಸದ ಅಂಗವಾಗಿ ಶ್ರೀ ಕುರುಬನಕಟ್ಟೆ ಶ್ರೀ ಮಂಟೇಸ್ವಾಮಿ ಕಂಡಾಯ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಕಡ್ಡರಂಗನ ಬೀದಿ ವೀರ ಸಂಗೊಳ್ಳಿರಾಯಣ್ಣ ಯುವಕರ ಬಳಗ ಮತ್ತು ಕನಕ ಯುವ ಸೇನಾ ಸಮಿತಿ ವತಿಯಿಂದ ನಾಲ್ಕನೇ ವರ್ಷದ ಶ್ರೀ ಕುರುಬನಕಟ್ಟೆಯ ಶ್ರೀ ಮಂಟೇಸ್ವಾಮಿ ಕಂಡಾಯ ಉತ್ಸವವನ್ನು ಇಂದು ಸಂಜೆ ಕಾವೇರಿ–ಕಪಿಲ ನದಿಯ ದಡದಲ್ಲಿರುವ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯ ಆವರಣದಲ್ಲಿ ಆಚರಿಸಲಾಯಿತು. ಮೆರವಣಿಗೆಯು ಪಟ್ಟಣದ ಕಡ್ಲೆ ರಂಗನಬೀದಿ (ಹಳೆ ಕುರುಬಗೇರಿ) ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಾಗಿತು. ಭಕ್ತರು ಬೀದಿಗಳಲ್ಲಿ ರಂಗೋಲಿ ಬಿಡಿಸಿ ವಿದ್ಯುತ್ ದೀಪಾಲಂಕಾರದೊಂದಿಗೆ ಮೆರವಣಿಗೆಯನ್ನು ಬರಮಾಡಿಕೊಂಡರು. ಕಳೆದ ನಾಲ್ಕು ವರ್ಷದಿಂದಲೂ ಮೆರವಣಿಗೆ ಮಾಡಿಕೊಂಡು ಬರಲಾಗುತ್ತಿದೆ.


ನಂತರ ನಿಗದಿತ ಸ್ಥಳದಲ್ಲಿ ಪ್ರತಿಷ್ಠಾಪಿಸಿ ಸಾರ್ವಜನಿಕರ ದರ್ಶನ ಹಾಗೂ ಪೂಜೆಗೆ ಅನುವು ಮಾಡಿಕೊಡಲಾಯಿತು. ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್, ವಿಧಾನಪರಿಷತ್ ಸದಸ್ಯ ಯತೀಂದ್ರ ಭಾಗವಹಿಸಿದ್ದರು.

ಬೈಕಿಗೆ ಬಸ್ ಡಿಕ್ಕಿ; ಓರ್ವ ಸಾವು

ಸರಗೂರು, ಜು.18– ಕೆಎಸ್‌ಆರ್‌ಟಿಸಿ ಬಸ್ಸೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸಾವನ್ನಪ್ಪಿ ಮತ್ತೋರ್ವ ಗಾಯಗೊಂಡಿರುವ ಘಟನೆ ತಾಲೂಕಿನ ಗೋತಕಾಲದಹುಂಡಿ ಬಳಿ ಸಂಭವಿಸಿದೆ.

ಹಲಸೂರು ಗ್ರಾಮದ ಶಿವಣ್ಣನಾಯಕ ಅವರ ಪುತ್ರ ಶಿವು (24) ಸಾವನ್ನಪ್ಪಿದ್ದು, ಗಾಯಗೊಂಡಿರುವ ರಾಜನಾಯಕ ಅವರ ಪುತ್ರ ಲೋಕೇಶ್ (30) ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಶಿವು ಮತ್ತು ಲೋಕೇಶ್ ಅವರುಗಳು ಬೈಕಿನಲ್ಲಿ ಸರಗೂರಿನಿಂದ ಹಲಸೂರು ಗ್ರಾಮಕ್ಕೆ ತೆರಳುತ್ತಿದ್ದಾಗ ಬಸ್ಸು ಡಿಕ್ಕಿ ಹೊಡೆದಾಗ ಈ ದುರಂತ ಸಂಭವಿಸಿದೆ. ಸ್ಥಳಕ್ಕೆ ಸರಗೂರು ಪೊಲೀಸ್ ಠಾಣೆಯ ಪಿಎಸ್‌ಐ ಗೋಪಾಲ್, ಸಿಬ್ಬಂದಿಗಳಾದ ಇಮ್ರಾನ್ ಮಹಮದ್, ಆನಂದ್, ದಿಲೀಪ್, ಚಂದ್ರು ಅವರುಗಳು ಭೇಟಿ ನೀಡಿದ್ದರು.

ಮನೆ ಗೋಡೆ ಕುಸಿದು ಬೀದಿಗೆ ಬಿದ್ದ ಕುಟುಂಬ



ಭಾರಿ ಮಳೆಗೆ ಗೋಡೆ ಸಂಪೂರ್ಣ ಹಾಳಾಗಿರುವುದು.

ದಿನವಿಡೀ ಸುರಿಯುತ್ತಿರುವ ಭಾರಿ ಮಳೆಗೆ ಮನೆ ಗೋಡೆ ಬಿದ್ದ ಪರಿಣಾಮ ಲಕ್ಷ್ಮಮ್ಮ ಲೇ.ಚನ್ನನಾಯಕ ಹಾಗೂ ರಂಗವ್ವ ಚನ್ನನಾಯಕ, ಕುಟುಂಬಸ್ಥರು ವಾಸಿಸಲು ಯೋಗ್ಯ ಮನೆಯಿಲ್ಲದೆ ಪರದಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಕುಟುಂಬದ ಸದಸ್ಯರ ಜೀವನ ಅಸ್ತವ್ಯಸ್ತವಾಗಿದೆ.

ಸರಗೂರು, ಜು.18– ಪಟ್ಟಣದ 9ನೇ ವಾರ್ಡ್‌ನ ಲಕ್ಷ್ಮಮ್ಮ ಲೇ.ಚನ್ನನಾಯಕ ಅವರ ಮನೆಯ ಗೋಡೆ ರಾತ್ರಿ ಸುರಿದ ಭಾರಿ ಮಳೆಗೆ ಸಂಪೂರ್ಣ ಹಾಳಾಗಿದ್ದು, ಸ್ಥಳಕ್ಕೆ ಪಟ್ಟಣ ಪಂಚಾಯಿತಿ ಸದಸ್ಯ ಶ್ರೀನಿವಾಸ್ ಭೇಟಿ ನೀಡಿ, ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗೆ ತಿಳಿಸಿ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಮನೆಯಲ್ಲಿದ್ದ ರಾಗಿ, ಹುರುಳಿ ಇನ್ನಿತರ ದಿನಸಿ ಪದಾರ್ಥ, ಬಟ್ಟೆ, ಪೀಠೋಪಕರಣಗಳು ಎಲ್ಲವೂ ನೀರಿನಲ್ಲಿ ಮುಳುಗಿದೆ. ರಾತ್ರಿ ಟಾರ್ಪಲ್ ಕಟ್ಟಿಕೊಂಡು ಕುಟುಂಬದವರು ಮನೆಯ ಒಂದು ಮೂಲೆಯಲ್ಲಿ ಕಾಲದೂಡಿದ್ದಾರೆ.


ಕಬಿನಿಯಿಂದ ನೀರು ಬಿಡುಗಡೆ: ಪ್ರವಾಹದ ಭೀತಿ

ಗ್ರಾಮಗಳು ಜಲಾವೃತ, ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲು ಸಿದ್ಧತೆ

ಸೇತುವೆಗಳು ಮುಳುಗಡೆ, ರಸ್ತೆ ಸಂಚಾರ ಬಂದ್, ಮನೆಗಳ ಕುಸಿತ



ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಮನೆ ಮುಳುಗಡೆ.



ಕಬಿನಿ ಜಲಾಶಯದ ಮುಖ್ಯ ನಾಲ್ಕು ಕ್ರಸ್ಟ್‌ಗೇಟ್‌ಗಳಿಂದ 70000 ಕ್ಯುಸೆಕ್ ನೀರನ್ನು ನದಿಗೆ ಬಿಡುತ್ತಿರುವುದು.

ಹೆಚ್.ಡಿ.ಕೋಟೆ, ಜು.18– ಕಬಿನಿ ಜಲಾಶಯದ ಒಳಹರಿವು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ 70 ಸಾವಿರ ಕ್ಯುಸೆಕ್‌ಗೂ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಟ್ಟಿರುವುದರಿಂದ ಪ್ರವಾಹದ ಭೀತಿ ಎದುರಾಗಿದೆ.

ಕೇರಳದ ವೈನಾಡಿನಲ್ಲಿ ಅತಿ ಹೆಚ್ಚು ಮಳೆ ಆಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯಕ್ಕೆ 53,000 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದ ನಾಲ್ಕು ಕ್ರಸ್ಟ್‌ಗೇಟ್‌ಗಳಿಂದ 70000 ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಇದರಿಂದ ನದಿಪಾತ್ರದ ಕೆಲ ಗ್ರಾಮಗಳು ಜಲಾವೃತಗೊಂಡಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ದೋಣಿ ಸಂಚಾರ ಬಂದ್: ಹೆಚ್.ಡಿ.ಕೋಟೆ ತಾಲೂಕಿನ ಕೇರಳ ಗಡಿ ಭಾಗವಾದ ದೊಡ್ಡಬೈರನ ಕುಪ್ಪೆಯಿಂದ ಕಬಿನಿ ಹಿನ್ನೀರಿನಲ್ಲಿ ಪ್ರವಾಹವನ್ನು ಲೆಕ್ಕಿಸದೆ ದೋಣಿ ಮೂಲಕ ಕೇರಳ ರಾಜ್ಯಕ್ಕೆ ಜನರು ಓಡಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ತಹಶೀಲ್ದಾರ್ ಶ್ರೀನಿವಾಸ್ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಪ್ರವಾಹದ ಬಗ್ಗೆ ಜಾಗೃತಿ ಮೂಡಿಸಿ ದೋಣಿ ಸಂಚಾರವನ್ನು ಸಂಪೂರ್ಣ ರದ್ದುಗೊಳಿಸಿದ್ದಾರೆ.

ಪ್ರವಾಹ ಭೀತಿ, ಮನೆಗಳು ಮುಳುಗಡೆ: ಕಬಿನಿ ಜಲಾಶಯದಿಂದ ಭಾರಿ ಪ್ರಮಾಣದ ನೀರು ಬಿಟ್ಟಿರುವುದರಿಂದ ಡಿಬಿಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಆನೆಮಾಳ, ಮಚೂರು, ತಿಮ್ಮನಹೊಸಳ್ಳಿ ಇನ್ನೂ ಹಲವಾರು ಗ್ರಾಮಗಳಲ್ಲಿ ಮನೆಗಳಿಗೆ ನೀರು ನುಗ್ಗುವ ಸಾಧ್ಯತೆಗಳಿವೆ. ಅಂತವರಿಗಾಗಿ ಡಿ.ಬಿ.ಕುಪ್ಪೆ ಸರ್ಕಾರಿ ಪ್ರೌಢಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದ್ದು, ಅವರುಗಳನ್ನು ಕೇಂದ್ರಕ್ಕೆ ರವಾನೆ ಮಾಡಲಾಗುತ್ತಿದೆ ಎಂದು ಹೆಚ್.ಡಿ.ಕೋಟೆ ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದ್ದಾರೆ.



ಬಿದರಹಳ್ಳಿ ಸರ್ಕಲ್ ಗ್ರಾಮಸ್ಥರು ಮನೆಯಲ್ಲಿರುವ ವಸ್ತುಗಳನ್ನು ಬೇರೆ ಕಡೆಗೆ ಹೊತ್ತೊಯ್ದಿದ್ದಾರೆ.

ಕಾಳಜಿ ಕೇಂದ್ರ ತೆರೆದಿಲ್ಲ: ಕಬಿನಿ ಜಲಾಶಯದಿಂದ ನಾಲ್ಕು ಕ್ರಸ್ಟ್‌ಗೇಟ್‌ಗಳಿಂದ 70000 ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗಿದ್ದು, ಕಬಿನಿ ಅಣೆಕಟ್ಟಿನ ಮುಂಭಾಗ ಇರುವ ಬಿದರಹಳ್ಳಿ ಸರ್ಕಲ್ ಗ್ರಾಮಸ್ಥರುಗಳ ಮನೆಗಳಿಗೆ ನೀರು ನುಗ್ಗುತ್ತಿದ್ದು, ಗ್ರಾಮಸ್ಥರು ಭಯ ಭೀತಿಗೊಂಡು ತಮ್ಮ ಮನೆಯಲ್ಲಿರುವ ವಸ್ತುಗಳನ್ನು ಬೇರೆ ಕಡೆಗೆ ಹೊತ್ತೊಯ್ದಿದ್ದಾರೆ.

ಜನತೆಗೆ ಯಾವುದೇ ಪ್ರವಾಹದಿಂದ ತೊಂದರೆ ಆಗದ ರೀತಿಯಲ್ಲಿ ನೋಡಿಕೊಳ್ಳಿ ಎಂದು ಸಭೆ ಕರೆದು ಜಿಲ್ಲಾಧಿಕಾರಿಗಳು ಸೂಚಿಸಿದ್ದರೂ ಸರಗೂರು ತಾಲೂಕಿನ ತಹಸಿಲ್ದಾರ್ ರುಕೀಯ ಬೇಗಂ ಅವರು ಯಾವುದೇ ಕಾಳಜಿ ಕೇಂದ್ರವನ್ನು ತೆರೆಯದೆ. ಬೇಜವಾಬ್ದಾರಿತನ ತೋರಿಸಿದ್ದಾರೆ ಎಂದು ಬಿದರಹಳ್ಳಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಸ್ತೆ ಸಂಚಾರ ಬಂದ್: ಜಲಾಶಯದ ಮುಂಭಾಗ ಇರುವ ಸೇತುವೆ ಮುಳುಗಡೆಯಾಗಿದೆ, ಬಿದರಹಳ್ಳಿ ಸರ್ಕಲ್‌ನಿಂದ ಸರಗೂರು ಕಡೆಗೆ ಹೋಗುವ ರಸ್ತೆ ಸಂಪೂರ್ಣ ಮುಳುಗಡೆಯಾಗಿದೆ. ಮಾದಾಪುರ, ಚೆಕ್ಕೂರು ಕಡೆಗೆ ಹೋಗುವ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ.

ಮನೆಗಳು ಕುಸಿತ: ಬಸಾಪುರ ಗ್ರಾಮದ ನಿವಾಸಿ ನಾಯ್ಕ ಅವರ ಮನೆ ಸಂಪೂರ್ಣ ಕುಸಿದಿದೆ. ಎಚ್.ಮಠಕೆರೆ ಗ್ರಾಮದ ನಿವಾಸಿ ಸೋಮನಾಯಕ, ತೊರವಳ್ಳಿ ಗ್ರಾಮದ ರಾಜು, ಕೊಲ್ಲೆಗೌಡನಹಳ್ಳಿ ಗ್ರಾಮದ ನಿವಾಸಿ ಬಸವಯ್ಯ, ಕನಕನಹಳ್ಳಿ ಕಿಟ್ಟು ಗ್ರಾಮದ ನಿವಾಸಿ ನಾಗರತ್ನ ಅವರ ಮನೆಗಳು ಕುಸಿತಗೊಂಡಿವೆ.

ಛಲದೊಂದಿಗೆ ಪರಿಶ್ರಮಪಟ್ಟರೆ ಯಾವ ವಯಸ್ಸಲ್ಲೂ ಸಾಧನೆ ಸಾಧ್ಯ

ವಿದ್ಯಾರ್ಥಿಗಳಿಗೆ ಮೌಂಟ್ ಎವರೆಸ್ಟ್ ಯಶಸ್ವಿ ಪರ್ವತಾರೋಹಿ ಡಾ|| ಉಷಾ ಹೆಗ್ಡೆ ಕಿವಿಮಾತು

ಮೈಸೂರು,ಜು.18(ಎಂಟಿವೈ)– ಪರಿಶ್ರಮದೊಂದಿಗೆ ಛಲ ಇದ್ದರೆ ಯಾವ ವಯಸ್ಸಲ್ಲಾದರೂ ಸಾಧನೆ ಮಾಡಬಹುದು ಎಂದು ಮೌಂಟ್ ಎವರೆಸ್ಟ್ ಪರ್ವತಾರೋಹಿ ಡಾ. ಉಷಾ ಹೆಗ್ಡೆಅಭಿಪ್ರಾಯಪಟ್ಟಿದ್ದಾರೆ

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಗುರುವಾರ ನಡೆದ ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಕ್ಷೇತ್ರದಲ್ಲಾದರೂ ಸಾಧನೆ ಮಾಡಬೇಕೆಂದರೆ ಮೊದಲು ಛಲ ಇರಬೇಕು. ಅದಕ್ಕೆ ಪರಿಶ್ರಮ ಪಡಬೇಕು. ಸಾಧನೆ ಮಾಡಬೇಕಾದರೆ ವಯಸ್ಸು ಅಡ್ಡಿಯಾಗುವುದಿಲ್ಲ. ಅದು ಗಣನೆಗೂ ಬರುವುದಿಲ್ಲ. ವಯಸ್ಸು ಎನ್ನುವುದು ಕೇವಲ ಸಂಖ್ಯೆಯಷ್ಟೇ. ಪರಿಶ್ರಮ, ಛಲ ಇದ್ದರೆ ಯಾವ ವಯಸ್ಸಿನಲ್ಲಾದರೂ ಸಾಧನೆ ಮಾಡಬಹುದು. ಇದನ್ನು ಯುವ ಸಮುದಾಯ, ವಿದ್ಯಾರ್ಥಿಗಳು ಗಮನದಲ್ಲಿಟ್ಟುಕೊಂಡು ನಿಮಗಿಷ್ಟದ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಪರಿಶ್ರಮಕ್ಕೆ ಫಲವಿದೆ: ಎಲ್ಲರಲ್ಲೂ ಪ್ರತಿಭೆ ಇದ್ದೇ ಇರುತ್ತದೆ. ಅದನ್ನು ಸಮಾಜಕ್ಕೆ ಪರಿಚಯಿಸುವುದಕ್ಕೆ ಪ್ರಯತ್ನಿಸಬೇಕು. ಉತ್ತಮ ಮಾರ್ಗದಲ್ಲಿ ಸಾಗಿ ಸಿಕ್ಕ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಜನಿಸಿದ ನಾನು ಸಾಧನೆ ಮಾಡಲೇಬೇಕೆಂಬ ಹಂಬಲದಿಂದ ನಗರಕ್ಕೆ ಬಂದೆ; ಹಾಗೆ ಸಾಧಿಸಿದ್ದೇನೆ. ನನ್ನ ತಂದೆಯೇ ನನಗೆ ಸ್ಫೂರ್ತಿ. ನಿಮ್ಮಲ್ಲಿರುವ ಕಲೆ, ಪ್ರತಿಭೆಯನ್ನು ಪ್ರದರ್ಶಿಸುವ ಗುರಿ ಹೊಂದಿರಬೇಕು. ಪರಿಶ್ರಮ ಮತ್ತು ಶ್ರದ್ಧೆಯಿಂದ ಸಿದ್ಧತೆ ಮಾಡಿಕೊಂಡರೆ ಒಂದಲ್ಲ ಒಂದು ದಿನ ತಕ್ಕ ಪ್ರತಿಫಲ ದೊರೆಯುತ್ತದೆ. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಳ್ಳಲು ಮುಂದಾಗಬೇಕು ಎಂದರು.

ಗುರಿ–ಗುರು ಮುಖ್ಯ: ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಸಿಗುವುದು ಕಡಿಮೆ. ಆದರೆ, ಸಾಧನೆ ಮಾಡಿದಾಗಷ್ಟೇ ಗುರುತಿಸುತ್ತದೆ. ಸಮಾಜ ಗುರುತಿಸುವ ಕೆಲಸ ಮಾಡಲು ಎಲ್ಲರೂ ಪ್ರಯತ್ನಿಸಬೇಕು. ದೊಡ್ಡ ಮಟ್ಟದ ಗುರಿ ಹೊಂದಿದ್ದಾಗ ಮಾತ್ರ ಏನಾದರು ಸಾಧಿಸಲು ಸಾಧ್ಯವಾಗುತ್ತದೆ. ಸಾಧನೆಗೆ ಗುರಿ ಮತ್ತು ಗುರು ಮುಖ್ಯ. ನಾನು ಮೌಂಟ್ ಎವರೆಸ್ಟ್ ಶಿಖರವನ್ನು ಏರಲು 3 ವರ್ಷಗಳ ಸತತ ಪ್ರಯತ್ನ ನಡೆಸಿದ್ದೆ. ಏಳುಬೀಳುಗಳ ನಡುವೆ ಕೊನೆಗೂ ನನ್ನ ಗುರಿಯನ್ನು ಸಾಧಿಸುವಲ್ಲಿ ಸಫಲನಾಗಿದ್ದೇನೆ ಎಂದು ತಿಳಿಸಿದರು.

ಮ್ಯಾರಥಾನ್, ಸೈಕ್ಲಿಂಗ್, ಈಜು ಕಷ್ಟಕರವಾಗಿರುತ್ತದೆ. ಅಭ್ಯಾಸವೇ ಇವುಗಳ ಪ್ರಮುಖ ಮೂಲ. ಹಾಗಾಗಿ ಯಾವುದೇ ಕೆಲಸ ಕೈಗೊಳ್ಳಬೇಕಾದರೂ ಅಭ್ಯಾಸ ಮತ್ತು ತಯಾರಿ ಮುಖ್ಯ ಪಾತ್ರವಹಿಸುತ್ತದೆ. ಎವರೆಸ್ಟ್ ಎಂದರೆ ಎಲ್ಲರ ತಲೆಯಲ್ಲಿ ಮೊದಲು ಬರುವ ಮಾತೇ ಸಾವು. ಆ ಶಿಖರ ಏರುವುದೇ ಒಂದು ಸವಾಲು. ಆ ಸವಾಲನ್ನು ನಾನು ಸ್ವೀಕರಿಸಿ ಇಂದು ಜಯಶಾಲಿಯಾಗಿದ್ದೇನೆ. ಎಲ್ಲರೂ ಕನಸು ಕಾಣುತ್ತಾರೆ. ಆದರೆ ಆ ಕನಸು ನನಸಾಗುವುದು ಕೆಲವರದಷ್ಟೆ, ಆ ಕನಸು ನನಸಾಗಲು ಕಾರಣಕರ್ತರು ನಾವಾಗಿರಬೇಕು. ಧೈರ್ಯ ಮತ್ತು ಸದೃಢತೆ ನಮ್ಮೊಂದಿಗಿದ್ದಾಗ ಎಂತಹ ಸವಾಲನ್ನಾದರೂ ಗೆಲ್ಲಬಹುದು ಎಂದು ತಿಳಿಸಿದರು.

ಎನ್‌ಐಇ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕಿ ಡಾ. ಆರ್. ಕಾವ್ಯ ಮಾತನಾಡಿ, ಓದು ಜೀವನದ ಅವಿಭಾಜ್ಯ ಅಂಗ ಅದರ ಜೊತೆಗೆ ಕ್ರೀಡೆಯೂ ನಮ್ಮ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ. ಕೇವಲ ನಾಲ್ಕು ಗೋಡೆಗಳ ಮಧ್ಯೆ ಕಲಿಯದೇ, ದೈಹಿಕ ಶಿಕ್ಷಣವನ್ನೂ ಮೈಗೂಡಿಸಿಕೊಳ್ಳಬೇಕು. ಗುರಿಯೊಂದಿಗೆ ಉತ್ತಮ ಸ್ಥಾನಕ್ಕೆ ಏರಲು ಪ್ರಯತ್ನಿಸಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಎಂ.ಪಿ.ರಾಜೇಶ್ವರಿ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನ ಮೂರ್ತಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಶಿವಕುಮಾರ್,ಎನ್. ಬಿ ಹುಚಗೊಂಡರ್, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ವೈ ಎಸ್ ಶ್ವೇತಾ, ಶೈಕ್ಷಣಿಕ ಡೀನ್ ರೇಚಣ್ಣ, ಗ್ರಂಥಪಾಲಕ ಮಂಜುನಾಥ್, ಜೀವಶಾಸ್ತ್ರ ವಿಭಾಗದ ಉಪನ್ಯಾಸಕಿ ಎಂ. ಎನ್ ಪುಷ್ಪಲತಾ, ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಗುರುವಾರ ನಡೆದ ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಯನ್ನು ಪರ್ವತಾರೋಹಿ ಡಾ. ಉಷಾ ಹೆಗ್ಡೆ ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ನಾಟ್‌ಔಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಟ್ವಿಸ್ಟರ್ (ಇಂ)	4 ಪ್ರದರ್ಶನಗಳು
ಸಂಗಂ	
ಹೆಜ್ಜಾರು (ಕ)	2 ಪ್ರದರ್ಶನಗಳು
ಇಂಡಿಯನ್ 2 (ತ)	2 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ನಾಟ್‌ಔಟ್ (ಕ)	2 ಪ್ರದರ್ಶನಗಳು
ಹಿರಣ್ಯ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10.10ಕ್ಕೆ, ಮ.1ಕ್ಕೆ, ಆಕ್ಸಿಡೆಂಡ್ ಆರ್ ಕಾನ್ಸ್‌ಪಿರೆಸಿ ಗೋದ್ರಾ (ಹಿಂ): ಮ.3.45ಕ್ಕೆ, ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.10ಕ್ಕೆ
ಸ್ಕ್ರೀನ್ 2	ಟ್ವಿಸ್ಟರ್ಸ್ (ಇಂ): ಬೆ.10.30ಕ್ಕೆ, ಹೆಜ್ಜಾರು (ಕ): ಮ.1.10ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.40ಕ್ಕೆ, ಆಕ್ಸಿಡೆಂಡ್ ಆರ್ ಕಾನ್ಸ್‌ಪಿರೆಸಿ ಗೋದ್ರಾ (ಹಿಂ): ರಾ.7.05ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ರಾ.10.05ಕ್ಕೆ
ಸ್ಕ್ರೀನ್ 3	ನಾಟ್‌ಔಟ್ 2024 (ಕ): ಬೆ.10.15ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಸಂ.4.30ಕ್ಕೆ, ಟ್ವಿಸ್ಟರ್ಸ್ (ಇಂ): ರಾ.7.25ಕ್ಕೆ, ರಾ.10ಕ್ಕೆ
ಸ್ಕ್ರೀನ್ 4	ಇನ್‌ಸೈಡ್ ಔಟ್ 2 (3ಡಿ) (ಇಂ): ಬೆ.10.55ಕ್ಕೆ, ಬ್ಯಾಕ್ ಬೆಂಚರ್ಸ್ (ಕ): ಮ.1ಕ್ಕೆ, ಇಂಡಿಯನ್ 2 (ತ): ಮ.3.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ರಾ.7ಕ್ಕೆ, ರಾ.9.55ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅನುದಾನ ಬೇರೆ ಉದ್ದೇಶಕ್ಕೆ ಬಳಕೆ

ಪರಿಶಿಷ್ಟರಿಗೆ ಮಾಡಿದ ದ್ರೋಹ; ವಿಪಕ್ಷ ನಾಯಕ ಅಶೋಕ್ ಆಕ್ರೋಶ



ಬೆಂಗಳೂರು, ಜು.18(ಕೆಎಂಶಿ)– ಪರಿಶಿಷ್ಟ ವರ್ಗ ಮತ್ತು ಪಂಗಡಕ್ಕಾಗಿ ಮೀಸಲಿಟ್ಟ ಎಸ್ಸಿಪಿ, ಟಿಎಸ್ಪಿಯ 25 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡು ಈ ಜನಾಂಗಗಳಿಗೆ ದ್ರೋಹ ಮಾಡಲಾಗಿದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ್ ವಿಧಾನಸಭೆ ಯಲ್ಲಿಂದು ಟೀಕಿಸಿದ್ದಾರೆ. ನಿಲುವಳಿ ಸೂಚನೆ ಮೇಲಿನ ಪೂರ್ವ ಭಾವಿ ಚರ್ಚೆಯಲ್ಲಿ ಮಾತನಾಡಿದ ಅವರು, 5 ಗ್ಯಾರಂಟಿಗಳನ್ನು ಅವೈಜ್ಞಾನಿಕವಾಗಿ ಜಾರಿಗೆ ತರಲಾಯಿತು. ಯೋಜನೆಗಳಿಗೆ ಬಜೆಟ್ ಅನುದಾನ ಒದಗಿಸುವ ಬಗ್ಗೆ ಚರ್ಚೆ ಮಾಡಲಿಲ್ಲ, ಕಳೆದ ಹಾಗೂ ಪ್ರಸಕ್ತ ಹಣಕಾಸು ವರ್ಷದಲ್ಲಿ ಮೀಸಲಿಟ್ಟಿದ್ದ ಎಸ್ಸಿಪಿ ಮತ್ತು ಟಿಎಸ್ಪಿಯ 25 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಬೇರೆ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆ ಎಂದರು. ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಹಣವನ್ನು ಸಮುದಾಯದ ಕಲ್ಯಾಣಕ್ಕಾಗಿ ರಸ್ತೆ, ಚರಂಡಿ, ಪ್ರದೇಶ, ಬಡಾ ವಣೆಗಳ ಅಭಿವೃದ್ಧಿಗೆ ವಿನಿಯೋಗಿ ಸಬೇಕಿತ್ತು ನಿಯಮ ಗಾಳಿಗೆ ತೂರಿ ಹಣ ಬೇರೆ ಉದ್ದೇಶಗಳಿಗೆ ಬಳಸ ಲಾಗಿದೆ. ಲಿಂಗಾಯತರ ಅಭಿವೃದ್ಧಿ ನಿಗಮ, ಒಕ್ಕಲಿಗರ ಅಭಿವೃದ್ಧಿ ನಿಗಮ, ಬ್ರಾಹ್ಮಣರ ಅಭಿವೃದ್ಧಿ ನಿಗಮದ ಹಣದ ಬಗ್ಗೆಯೂ ಕೇಳಿದರು. ಎಸ್ಸಿ/ಎಸ್ಟಿ ಜನಾಂಗಕ್ಕೆ 2 ಸಾವಿರ ರೂ. ಕೊಡುವುದರಿಂದ ಶುದ್ಧ ಕುಡಿಯುವ ನೀರು ದೊರೆಯುವುದಿಲ್ಲ, ಜನಾಂಗಕ್ಕೆ ಮೀಸಲಿಟ್ಟ ಹಣವನ್ನು ಬೇರೆ ಕಾರಣಕ್ಕೆ ಖರ್ಚು ಮಾಡಬಾರದು, ಚರ್ಚೆಗೆ ಹೆಚ್ಚಿನ ಅವಕಾಶ ನೀಡಬೇಕು ಎಂದು ಕೋರಿದರು. ಸಭಾಧ್ಯಕ್ಷ ಯು.ಟಿ. ಖಾದರ್, ನಿಲುವಳಿ ಸೂಚನೆ ಬದಲಿಗೆ ನಿಯಮ 69ರಡಿ ಚರ್ಚೆಗೆ ಅವಕಾಶ ನೀಡುವುದಾಗಿ ಪ್ರಕಟಿಸಿದರು.

ನಾಳೆ ಕಥಾ ಸಂಕಲನ ಬಿಡುಗಡೆ

ಮೈಸೂರು,ಜು.18–ಆಕಾಶವಾಣಿ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಲಾಕ್‌ಡೌನ್ ಕಥೆಗಳು–ಕಥಾ ಸಂಕಲನದ ಬಿಡುಗಡೆ ಸಮಾರಂಭವನ್ನು ಜು.20ರಂದು ಸಂಜೆ 4.30 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಆಯೋ ಜಿಸಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಗೆರೆ ಗೋಪಾಲ್ ಕಥಾ ಸಂಕಲನ ಬಿಡುಗಡೆ ಮಾಡಲಿದ್ದು, ಆಕಾಶವಾಣಿ ಉಪನಿರ್ದೇಶಕ ಎಸ್.ಉಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ

ಮೈಸೂರು,ಜು.18(ಎಂಟಿವೈ)– ಉನ್ನತ ಶಿಕ್ಷಣ ಪಡೆಯುತ್ತಿರುವ 23 ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವತಿಯಿಂದ ಲ್ಯಾಪ್‌ಟಾಪ್ ವಿತರಿಸಲಾಯಿತು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಕಚೇರಿಯಲ್ಲಿ ಗುರುವಾರ ನಡೆದ ಸರಳ ಸಮಾರಂಭದಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕ ವಿನುತ್, ಮಾಜಿ ಮೇಯರ್ ನಾರಾಯಣ ಅವರ ಸಮ್ಮುಖದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಇಂಜಿನಿಯರಿಂಗ್, ವಿಜ್ಞಾನದಲ್ಲಿ ಪದವಿ ಓದುತ್ತಿರುವ ಅಂಬೇಡ್ಕರ್ ಕಾಲೋನಿ, ಭಾರತ್‌ನಗರ, ನವೋದಯ ಬಡಾವಣೆ, ಬುದ್ಧ ನಗರ, ಹೈವೇ ಸರ್ಕಲ್, ಧರ್ಮಸಿಂಗ್ ಕಾಲೋನಿ, ಸಾರ್ವಜನಿಕ ಹಾಸ್ಟೆಲ್, ಹೆಬ್ಬಾಳ್ ಕಾಲೋನಿಗಳ ವಿದ್ಯಾರ್ಥಿಗಳು ಲ್ಯಾಪ್‌ಟಾಪ್ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕ ವಿನುತ್ ಮಾತನಾಡಿ, ವಿದ್ಯಾರ್ಥಿಗಳು ಅಂಬೇಡ್ಕರ್ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಬದುಕಿನಲ್ಲಿ ಶ್ರದ್ಧೆ, ಶಿಸ್ತು, ಸಮಯ ಪಾಲನೆ ಅಳವಡಿಸಿಕೊಳ್ಳಬೇಕು. ಪದವಿ ಓದುವಾಗಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಆರಂಭಿಸಬೇಕು ಎಂದು ತಿಳಿಸಿದರು.

ಮಾಜಿ ಮೇಯರ್ ನಾರಾಯಣ ಅವರು ಮಾತನಾಡಿ, ಪೌರಕಾರ್ಮಿಕರು ಇತರೆ ನಿಗಮಗಳಲ್ಲಿ ಸೌಲಭ್ಯ ಪಡೆಯಲು ಸಾಧ್ಯವಾಗುವುದಿಲ್ಲ ಎಂಬುದನ್ನು ಅರಿತು ಪೌರಕಾರ್ಮಿಕರ ನಿಗಮ ಸ್ಥಾಪಿಸಲಾಯಿತು. ನಿಗಮದಿಂದ ದೊರೆಯುವ ಸೌಲಭ್ಯಗಳನ್ನು ಪಡೆದು ಪೌರಕಾರ್ಮಿಕರು ಅಭಿವೃದ್ಧಿ ಹೊಂದಬೇಕು. ಪೌರಕಾರ್ಮಿಕರಾಗಿ ಕರ್ತವ್ಯ ನಿರತರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ವಿದ್ಯಾರ್ಥಿಗಳು ಚೆನ್ನಾಗಿ ಓದಿ ಸರ್ಕಾರಿ ಉದ್ಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಸಫಾಯಿ ಕರ್ಮಚಾರಿ ಅನುಷ್ಠಾನ ಸಮಿತಿ ಮಾಜಿ ಸದಸ್ಯ ಎಸ್. ನಾಗರಾಜು ಮಾತನಾಡಿ, ಪೌರಕಾರ್ಮಿಕರ ಮಕ್ಕಳು ಉನ್ನತ ಶಿಕ್ಷಣ ಪಡೆಯಲು ನೆರವಾಗಲೆಂದು ಲ್ಯಾಪ್‌ಟಾಪ್ ನೀಡಲಾಗಿದೆ. ಇದನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಆರ್. ಶಿವಣ್ಣ, ಮುಖಂಡರಾದ ಯತಿರಾಜ್, ಆರ್.ದಾಸ್, ಎನ್.ಪಿ. ಗುರುದತ್ತ ಮೂರ್ತಿ, ಕೆ.ನಾಗರತ್ನ ಮಂಜುನಾಥ್, ಲೋಕೇಶ್, ಗಗನ್, ಪ್ರಿಯಾಂಕ, ಕೆ.ಅಣ್ಣಾದೊರೆ ಹಾಗೂ ಇನ್ನಿತರರು ಉಪಸ್ಥಿತರಿದ್ದರು.


ಉನ್ನತ ಶಿಕ್ಷಣ ಪಡೆಯುತ್ತಿರುವ 23 ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವತಿಯಿಂದ ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ನಿಗಮದ ಕಚೇರಿಯಲ್ಲಿ ಲ್ಯಾಪ್‌ಟಾಪ್ ವಿತರಿಸಲಾಯಿತು.

ಕೆಎಸ್‌ಆರ್‌ಟಿಸಿ ವಿನೂತನ ಪ್ರಯತ್ನ

ಎಂಜಿನ್ ಚೆನ್ನಾಗಿರುವ ಹಳೆ ಬಸ್‌ಗೆ ಹೊಸ ರೂಪ!



ಮೈಸೂರು, ಜು.18(ಬಿಎಲ್‌ಯು)– ಹೊಸ ಬಸ್‌ಗಳ ಖರೀದಿ ಮಾಡುವುದರ ಬದಲು ಈಗಿರುವ ಬಸ್‌ಗಳನ್ನೇ ನವೀಕರಿಸಿ, ಹೊಸ ರೂಪ ನೀಡಲು ಕೆಎಸ್‌ಆರ್‌ಟಿಸಿ ವಿನೂತನ ಪ್ರಯತ್ನಕ್ಕೆ ಮುಂದಾಗಿದೆ. ಮೈಸೂರಿನಲ್ಲಿ ಈಗಾಗಲೇ 100ಕ್ಕೂ ಹೆಚ್ಚು ಬಸ್‌ಗಳನ್ನು ನವೀಕರಿಸಿರುವ ಕೆಎಸ್‌ಆರ್‌ಟಿಸಿ ಐರಾವತ ಸೇರಿದಂತೆ ಇತರೆ ಬಸ್‌ಗಳ ನವೀಕರಣಕ್ಕೆ ಕೈಹಾಕಿದೆ.

ಶಕ್ತಿ ಯೋಜನೆ ಜಾರಿಯಾದ ನಂತರ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಬಹಳ ಬೇಡಿಕೆ ಇದೆ. ಬೇಡಿಕೆಗೆ ತಕ್ಕಂತೆ ಹೊಸ ಬಸ್ ಖರೀದಿಸಲು ಸರ್ಕಾರದ ಬಳಿ ಹಣವಿಲ್ಲ. ಈ ಹಿನ್ನೆಲೆಯಲ್ಲಿ ಎಂಜಿನ್ ಸೇರಿದಂತೆ ಪ್ರಮುಖ ಯಂತ್ರಗಳು ಸುಸ್ಥಿತಿಯಲ್ಲಿರುವ ಬಸ್‌ಗಳನ್ನು ನವೀಕರಿಸಿ ಹೊಸ ರೂಪ ನೀಡುವ ವಿನೂತನ ಪ್ರಯತ್ನಕ್ಕೆ ಕೆಎಸ್‌ಆರ್‌ಟಿಸಿ ಕೈ ಹಾಕಿದೆ.

> ಮೈಸೂರಿನಲ್ಲಿ ಈಗಾಗಲೇ 14 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸುತ್ತಿದ್ದು, ಹೆಚ್ಚುವರಿ ಬಸ್‌ಗಳ ಖರೀದಿಗೆ ಸರ್ಕಾರ ಟೆಂಡರ್ ಕರೆಯುತ್ತಿದೆ.
> – ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು.

ವೋಲ್ವೊ ಸೇರಿದಂತೆ ಕೆಂಪು ಬಸ್‌ಗಳು ಲಕ್ಷಾಂತರ ಕಿಲೋಮೀಟರ್ ಸಂಚರಿಸಿದರೂ ಅವುಗಳ ಎಂಜಿನ್ ಸೇರಿದಂತೆ ಇತರೆ ಪ್ರಮುಖ ಮಿಷನರಿಗಳು ಸುಸ್ಥಿತಿಯಲ್ಲಿರುತ್ತದೆ. ಆದರೆ ಆಸನಗಳು, ಕಿಟಕಿ ಗಾಜು ಹಾಗೂ ಮೇಲ್ಛಾವಣಿ ಕಿತ್ತು ಬಂದಿರುತ್ತವೆ ಇದೊಂದೇ ಕಾರಣಕ್ಕೆ ಇವುಗಳನ್ನು ಗುಜರಿಗೆ ಹಾಕಿದರೆ ಕೆಎಸ್‌ಆರ್‌ಟಿಸಿಗೆ ತುಂಬಾ ನಷ್ಟವಾಗುತ್ತದೆ. ಇಂತಹ ಬಸ್‌ಗಳನ್ನು ಗುಜರಿಗೆ ಹಾಕಿ ಹೊಸ ಬಸ್ ಖರೀದಿಸಲು ಕನಿಷ್ಠ ಒಂದು ಬಸ್‌ಗೆ 40 ಲಕ್ಷ ವೆಚ್ಚವಾಗುತ್ತದೆ. ಅದರ ಬದಲು ಈಗಿರುವ ಬಸ್ ನವೀಕರಿಸಲು ಕೇವಲ ಮೂರ್ನಾಲ್ಕು ಲಕ್ಷ ಸಾಕು. ಈ ಹಿನ್ನೆಲೆಯಲ್ಲಿ ಬಸ್‌ಗಳನ್ನು ನವೀಕರಿಸಲು ಮುಂದಾಗಿದೆ.

ಕೆಎಸ್‌ಆರ್‌ಟಿಸಿಯಲ್ಲಿ 10 ಲಕ್ಷ ಕಿಲೋಮೀಟರ್‌ಗೂ ಹೆಚ್ಚು ಸಂಚರಿಸಿರುವ, 10 ವರ್ಷ ಮೀರಿರುವ ಬಸ್‌ಗಳನ್ನು ನವೀಕರಿಸಲಾಗುತ್ತಿದೆ. ಇಂತಹ ಬಸ್‌ಗಳನ್ನು ನವೀಕರಿಸುವ ಮೊದಲು ಅವುಗಳ ಎಂಜಿನ್ ಚೆನ್ನಾಗಿದೆಯೇ, ಅವುಗಳನ್ನು ಮತ್ತಷ್ಟು ಕಾಲ ನಿರ್ವಹಣೆ ಮಾಡಬಹುದೇ ಎಂದು ತಜ್ಞರಿಂದ ಖಚಿತಪಡಿಸಿಕೊಳ್ಳಲಾಗುತ್ತದೆ. ತರುವಾಯ ಹಂತ ಹಂತವಾಗಿ ಇಂತಹ ಬಸ್‌ಗಳನ್ನು ನವೀಕರಿಸಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ. ಇದರಿಂದ ಹೊಸ ಬಸ್‌ಗಳ ಖರೀದಿ ಪ್ರಮೇಯ ಬರುವುದಿಲ್ಲ.

ಮೈಸೂರಿನ ಐದು ಐರಾವತ ಬಸ್‌ಗಳ ನವೀಕರಣ

ಮೈಸೂರಿನಲ್ಲಿ ಈಗಾಗಲೇ 100 ಬಸ್‌ಗಳನ್ನು ನವೀಕರಿಸಿದ್ದು, ಇನ್ನು ಹಲವು ಬಸ್‌ಗಳ ನವೀಕರಣ ಮಾಡಲಾಗುತ್ತಿದೆ. ಒಂದು ಐರಾವತ ಬಸ್ ನವೀಕರಣ ಕಾರ್ಯ ಪ್ರಗತಿಯಲ್ಲಿದ್ದು, ಇದೇ ರೀತಿ ಇನ್ನು ನಾಲ್ಕು ಬಸ್‌ಗಳನ್ನು ನವೀಕರಿಸಲಾಗುತ್ತಿದೆ. ಮೈಸೂರಿನಲ್ಲಿ ಒಟ್ಟು 53 ಐರಾವತ ಬಸ್‌ಗಳಿದ್ದು, ಸದ್ಯಕ್ಕೆ ಐದು ಬಸ್‌ಗಳನ್ನು ಮಾತ್ರ ನವೀಕರಿಸಲಾಗುತ್ತಿದೆ. ಸಾಮಾನ್ಯವಾಗಿ ವೋಲ್ವೊ ಬಸ್‌ಗಳ ಎಂಜಿನ್ ಸೇರಿದಂತೆ ಇತರೆ ಯಂತ್ರಗಳು ಸುಸ್ಥಿತಿಯಲ್ಲಿರುತ್ತವೆ. ಆದರೆ ಸೀಟು, ಕಿಟಕಿ ಸೇರಿದಂತೆ ಇತರೆ ಭಾಗ ರಿಪೇರಿಗೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ನವೀಕರಣ ಮಾಡಲಾಗುತ್ತಿದೆ.

15 ವರ್ಷ ಮೇಲ್ಪಟ್ಟ ಬಸ್‌ಗಳನ್ನು ಸಂಚಾರಕ್ಕೆ ಬಿಡದಂತೆ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಆದೇಶ ಮಾಡಿದೆ. ಆದರೆ ಎಂಜಿನ್ ಚೆನ್ನಾಗಿರುವ 10 ವರ್ಷ ಮೇಲ್ಪಟ್ಟ ಬಸ್‌ಗಳನ್ನು ನವೀಕರಿಸಿದರೆ ಇನ್ನು ನಾಲ್ಕು ವರ್ಷ ಇವುಗಳನ್ನು ಬಳಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಬಸ್‌ಗಳ ನವೀಕರಣ ಮಾಡಿಸಲಾಗುತ್ತಿದೆ. ಮೈಸೂರಿನಲ್ಲಿ ಹೆಚ್ಚುವರಿ ಬೇಡಿಕೆ ಇದ್ದ 80 ಬಸ್‌ಗಳನ್ನು ಸರ್ಕಾರ ಈಗಾಗಲೇ ನೀಡಿದ್ದು, ಎಲ್ಲಾ ಕಡೆ ಸಮರ್ಪಕ ಬಸ್ ಸಂಪರ್ಕ ಕಲ್ಪಿಸಲಾಗುತ್ತಿದೆ.

ಛತ್ತೀಸ್‌ಗಢದಲ್ಲಿ ಐಇಡಿ ಸ್ಫೋಟ: ಇಬ್ಬರು ಎಸ್‌ಟಿಎಫ್ ಸಿಬ್ಬಂದಿ ಹುತಾತ್ಮ



ಬಿಜಾಪುರ್, ಜು.18– ಛತ್ತೀಸ್‌ಗಢದ ಬಿಜಾಪುರ್ ಜಿಲ್ಲೆಯಲ್ಲಿ ನಕ್ಸಲೀಯರು ಸುಧಾರಿತ ಸ್ಫೋಟಕ ಸಾಧನವನ್ನು ಸ್ಫೋಟಿಸಿದ್ದು, ವಿಶೇಷ ಕಾರ್ಯಪಡೆಯ ಇಬ್ಬರು ಸಿಬ್ಬಂದಿ ಹುತಾತ್ಮರಾಗಿದ್ದಾರೆ ಮತ್ತು ನಾಲ್ವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಬಿಜಾಪುರ್–ಸುಕ್ಮಾ–ದಂತೇವಾಡ ಜಿಲ್ಲೆಗಳ ಮೂರು ಜಂಕ್ಷನ್ ಪ್ರದೇಶದ ಅರಣ್ಯದಲ್ಲಿ ಭದ್ರತಾ ಸಿಬ್ಬಂದಿಯ ಜಂಟಿ ತಂಡವು ನಕ್ಸಲೀಯ ವಿರೋಧಿ ಕಾರ್ಯಾಚರಣೆ ಮುಗಿಸಿ ಹಿಂತಿರುಗುತ್ತಿದ್ದಾಗ ತಾರೆಮ್ ಪ್ರದೇಶದಲ್ಲಿ ಕಳೆದ ರಾತ್ರಿ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರು ಎಸ್‌ಟಿಎಫ್ ಕಾನ್ಸ್‌ಟೇಬಲ್‌ಗಳಾದ ರಾಯ್‌ಪುರದ ನಿವಾಸಿ ಭರತ್ ಸಾಹು ಮತ್ತು ನಾರಾಯಣಪುರ ಜಿಲ್ಲೆಯ ಸತ್ಯರ್ ಸಿಂಗ್ ಕಾಂಗೆ ಅವರು ನಕ್ಸಲೀಯರು ಸಿಡಿಸಿದ ಸ್ಫೋಟದಲ್ಲಿ ಮೃತಪಟ್ಟಿದ್ದಾರೆ. ಇತರ ನಾಲ್ವರು ಸಿಬ್ಬಂದಿಗೆ ಗಾಯಗಳಾಗಿವೆ ಎಂದು ಅವರು ಹೇಳಿದರು.

ಘಟನೆಯ ನಂತರ ಸ್ಥಳಕ್ಕೆ ಸೇನಾಯೋಧರು ಧಾವಿಸಿ ಗಾಯಗೊಂಡ ಸಿಬ್ಬಂದಿಯನ್ನು ಚಿಕಿತ್ಸೆಗಾಗಿ ಸ್ಥಳಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	114.90 ಅಡಿ
ಒಳಹರಿವು	40490 ಕ್ಯೂಸೆಕ್
ಹೊರಹರಿವು	2560 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಗುರುವಾರ	2281.12 ಅಡಿ
ಒಳಹರಿವು	52772 ಕ್ಯೂಸೆಕ್
ಹೊರಹರಿವು	70000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2853.35 ಅಡಿ
ಒಳಹರಿವು	17416 ಕ್ಯೂಸೆಕ್
ಹೊರಹರಿವು	10000 ಕ್ಯೂಸೆಕ್

ಹಸಿರು ನಮ್ಮ ಉಸಿರು

ಮೂರನೇ ಪುಟದಿಂದ

ಅಪಮಾನಿಸಲು ನಿಮಗೆ ಕನ್ನಡಿಗರೇ ಬೇಕಿತ್ತೇ?

ರಣಹೇಡಿ ನಿರ್ಧಾರವನ್ನು ಸಮಸ್ತ ಕರುನಾಡ ಜನರ ಪರವಾಗಿ ಖಂಡಿಸುವೆ ಎಂದು ಹೇಳಿದ್ದಾರೆ. ಈ ನೆಲದಲ್ಲಿ ಬದುಕು ಮಾಡುತ್ತ ಕನ್ನಡ ಕಲಿತವರೆಲ್ಲ ಕನ್ನಡಿಗರೇ ಎಂದು ಪರಿಗಣಿಸಿ ಈ ನೆಲದ ಮಕ್ಕಳ ಉದ್ಯೋಗದ ಹಕ್ಕನ್ನು ರಕ್ಷಿಸುವ ನಿಟ್ಟಿನಲ್ಲಿ ಕನ್ನಡಪರ ಹೋರಾಟಗಾರರ ಬಹುದಿನಗಳ ಹೋರಾಟದ ಬೇಡಿಕೆಗೆ ನಿನ್ನೆಯಷ್ಟೇ 'ಅಸ್ತು' ಎಂದು ಹೆಜ್ಜೆ ಇಟ್ಟಿದ್ದ ಸರ್ಕಾರ ದಿನ ಕಳೆಯುವುದರೊಳಗೇ 'ಸುಸ್ತು' ಹೊಡೆದಿರುವುದೇಕೆ! ಮುಖ್ಯಮಂತ್ರಿಗಳು ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಮೂರು ಬಾರಿ 'ಯೂ ಟರ್ನ್ ಹೊಡೆದು' ಕೊನೆಗೂ ವಿಧೇಯಕ ಸದ್ಯಕ್ಕೆ ಮಂಡಿಸುತ್ತಿಲ್ಲ ಎನ್ನುವ ಅಂಜುಬುರುಕ ನಿರ್ಧಾರದ ಹಿಂದೆ ನಾಡಿನ ಆತ್ಮ ಗೌರವ, ಕನ್ನಡಿಗರ ಸ್ವಾಭಿಮಾನ ಹಾಗೂ ಕನ್ನಡತನವನ್ನು ಹಿಮ್ಮೆಟ್ಟಿಸುವ ಕರ್ನಾಟಕ ವಿರೋಧಿ ಶಕ್ತಿಗಳ ಲಾಬಿ ಮೇಲುಗೈ ಸಾಧಿಸಿರುವಂತಿದೆ.

ಇಂಡಿ ಕೂಟದಲ್ಲಿ ಯಾವಾಗ ಬಿರುಕು ಮೂಡುತ್ತದೋ ಎಂಬ ಭೀತಿಯಲ್ಲಿರುವ ದೆಹಲಿಯ ದೊಡ್ಡ 'ಕೈ' ಮುಖ್ಯಮಂತ್ರಿಗಳ ಕೈ ಕಟ್ಟಿ ಹಾಕಿರಲೇಬೇಕು. ಇಲ್ಲದಿದ್ದರೆ ಕನ್ನಡಿಗರ ಬದುಕು ಹಸನಾಗಿಸುವ ವಿಧೇಯಕವನ್ನು ಬದಿಗೆ ಸರಿಸುವ ಪಲಾಯನವಾದಿ ನಿರ್ಧಾರ ಕೈಗೊಳ್ಳಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

ಸದ್ಯ ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿಗಳನ್ನು ಮುತ್ತಿರುವ ಮಹರ್ಷಿ ವಾಲ್ಮೀಕಿ ನಿಗಮ ಹಾಗೂ ಮುಡಾ ಹಗರಣಗಳಿಂದ ತತ್ತರಿಸಿರುವ ಕಾಂಗ್ರೆಸ್ ತನ್ನ ಮುಖ ಮುಚ್ಚಿಕೊಳ್ಳಲು ಹಗರಣದ ಚರ್ಚೆ ಹಾಗೂ ತನಿಖೆಯನ್ನು ದಿಕ್ಕು ತಪ್ಪಿಸಲು ಹಾಗೂ ಜನರ ಗಮನ ವಿಚಲಿತಗೊಳಿಸುವ ಕುತಂತ್ರದಿಂದ ಕನ್ನಡ ಪರ ವಿಧೇಯಕವನ್ನು ತಡೆ ಹಿಡಿದು ಗುರಾಣಿ ಮಾಡಿಕೊಳ್ಳುವ ಹುನ್ನಾರ ನಡೆಸಿದ್ದರೆ ರಾಜ್ಯದ ಜನತೆ ಕಾಂಗ್ರೆಸ್ಸಿಗರನ್ನು ಎಂದಿಗೂ ಕ್ಷಮಿಸರು ಎಂದು ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಲ್ಲಿ ಭಾರಿ ಮಳೆ: ಜನ ಜೀವನ ಅಸ್ತವ್ಯಸ್ತ

ಮೈಸೂರು, ಜು.18(ಆರ್‌ಕೆ)–ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಇಂದು ಸುರಿದ ಭಾರಿ ಮಳೆಯಿಂದಾಗಿ ಜನ ಜೀವನ ಅಸ್ತವ್ಯಸ್ತಗೊಂಡಿತು. ಮುಂಜಾನೆಯಿಂದಲೂ ಮೋಡ ಮುಸುಕಿದ ವಾತಾವರಣದ ನಡುವೆ ಆರಂಭವಾದ ಮಳೆಯು ನಿರಂತರವಾಗಿ ದಿನವಿಡೀ ಸುರಿಯಿತು. ಪರಿಣಾಮ ಶಾಲಾ–ಕಾಲೇಜು, ಸರ್ಕಾರಿ, ಖಾಸಗಿ ಕಚೇರಿ, ಸಂಸ್ಥೆಗಳು, ಕೈಗಾರಿಕೆ, ಕಾರ್ಖಾನೆಗಳಿಗೆ ತೆರಳುವವರಿಗೆ ತೀವ್ರ ತೊಂದರೆ ಉಂಟಾಯಿತು.

ದೇವರಾಜ ಮಾರುಕಟ್ಟೆ, ಎಪಿಎಂಸಿ, ಮಂಡಿ ಮಾರುಕಟ್ಟೆ, ಸಂತೆಪೇಟೆ, ಶಿವರಾಂಪೇಟೆ, ಮಕ್ಕಾಜಿ ಚೌಕ ಸೇರಿದಂತೆ ವಾಣಿಜ್ಯ ಕೇಂದ್ರಗಳಲ್ಲಿ ಮಳೆಯಿಂದಾಗಿ ವರ್ತಕರು ಮತ್ತು ಗ್ರಾಹಕರು ಪರದಾಡುವಂತಾಯಿತು. ಅಂಗಡಿ–ಮುಂಗಟ್ಟು ರಸ್ತೆ ಬದಿ ವ್ಯಾಪಾರ, ಫಾಸ್ಟ್ ಫುಡ್ ವ್ಯಾಪಾರಕ್ಕೂ ಮಳೆ ಅಡ್ಡಿಯುಂಟು ಮಾಡಿತು.

ತಗ್ಗು ಪ್ರದೇಶ, ಕೊಳಚೆ ಪ್ರದೇಶಗಳಲ್ಲಿ ನೀರು ನಿಂತು ಜನರು ಪರದಾಡುತ್ತಿದ್ದರಲ್ಲದೆ, ಚರಂಡಿಗಳು, ರಸ್ತೆಗಳಲ್ಲಿ ನೀರು ತುಂಬಿ ಹರಿಯುತ್ತಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಜನರು ಮರದಡಿ, ಕಟ್ಟಡಗಳನ್ನು ಅವಲಂಬಿಸಬೇಕಾಯಿತಲ್ಲದೆ, ಹಲವರು ಕೊಡೆಗಳನ್ನು ಆಶ್ರಯಿಸಬೇಕಾಯಿತು.

ನಿರಂತರವಾಗಿ ಸುರಿದ ಮಳೆಯು ಪಾದಚಾರಿಗಳು, ದ್ವಿಚಕ್ರ



ವಾಹನ ಸವಾರರಿಗೆ ತೀವ್ರ ತೊಂದರೆ ಉಂಟಾಯಿತು. ಆದರೆ, ಗಾಳಿ, ಸಿಡಿಲು, ಮಿಂಚು ಇಲ್ಲದಿದ್ದರಿಂದ ಎಲ್ಲಿಯೂ ಅವಾಂತರಗಳಾದ ಬಗ್ಗೆ ವರದಿಯಾಗಿಲ್ಲ. ಪಾಲಿಕೆ ಅಭಯ ತಂಡದ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಚರಂಡಿಗಳಲ್ಲಿ ತುಂಬಿ ಹರಿಯುತ್ತಿದ್ದ ನೀರು ಸರಾಗವಾಗಿ ಹೋಗುವಂತೆ ವ್ಯವಸ್ಥೆ ಮಾಡಿದರಲ್ಲದೆ, ಮುರಿದು ಬಿದ್ದ ಸಣ್ಣಪುಟ್ಟ ರೆಂಬೆಗಳನ್ನು ತೆರವುಗೊಳಿಸಿದರು.

ಕಬಿನಿ, ನುಗು ಜಲಾಶಯದ ಸುತ್ತಮುತ್ತಲ ಜನರು ಜಾಗ್ರತೆ ವಹಿಸುವಂತೆ ಸೂಚನೆ

ಭರ್ತಿಯಾಗಿರುವ ಎರಡೂ ಜಲಾಶಯಗಳಿಗೆ ಜಿಪಂ ಸಿಇಓ ಗಾಯತ್ರಿ ಭೇಟಿ; ಪರಿಶೀಲನೆ



ಅತಿವೃಷ್ಟಿಯಿಂದ ಪ್ರವಾಹ ಭೀತಿ ಉಂಟಾಗಿರುವ ಹಿನ್ನೆಲೆಯಲ್ಲಿ ಜಿಪಂ ಸಿಇಓ ಗಾಯತ್ರಿ ಅವರು ಅಧಿಕಾರಿಗಳೊಂದಿಗೆ ಜಲಾಶಯಗಳು ಹಾಗೂ ನದಿಪಾತ್ರದ ಗ್ರಾಮಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು, ಜು.18(ಎಸ್‌ಬಿಡಿ)– ಅತಿವೃಷ್ಟಿಯಿಂದ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಸರಗೂರು ತಾಲೂಕಿನ ನುಗು ಜಲಾಶಯ ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯಕ್ಕೆ ಮೈಸೂರು ಜಿಲ್ಲಾ ಪಂಚಾಯ್ತಿ ಸಿಇಓ ಕೆ.ಎಂ.ಗಾಯತ್ರಿ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೇರಳ ಹಾಗೂ ಹೆಚ್.ಡಿ.ಕೋಟೆ ಭಾಗದಲ್ಲಿ ನಿರಂತರವಾಗಿ ಮಳೆಯಾಗುತ್ತಿರುವುದರಿಂದ ಕಬಿನಿ ಜಲಾಶಯಕ್ಕೆ ಒಳಹರಿವು ಪ್ರಮಾಣ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಲಾಶಯದ ಹೊರ ಹರಿವಿನ ಪ್ರಮಾಣ ಹೆಚ್ಚಳವಾಗಬಹುದು. ಹೀಗಾಗಿ ನದಿಪಾತ್ರದ ಗ್ರಾಮಗಳಲ್ಲಿ ವಾಸಿಸುವ ಗ್ರಾಮಸ್ಥರು ಎಚ್ಚರಿಕೆಯಿಂದಿರಬೇಕು. ಮಳೆ ಕಡಿಮೆ ಆಗುವವರೆಗೆ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಜಾಗೃತಿ ಮೂಡಿಸಬೇಕು. ಅಗತ್ಯವಿದ್ದರೆ ಜನರನ್ನು ಸ್ಥಳಾಂತರ ಮಾಡಲು ಅಗತ್ಯ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಬಿನಿ ಜಲಾಶಯದಲ್ಲಿನ ನೀರು ಬಿಡುಗಡೆ ಗೇಟ್ ಕೊಠಡಿ ಶಿಥಿಲಾವಸ್ಥೆಯಲ್ಲಿದೆ. ಕೂಡಲೇ ಕೊಠಡಿ ದುರಸ್ತಿಗೆ ಕ್ರಮ ಕೈಗೊಳ್ಳಬೇಕು. ಜಲಾಶಯದ ಬಳಿ ಸಾರ್ವಜನಿಕರು ಬಾರದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಬೇಕು. ತುಂಬುಸೋಗೆ ಬಳಿಯ ಸೇತುವೆ ಬಳಿ ನೀರು ಅಪಾಯಮಟ್ಟ ಮೀರಿ ಹರಿಯುತ್ತಿದೆ. ಜಲಾಶಯದಿಂದ ಹೊರ ಹರಿವು ಹೆಚ್ಚಾದರೆ ಸೇತುವೆ ಮುಳುಗುವ ಭೀತಿ ಇದೆ. ಹಾಗಾಗಿ ಸಾರ್ವಜನಿಕರು ಸೇತುವೆ ಬಳಿ ತೆರಳದಂತೆ ಮುಂಜಾಗ್ರತೆ ವಹಿಸಿ ಎಂದರು.

ಈ ಸಂದರ್ಭದಲ್ಲಿ ಜಿಪಂ ಉಪ ಕಾರ್ಯದರ್ಶಿ(ಅಭಿವೃದ್ಧಿ) ಡಾ.ಎಂ.ಕೃಷ್ಣರಾಜು, ಸರಗೂರು ಕಾರ್ಯನಿರ್ವಾಹಕ ಅಧಿಕಾರಿ ಕೆ.ಸುಷ್ಮಾ, ಹೆಚ್.ಡಿ.ಕೋಟೆ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಪಿ.ಧರಣೇಶ್, ಕಾರ್ಯಪಾಲಕ ಇಂಜಿನಿಯರ್ ರಂಜಿತ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗೋವಿಂದ ನಾಯಕ, ಸಹಾಯಕ ನಿರ್ದೇಶಕ ಮಹದೇವಸ್ವಾಮಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಾದ ಪ್ರಭಾಕರ್ ಹಾಗೂ ಪರಮೇಶ್ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ಗ್ರಾಮಗಳಿಗೆ ಭೇಟಿ: ನಂಜನಗೂಡು ತಾಲೂಕು, ಹುಳಿಮಾವು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬೊಕ್ಕಹಳ್ಳಿ, ಕೆಂಪಿಸಿದ್ದನಹುಂಡಿ ಗ್ರಾಪಂ ವ್ಯಾಪ್ತಿಯ ಹೆಜ್ಜಿಗೆ, ತೊರೆಮಾವು, ಹುಲ್ಲಹಳ್ಳಿ–ರಾಂಪುರ ಸೇತುವೆ, ನದಿ ಪಾತ್ರದ ಪೌರಕಾರ್ಮಿಕರ ಕಾಲೋನಿ, ನಲ್ಲಿತಾಳಪುರ ಗ್ರಾಪಂನ ಕಡಬೂರು ಸೇತುವೆ ಸೇರಿದಂತೆ ತಗ್ಗು ಪ್ರದೇಶಗಳಿಗೆ ಭೇಟಿ ನೀಡಿ ಸಿಇಓ ಕೆ.ಎಂ.ಗಾಯತ್ರಿ, ಅಲ್ಲಿನ ಮುನ್ನೆಚ್ಚರಿಕಾ ಕ್ರಮಗಳನ್ನು ಪರಿಶೀಲಿಸಿದರು.

ಮಳೆ ಸಂತ್ರಸ್ತರಿಗೆ ಕಂಟ್ರೋಲ್ ರೂಂ ನೆರವು ಪಡೆಯಲು ಸಲಹೆ

ಮೈಸೂರು, ಜು.18(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಅಧಿಕ ಮಳೆಯಾಗುತ್ತಿದ್ದು ಕಬಿನಿ ಹಾಗೂ ನುಗು ಜಲಾಶಯಗಳಿಂದ ನೀರನ್ನು ಹೊರಬಿಡಲಾಗುತ್ತಿದೆ. ಜಿಲ್ಲಾಡಳಿತ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದು, ಸಾರ್ವಜನಿಕರಿಗೆ ಏನಾದರೂ ಸಮಸ್ಯೆಯಾದರೆ ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ತಾಲೂಕು ಕಚೇರಿಗಳ ಕಂಟ್ರೋಲ್ ರೂಂ ಸಂಪರ್ಕಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮನವಿ ಮಾಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ	0821–2423800, 1077
ಮೈಸೂರು ತಾಲೂಕು	0821–2414812
ನಂಜನಗೂಡು	08221– 223108
ತಿ.ನರಸೀಪುರ	08227–260210
ಹೆಚ್.ಡಿ.ಕೋಟೆ	08228– 255325
ಹುಣಸೂರು	08222– 252959
ಪಿರಿಯಾಪಟ್ಟಣ	08223– 274175
ಸರಗೂರು	08228– 296100
ಕೆ.ಆರ್.ನಗರ	08223– 262371
ಸಾಲಿಗ್ರಾಮ	08223–283833

ಟಾಸ್ಕ್‌ಫೋರ್ಸ್ ತಂಡವು ಕಾರ್ಯಪ್ರವೃತ್ತವಾಗ ಬೇಕು. ಮುನ್ನೆಚ್ಚರಿಕಾ ಕ್ರಮವಾಗಿ ಜನ–ಜಾನು ವಾರುಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಬೇಕು. ಸ್ಥಳೀಯ ಈಜುಗಾರರನ್ನು ಗುರುತಿಸಿ, ಅವರ ಸಂಪರ್ಕದಲ್ಲಿರಬೇಕು. ಪ್ರವಾಹ ಭೀತಿ ಪ್ರದೇಶದಲ್ಲಿ ಸ್ಥಳೀಯ ಸಿಬ್ಬಂದಿ ನಿಯೋಜಿಸಿ, ನಿಗಾ ವಹಿಸಬೇಕು. ಸಾಂಕ್ರಾಮಿಕ ರೋಗ ಹರಡದಂತೆ ಗ್ರಾಮದಲ್ಲಿ ಸ್ವಚ್ಛತೆ ಕಾಪಾಡಬೇಕು. ಗುಣಮಟ್ಟ ಪರೀಕ್ಷೆ ನಂತರ ಕುಡಿಯುವ ನೀರು ಪೂರೈಸಬೇಕು. ಆಶಾ ಕಾರ್ಯಕರ್ತೆಯರು ಮನೆ ಮನೆ ಭೇಟಿ ನೀಡಿ, ನೀರನ್ನು ಕುದಿಸಿ ಆರಿಸಿ ಕುಡಿಯುವಂತೆ ಅರಿವು ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಪರ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಜು.18– ನಂಜನಗೂಡು ತಾಲೂಕಿನ ಅಪರ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಯ ಗರಿಷ್ಠ ಅವಧಿ ಮುಕ್ತಾಯವಾಗಿರುವ ಹಿನ್ನಲೆಯಲ್ಲಿ ಸದರಿ ಹುದ್ದೆಯನ್ನು ಹೊಸ ಅಭ್ಯರ್ಥಿಯಿಂದ ತುಂಬಲು ಕರ್ನಾಟಕ ಕಾನೂನು ಅಧಿಕಾರಿಗಳ ನಿಯಮಾವಳಿ 1977 ನಿಯಮ 26ರಲ್ಲಿ ತಿಳಿಸಿರುವ ಅಗತ್ಯ ಷರತ್ತುಗಳನ್ನು ಪೂರೈಸಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗೆ ನೇಮಕಾತಿ ಬಯಸುವವರು, 7 ವರ್ಷ ವಕೀಲ ವೃತ್ತಿ ಪೂರೈಸಿರುವ ಆಸಕ್ತರು ತಮ್ಮ ಹೆಸರು, ವಿಳಾಸ, ಜಾತಿ, ವಿದ್ಯಾರ್ಹತೆ, ವಕೀಲ ವೃತ್ತಿಯಲ್ಲಿನ ಅನುಭವ, ಇತ್ಯಾದಿ ವಿವರಗಳನ್ನು ನಮೂದಿಸಿದ ಸ್ವಯಂ ವಿವರಣೆ ಮಾಹಿತಿಯೊಂದಿಗೆ ವಿದ್ಯಾರ್ಹತೆ, ರಾಜ್ಯ ಬಾರ್ ಕೌನ್ಸಿಲ್ ನೋಂದಣಿ ಮತ್ತು ವಕೀಲ ವೃತ್ತಿಯಲ್ಲಿ ಹೊಂದಿರುವ ಅನುಭವದ ಬಗ್ಗೆ ಸ್ಥಳೀಯ ವಕೀಲರ ಸಂಘದ ದೃಢೀಕರಣ ಪತ್ರ ಇತ್ಯಾದಿ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಜು.29 ರೊಳಗಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀ ಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

1ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಹೃದಯದಲ್ಲಿ ಇಂದಿಗೂ ಅಮರವಾಗಿದೆ

ದುಃಖತಪ್ತರು
ಕುಟುಂಬದವರು
ತಂದೆ, ತಾಯಿ
ಸಹೋದರ
ಸಹೋದರಿ
ದೊಡ್ಡಪ್ಪ, ಶ್ವೇತ, ರೇವಣ್ಣಸ್ವಾಮಿ

ಶ್ರೀ ರೇವಣ್ಣಸ್ವಾಮಿ ಬಿ. ಎಂ.ಕಾಂ

4ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷವಾಯಿತು
ಸದಾ ನಿಮ್ಮ ನೆನಕಿನಲ್ಲಿರುವ
ಜಯಲಕ್ಷ್ಮಿ.ಎಂ.(ಧರ್ಮಪತ್ನಿ) ಶಿಕ್ಷಣ ಇಲಾಖೆ, ಹರ್ಷ.ಎನ್ & ದರ್ಶನ್.ಎನ್ (ಮಕ್ಕಳು).
ಶಿವಣ್ಣ.ಹೆಚ್.ಎಂ
ಡಾ|| ರವಿಕುಮಾರ್.ಎಂ
ಅನಿಲ್ ಕುಮಾರ್.ಎಂ
ಸುನೀಲ್ ಕುಮಾರ್.ಎಂ,
ವಿಜಯ್
ಮತ್ತು ಕುಟುಂಬದವರು

ನರಸಿಂಹಮೂರ್ತಿ.ಹೆಚ್
ಜನನ: 04.07.1972 ಮರಣ: 19.07.2020

6ನೇ ವರ್ಷದ ಸವಿನೆನಪು



ಶ್ರೀ ಸಿ.ದೇವರಾಜು (ರೇಷ್ಮೆ ಇಲಾಖೆ)
ದುಃಖತಪ್ತ: ಶ್ರೀಮತಿ ಸಾವಿತ್ರಮ್ಮ, ಮಗಳು–ಅಳಿಯ ಮತ್ತು ಮೊಮ್ಮಕ್ಕಳು, ದಟ್ಟಗಳ್ಳಿ, ಮೈಸೂರು.

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ನಿನ್ನ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನೀನು ತೋರಿದ ಪ್ರೀತಿ ಅಜರಾಮರ. ನಿನ್ನ ದಿವ್ಯ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು:
ಜಯ ಸಂತೋಷ್‌ಕುಮಾರ್
ಸುಮಿತ್ರ ಕುಮಾರ
ಹೇಮಪ್ರಭ, ಶಮಂತ್
ಕುಟುಂಬವರ್ಗದವರು
ಮಹದೇಶ್ವರ ಬಡಾವಣೆ
ಮೈಸೂರು–16.
9945973735

ಎಂ.ಮೋಹನ್
ಜನನ: 11–05–2003
ಮರಣ: 19–07–2017

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರಾದ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣಾ ಹೋಬಳಿ, ಲಲಿತಾದ್ರಿಪುರ ಗ್ರಾಮದ ವಾಸಿಯಾದ; ಹಾಲೀ ಮಾಧವಗೆರೆಯಲ್ಲಿ ವಾಸವಾಗಿರುವ ಮಹದೇವಪ್ಪ ಬಿನ್ ಲೇ|| ಚಿಕ್ಕಣ್ಣನವರು ಅವರ ತಾಯಿಯವರಾದ ಚಿನ್ನಮ್ಮ ಮತ್ತು ಸಹೋದರರ ವಿರುದ್ಧ ಮೈಸೂರಿನ ಗೌರವಾನ್ವಿತ ಸಿವಿಲ್ ಜಡ್ಜ್ ಹಿರಿಯ ಶ್ರೇಣಿ ಮತ್ತು ಸಿ. ಜೆ. ಎಂ. ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ: 253/2024ರಂತೆ ಭಾಗಾಂಶ ಕೋರಿ ದಾವೆಯನ್ನು ಹೂಡಿದ್ದು, ಸದರಿ ದಾವೆ ದಿನಾಂಕ: 30–07–2024ಕ್ಕೆ ವಿಚಾರಣೆಗಾಗಿ ಮುಂದೂಡಲ್ಪಟ್ಟಿದೆ. ಸದರಿ ದಾವೆಯಲ್ಲಿನ ಅನುಸೂಚಿ ಸ್ವತ್ತುಗಳಲ್ಲಿ ಈ ತಿಳುವಳಿಕೆ ಪತ್ರದ ಅನುಸೂಚಿ ಸ್ವತ್ತು ಸಹಾ ಒಂದಾಗಿದ್ದು, ಸದರಿ ಸ್ವತ್ತನ್ನು ಚಿನ್ನಮ್ಮನವರ ಮಗಳಾದ ಸುಮಾರವರು ಮಾರಾಟ ಮಾಡಲು ಹುನ್ನಾರ ನಡೆಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಯಾರೂ ಯಾವುದೇ ರೀತಿಯ ವ್ಯವಹಾರವನ್ನೂ ಅನುಸೂಚಿ ಸ್ವತ್ತಿನ ಸಂಬಂಧ ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ.

ಅನುಸೂಚಿ ಸ್ವತ್ತಿನ ವಿವರ: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣಾ ಹೋಬಳಿ, ಮಾಧವಗೆರೆ ಗ್ರಾಮಕ್ಕೆ ಸೇರಿದ ಸರ್ವೇ ನಂ. 110ರ ಒಟ್ಟು ವಿಸ್ತೀರ್ಣ 2ಎಕರೆ 34ಗುಂಟೆ ಜಮೀನು ಈ ಸಾರ್ವಜನಿಕ ತಿಳುವಳಿಕೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.

Sd/- D. Jagadeesh, Advocate
No. 448; New No. F5, SBN Complex, 1st Floor, M. G. Road, Agrahara, Mysuru.
Contact: 98866 23833,
email: jagadeeshdevaraju@gmail.com
ಸ್ಥಳ: ಮೈಸೂರು, ದಿನಾಂಕ: 18–07–2024

ಮೈಸೂರು ಮಿತ್ರ 45 ಓದುಗರ ಗಮನಕ್ಕೆ

ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ದಾಮೋದರ್ ರಾವ್ ಶಿಂಧೆ ಆರ್. ರವರ ಮಗ ಶ್ರೀ. ಅಶೋಕ್ ರಾವ್ ಶಿಂಧೆ ಡಿ. ರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಸರಸ್ವತಿಪುರಂ ತೊಣಚಿಕೊಪ್ಪಲು 4ನೇ ಹಂತ (SWT ಕೊಪ್ಪಲು 4ನೇ ಹಂತ) ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 673, [ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಿಐಡಿ ನಂ. 134822 ಮತ್ತು ವಾರ್ಡ್ ನಂ. 43] ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ:60 ಅಡಿ ಮತ್ತು ಉತ್ತರ–ದಕ್ಷಿಣ: 40 ಅಡಿ. ಒಟ್ಟು ವಿಸ್ತೀರ್ಣ: 2,400 ಚದರ ಅಡಿಗಳುಳ್ಳ ಸ್ವತ್ತಿಗೆ ಚಕ್ಕುಬಂದಿ, ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 671/ಬಿ, ಉತ್ತರಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 674, ಮತ್ತು ದಕ್ಷಿಣಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 672/ಎ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1458/ಎ,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ,
ಮೈಸೂರು. ಮೊ: 9844640641
email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್. ಜನಾಬ್ ಅಬ್ದುಲ್ ಮಜೀದ್ ಖಾನ್, ರವರ ಮಗ ಜನಾಬ್ ಖಮರುಜಮಾ ಖಾನ್ ಸೂರ್ಯಾನಿ, ರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ, ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಮೃಗಾಲಯ ರಸ್ತೆಯಲ್ಲಿರುವ ವಾಣಿಜ್ಯ ಸ್ವತ್ತಿನ ನಂ. No. 947 N-21, 912/B N1/B, [ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಿಐಡಿ ನಂ. 10544 ಮತ್ತು ವಾರ್ಡ್ ನಂ. 52] ಇದರಲ್ಲಿರತಕ್ಕ ಕಟ್ಟಡ ವನ್ನೊಳಗೊಂಡ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 25.67 ಮೀಟರ್ ಮತ್ತು ಉತ್ತರ–ದಕ್ಷಿಣ: [8.07 ಮೀಟರ್ + 8.38 ಮೀಟರ್] / 2, ಒಟ್ಟು ವಿಸ್ತೀರ್ಣ: 208.58 ಚದರ ಮೀಟರ್‌ಗಳು. ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಗಲ್ಲಿ, ಉತ್ತರಕ್ಕೆ: ಜನಾಬ್ ಅಬ್ದುಲ್ ವಾಜಿದ್ ಖಾನ್ ಸೂರ್ಯಾನಿ ರವರಿಗೆ ಸೇರಿರುವ ನಂ. 912, N-22, 912/A, N-1/A, 912/1, N-22/A ರ ಸ್ವತ್ತು ಮತ್ತು ದಕ್ಷಿಣಕ್ಕೆ : ಖಾಸಗಿ ಸ್ವತ್ತು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1458/ಎ,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ,
ಮೈಸೂರು. ಮೊ: 9844640641
email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು ದೊಡ್ಡ ಕೌಲಂದೆ ಹೋಬಳಿ, ನೇರಳೆ ಗ್ರಾಮದ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಜಮೀನುಗಳನ್ನು ಸಂಬಂಧಪಟ್ಟ ಮಾಲೀಕರಿಂದ ಖರೀದಿಸುತ್ತಿದ್ದು/ಕ್ರಯಕ್ಕೆ ಪಡೆಯುತ್ತಿದ್ದು ಸದರಿ ಸ್ವತ್ತಿನಲ್ಲಿ ಹಾಗು ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ವಿಭಾಗದ ಹಕ್ಕು, ಜೀವನಾಂಶದ ಹಕ್ಕು, ಆಧಾರ, ಭೋಗ್ಯ, ಕ್ರಯದ ಕರಾರು, ಇನ್ನಿತರೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿಗಳಿಗೆ ಸಂಬಂಧಪಟ್ಟಂತೆ ಯಾರದೆ, ಯಾವುದೇ ತರಹದ ಹಕ್ಕು, ಅಧಿಕಾರ, ಹಿತಾಸಕ್ತಿಗಳು ಇದ್ದಲ್ಲಿ ಸದರಿ ತಕರಾರು/ಆಕ್ಷೇಪಣೆಗಳ ಬಗ್ಗೆ ಖುದ್ದಾಗಿ ಅಥವಾ ವಕೀಲರ ಮೂಲಕ 10 (ಹತ್ತು) ದಿನಗಳೊಳಗೆ ಸಲ್ಲಿಸುವುದು ಸದರಿ ದಿನಗಳಲ್ಲಿ ಹಕ್ಕು ಹಿತಾಸಕ್ತಿಗಳ ಬಗ್ಗೆ ಯಾವುದೇ ತಕರಾರು/ ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಕಾನೂನಿನಡಿ ಷೆಡ್ಯೂಲ್ ಸ್ವತ್ತನ್ನು ವ್ಯವಹರಿಸಲು ಮುಂದುವರೆಯುವುದು. ವ್ಯವಹರಿಸಿದ ನಂತರ ಯಾವುದೇ ತಕರಾರು/ ಆಕ್ಷೇಪಣೆಗಳು ಬಂದಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲೋಕು. ದೊಡ್ಡ ಕೌಲಂದೆ ಹೋಬಳಿ ನೇರಳೆ ಗ್ರಾಮಕ್ಕೆ ಸೇರಿದ ಸರ್ವೆ ನಂ.212ರ 4.21ಗುಂಟೆ, ಸರ್ವೆ ನಂ.261/4ರ 0.38 ಗುಂಟೆ, ಸರ್ವೆ ನಂ.261/6ರ 0.22 ಗುಂಟೆ, ಸರ್ವೆ ನಂ.265/2 ರ 1.27 ಗುಂಟೆ, ಸರ್ವೆ ನಂ. 322/1 ರ 0.35ಗುಂಟೆ,. ಸರ್ವೆ ನಂ. 322/4 ರ 0.29 ಗುಂಟೆ, ಸರ್ವೆ ನಂ.322/5 ರ 0.38.5 ಗುಂಟೆ, ಸರ್ವೆ ನಂ. 322/2 ರ 0.02 ಗುಂಟೆ, ಸರ್ವೆ ನಂ.324/1 ರ 0.14ಗುಂಟೆ, ಸರ್ವೆ ನಂ.364/2 ರ 1.04ಗುಂಟೆ, ಸರ್ವೆನಂ. 324/3 ರ 0.08 ಗುಂಟೆ, ಸರ್ವೆ ನಂ. 326/5 ರ 0.22 ಗುಂಟೆ. ಸರ್ವೆ ನಂ. 326/6 ರ 0.15 ಗುಂಟೆ, ಸರ್ವೆ ನಂ. 328/1 ರ 0.25 ಗುಂಟೆ, ಸರ್ವೆನಂ. 328/6 ರ 0.13ಗುಂಟೆ, ಸರ್ವೆನಂ. 331/2ಎ ರ 0.10 ಗುಂಟೆ, ಸರ್ವೆ ನಂ. 332/2ರ 0.26 ಗುಂಟೆ, ಸರ್ವೆನಂ. 332/2 ರ 0.22 ಗುಂಟೆ, ಸರ್ವೆನಂ. 332/1ರ 0.22 ಗುಂಟೆ, ಸರ್ವೆನಂ. 332/1 ರ 0.22 ಗುಂಟೆ, ಸರ್ವೆನಂ. 332/1 0.22 ಗುಂಟೆ, ಸರ್ವೆ ನಂ. 332/4 ರ 0.29 ಗುಂಟೆ, ಸರ್ವೆ ನಂ.335/5 ರ 0.26 ಗುಂಟೆ, ಸರ್ವೆ ನಂ.353/1ಎ ನ 0.26 ಗುಂಟೆ, ಸರ್ವೆ ನಂ.353/1 ಬಿ ನ 0.19 ಗುಂಟೆ, ಸರ್ವೆ ನಂ. 353/3 ರ 1.05 ಗಂಟೆ, ಸರ್ವೆ ನಂ.353/2ರ 2.17 ಗುಂಟೆ, ಸರ್ವೆ ನಂ.355/2 ರ 0.20 ಗುಂಟೆ, ಸರ್ವೆ ನಂ.357 ರ 2.08 ಗುಂಟೆ, ಸರ್ವೆ ನಂ.358 ರ 1.28 ಗುಂಟೆ, ಸರ್ವೆ ನಂ.360 ರ 0.39 ಗುಂಟೆ, ಸರ್ವೆ ನಂ.361/1 ರ 0.24 ಗುಂಟೆ, ಸರ್ವೆ ನಂ. 361/2ರ 0.20 ಗುಂಟೆ, ಸರ್ವೆ ನಂ.362ರ, 1.18 ಗುಂಟೆ, ಸರ್ವೆ ನಂ.363/1ರ 0.11 ಗುಂಟೆ, ಸರ್ವೆ ನಂ.363/4ರ 1.12 ಗುಂಟೆ, ಸರ್ವೆ ನಂ.363/5ರ 1.01 ಗುಂಟೆ, ಸರ್ವೆ ನಂ.364/3ರ 1.09 ಗುಂಟೆ, 369/2ರ 0.19 ಗುಂಟೆ, ಸರ್ವೆ ನಂ. 377/2ಎನ 0.19 ಗುಂಟೆ, ಸರ್ವೆ ನಂ.377/1ರ 0.19 ಗುಂಟೆ, ಸರ್ವೆ ನಂ.377/2ಬಿನ 0.19 ಗುಂಟೆ, ಸರ್ವೆ ನಂ.379/1ಎನ 0.14 ಗುಂಟೆ, ಸರ್ವೆ ನಂ.379/1ಬಿನ 0.07 ಗುಂಟೆ, ಸರ್ವೆ ನಂ.379/5ನ 0.10 ಗುಂಟೆ, ಸರ್ವೆ ನಂ.380ರ 1.22 ಗುಂಟೆ, ಸರ್ವೆ ನಂ.381/2ರ 0.39 ಗುಂಟೆ, ಸರ್ವೆ ನಂ.494/1ರ 1.28 ಗುಂಟೆ, ಸರ್ವೆ ನಂ.451ರ 1.09 ಗುಂಟೆ, ಸರ್ವೆ ನಂ.463/1ರ 0.23 ಗುಂಟೆ, ಸರ್ವೆ ನಂ. 463/2ರ 0.11 ಗುಂಟೆ, ಸರ್ವೆ ನಂ.463/1ರ 0.23 ಗುಂಟೆ, ಸರ್ವೆ ನಂ. 463/2ರ 0.11 ಗುಂಟೆ, ಸರ್ವೆ ನಂ.381/1ರ 1.11 ಗುಂಟೆ, ಸರ್ವೆ ನಂ.379/3 ರ 0.05 ಗುಂಟೆ, ಸರ್ವೆ ನಂ. 331/2ಬಿನ 0.06 ಗುಂಟೆ, ಸರ್ವೆ ನಂ.331/2ಸಿನ 0.09 ಗುಂಟೆ, ಸರ್ವೆ ನಂ.379ರ 0.21 ಗುಂಟೆ, ಸರ್ವೆ ನಂ. 363/3ರ 0.39 ಗುಂಟೆ, ಸರ್ವೆ ನಂ. 354/2ಎನ 0.04 ಗುಂಟೆ, ಸರ್ವೆ ನಂ. 379/2ರ 0.32 ಗುಂಟೆ, ಸರ್ವೆ ನಂ.33ರ 0.20 ಗುಂಟೆ, ಸರ್ವೆ ನಂ.332/1ರ 0.22 ಗುಂಟೆ, ಸರ್ವೆ ನಂ.354/1ರ 0.30 ಗುಂಟೆ, ಸರ್ವೆ ನಂ. 340/3ರ 0.08.12 ಗುಂಟೆ, ಸರ್ವೆ ನಂ.340/2ರ 0.03.04 ಗುಂಟೆ, ಸರ್ವೆ ನಂ. 340/1ರ 0.16 ಗುಂಟೆ, ಸರ್ವೆ ನಂ. 375/1ರ 0.22 ಗುಂಟೆ, ಸರ್ವೆ ನಂ.331/2ಎನ 0.10 ಗುಂಟೆ, ಸರ್ವೆ ನಂ.332/2ರ 0.22 ಗುಂಟೆ, ಸರ್ವೆ ನಂ.382ರ 1.32 ಗುಂಟೆ, ಸರ್ವೆ ನಂ.381/1ರ 1.11 ಗುಂಟೆ, ಸರ್ವೆ ನಂ.354/2ಬಿನ 0.04 ಗುಂಟೆ, ಸರ್ವೆ ನಂ.498ರ 0.07 ಗುಂಟೆ, ಸರ್ವೆ ನಂ.378/2ರ 1.04 ಗುಂಟೆ, ಸರ್ವೆ ನಂ.378/1ರ 0.37 ಗುಂಟೆ, ಸರ್ವೆ ನಂ. 380ರ 1.27 ಗುಂಟೆ, ಸರ್ವೆ ನಂ.331/2ಎನ 0.10 ಗುಂಟೆ, ಸರ್ವೆ ನಂ. 381/2ರ 0.39 ಗುಂಟೆ, ಸರ್ವೆ ನಂ. 377/2ಎನ 0.19 ಗುಂಟೆ, ಸರ್ವೆ ನಂ. 377/1ರ 0.19 ಗುಂಟೆ, ಸರ್ವೆ ನಂ. 377/3ರ 0.18 ಗುಂಟೆ, ಸರ್ವೆ ನಂ. 377/2ಬಿನ 0.19 ಗುಂಟೆ, ಸರ್ವೆ ನಂ.364/2ರ 0.24 ಗುಂಟೆ, ಸರ್ವೆ ನಂ. 325/2ರ 2.06 ಗುಂಟೆ ಜಮೀನುಗಳು.

ಸಹಿ/– **ಎಸ್. ಸಿದ್ದರಾಜು.** ಬಿ.ಕಾಂ., ಎಲ್.ಎಲ್.ಬಿ., ವಕೀಲರು,
296/3, ಲಕ್ಷ್ಮಿ ವಿಲಾಸ ರಸ್ತೆ, ಕರೂರು ವೈಶ್ಯ ಬ್ಯಾಂಕ್ ಎದುರು,
ದೇವರಾಜ ಮೊಹಲ್ಲಾ, ಮೈಸೂರು–04. ಮೊ: 9900655615, 9845784090

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಹನೂರು
Telephone:08224-200130 E-mail:talukpanchyathanur@gmail.com

ಮರು ಇ–ಟೆಂಡರ್ ಪ್ರಕಟಣೆ

ಹನೂರು ತಾಲ್ಲೂಕು ಪಂಚಾಯಿತಿ ಕಛೇರಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕ (ಗ್ರಾ.ಉ) ರವರ ಪ್ರವಾಸಕ್ಕಾಗಿ 2024–25ನೇ ಸಾಲಿನ ಆಗಸ್ಟ್–2024 ರಿಂದ ಮಾರ್ಚ್–2025 ರವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾಸಿಕ ಬಾಡಿಗೆ ಆಧಾರದ ಮೇಲೆ ಹವಾನಿಯಂತ್ರಣ ಸಹಿತ ವಾಹನ ಸೇವೆ (ಚಾಲಕ ಸಹಿತ) ಯನ್ನು ಹೊರಗುತ್ತಿಗೆ ಸಂಸ್ಥೆಯ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಅಧಿನಿಯಮ 1999/2000 ರನ್ವಯ ಪಡೆಯಲು ಇ–Procurement ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಯವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು https://kppp.karnataka.gov.in, ಪೋರ್ಟಲ್ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಿ ದಿನಾಂಕ: 15–07–2024ರಿಂದ 26–07–2024 ರ ಮಧ್ಯಾಹ್ನ 3–00 ಗಂಟೆಯೊಳಗೆ ಟೆಂಡರ್ ಫಾರಂ ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka. gov.in ಹಾಗೂ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹನೂರು ರವರ ಕಛೇರಿ ದೂರವಾಣಿ ಸಂಖ್ಯೆ : 08224–200130 ಸಂಪರ್ಕಿಸಬಹುದು..

ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಸಂಖ್ಯೆ : ತಾ.ಪಂ.ಹ/ಆಡಳಿತ/ಹೊ.ಗು.ವಾ.ಸೇ./ 01/ 2024 25 ದಿನಾಂಕ: 15 07 2024.
EMD ಮೊತ್ತ	ರೂ.15000/–
KPPP ಪೋರ್ಟಲ್‌ನಲ್ಲಿ ದಾಖಲೆಗಳನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ	26–07–2024 ಮಧ್ಯಾಹ್ನ 3 ಗಂಟೆಯೊಳಗೆ
KPPP ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	29–07–2024 ಮಧ್ಯಾಹ್ನ 3 ಗಂಟೆಗೆ
KPPP ಪೋರ್ಟಲ್ ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ	30–07–2024 ಬೆಳಿಗ್ಗೆ 11 ಗಂಟೆಗೆ
ಸಂಪರ್ಕಿಸಬೇಕಾದ ಅಧಿಕಾರಿಯ ವಿವರ (ಕಛೇರಿ ವೇಳೆಯಲ್ಲಿ ಮಾತ್ರ)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹನೂರು.

ಟೆಂಡರ್‌ನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು e-procurement ಪೋರ್ಟಲ್‌ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ತಾಲ್ಲೂಕು ಪಂಚಾಯಿತಿ ಹನೂರು
ಸಂ:ವಾಸಾಸಂಇಜಾ.ನಗರ:117:2024–25